ಮಾಡಿಕೊಂಡು ಬರುತ್ತಾ ಇರತಕ್ಕ ಬಡ ಮತ್ತು ಚಿಕ್ಕ ಚಿಕ್ಕ ರೈತರನ್ನು ಓಡಿಸಲು ಫಾರೆಸ್ಟ್ ಇಲಾಖೆಯವರು ಪ್ರಯತ್ನ ಮಾಡುತ್ತಾ ಇದ್ದಾರೆ. ಇದರ ಬಗ್ಗೆ ಸರ್ಕಾರ ಏನು ನಿಲುವನ್ನು ಅನುಸರಿಸುತ್ತಿದೆ ಎನ್ನುವ ಬಗ್ಗೆ ಸ್ಪಷ್ಟಪಡಿಸಬೇಕು. ನಾವು ಹೋರಾಟ ಮಾಡಬೇಕೇ? ಅವರನ್ನು ಬಿಡಿಸಿದರೆ ನಾವು ಜೈಲಿಗೆ ಬರುವುದಕ್ಕೆ ತಯಾರಾಗಿದ್ದೇವೆ.

Mr. DEPUTY SPEAKER.—I will see that it is examined as early as possible.

Licensing Construction of Cinema Houses in K. G. Circle, Bangalore

ಶ್ರೀ ಕಾಗೋಡು ತಿಮ್ಮಪ್ಪ.—ಕೆಂಪೇಗೌಡ ಸರ್ಕಲ್‌ನಲ್ಲಿ ಅಜುಬಾಜಿನಲ್ಲಿ ಸಿನಿಮಾ ಥಿಯೇಟರುಗಳನ್ನು ಹೊಸದಾಗಿ ಕಟ್ಟಲಿಕ್ಕೆ ಲೈಸೆನ್ಸ್ ಕೊಡುವುದಕ್ಕೆ ಅಧಿಕಾರಿಗಳು ಕುಮ್ಮಕ್ಕು ಕೊಡುತ್ತಾ ಇದ್ದಾರೆ. ಇದರ ಬಗ್ಗೆ ನಾನು ಪ್ರಶ್ನೆ ಎತ್ತಿದಾಗ ಸಂಸದೀಯ ವ್ಯವಹಾರ ಸಚಿವರು ಹೇಳಿಕೆ ಕೊಡುತ್ತೇವೆಂದು ಹೇಳಿದರು. ಒಂದು ವಾರವಾಗಿದೆ ಇನ್ನೂ ಹೇಳಿಕೆ ಬರಲಿಲ್ಲ. ಅಲ್ಲಿ ಬೇಕಾದಷ್ಟು ಸಿನಿಮಾ ಟಾಕೀಸುಗಳು ಆಗಿರುವುದರಿಂದ ಜನ ಓಡಾಡುವುದಕ್ಕೆ, ಮತ್ತು ವಾಹನ ಸಂಚಾರಕ್ಕೆ ವಿಪರೀತವಾಗಿ ತೊಂದರೆಯಾಗಿದೆ. ಮಿನಿ ಥಿಯೇಟರುಗಳು ಉಪ್ಪರಿಗೆ ಥಿಯೇಟರುಗಳು ಹೀಗೆ 4-5 ಥಿಯೇಟರುಗಳಿಗೆ ಅಧಿಕಾರಿಗಳು ನಾನಾ ತರದ ಮಾಮೂಲಿಗೆ ಒಳಗಾಗಿ ಅನುಮತಿ ಕೊಡುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆಂದು ಖಚಿತವಾದ ವರದಿ ಬಂದಿದೆ. ಇದು ಮುಖ್ಯವಾದ ವಿಷಯ, ಸರ್ಕಾರ ಇದರ ಬಗ್ಗೆ ಯಾವ ಅಭಿಪ್ರಾಯ ಹೊಂದಿದೆ ಎಂಬುದು ಬಹಳ ಮುಖ್ಯವಾದುದು. ಆದಷ್ಟು ಬೇಗ ಹೇಳಿಕೆಯನ್ನು ದಯಮಾಡಿ ಸರ್ಕಾರ ಕೊಡುವಂತೆ ಮಾಡಬೇಕು.

Mr. DEPUTY SPEAKER.—I will see how best it could be taken up as early as possible. The matter was raised earlier also. Now we will go to the next item.

Sri H. M. CHANNABASAPPA.—I promised to make a statement tomorrow after question hour. Unfirtunately, I am going to Delhi tomorrow. I have sent for that file. If you so permit me, I shall make a statement today evening.

Mr. DEPUTY SPEAKER.—The Hon. Minister can make a statement at 6.15 P.M. today soon after the financial business is over.

BUDGET ESTIMATES FOR 1974-75
DEMANDS FOR GRANTS

Demand No. 39, 42, 45, 46.

Sri N. CHIKKE GOWDA (Minister for Agriculture).—Sir, on the recommendation of the Governor, I beg to move :

" That a sum not exceeding Rs. 7,76.45,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 39 " Agriculture (Excluding Horticulture) ".

(SRI N. CHIKKE GOWDA)

"That a sum not exceeding Rs. 3,62,40,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 42 "Soil and Water Conservation."

"That a sum not exceeding Rs. 3,67,43,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 45 "Animal Husbandry."

"That a sum not exceeding Rs. 7,02,87,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 46 "Dairy Development."

Mr. DEPUTY SPEAKER.—Motion moved'—

"That a sum not exceeding Rs. 7,76,45,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 39 "Agriculture (Excluding Horticulture)".

"That a sum not exceeding Rs. 3,62,40,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 42 "Soil and Water Conservation."

"That a sum not exceeding Rs. 3,67,43,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 45 "Animal Husbandry".

"That a sum not exceeding Rs. 7,02,87,000 inclusive o fthe sum granted 'on account' be granted to the Government defray the charges which will come in course of payment during the financial year ending 31st day of March 1975 in respect of Demand No. 46 "Dairy Development".

† ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಮಾನ್ಯ ಅಧ್ಯಕ್ಷರೇ, ನಮ್ಮ ಕೃಷಿ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತಾ, ಎರಡು ಮಾತು ಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಕಾರಣ, ಇವೊತ್ತು, ನಮ್ಮ ರಾಜ್ಯದಲ್ಲಿ ಕೃಷಿ ಕ್ಷೇತ್ರ ಬಹಳವಾಗಿ ವಂಚನೆಗೆ ಒಳಗಾಗಿದೆ. ಮತ್ತು ಆ ಕ್ಷೇತ್ರವನ್ನು ನಿರ್ಲಕ್ಷ್ಯ ಮಾಡಲಾಗಿದೆ. ಜೊತೆಗೆ ಇಂದು ಈ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸುವಾಗ ಸಂಬಂಧಪಟ್ಟ ಸಚಿವರು ತಮ್ಮ ಗಮನವನ್ನು ಬೇರೆ ಕಡೆಗೆ ಹರಿಸಿದ್ದರು. ಕಾರಣ ಅವರಿಗೆ ಕೃಷಿ ಕ್ಷೇತ್ರದಲ್ಲಿ ಯಾವ ಆತುರತೆಯೂ

ಸಹ ಕಂಡುಬರಲಿಲ್ಲ; ಇದಕ್ಕೆ ಕಾರಣವೇನೆಂದರೆ ಕೃಷಿ ಕ್ಷೇತ್ರದಲ್ಲಿ ತೊಡಗಿರುವ ಜನರೆಲ್ಲ ಗ್ರಾಮೀಣ ಪ್ರದೇಶದವರಾಗಿರುವುದು. ಮುಖ್ಯವಾಗಿ ಇಡೀ ಕೃಷಿ ಕ್ಷೇತ್ರ ರಾಜ್ಯಸರ್ಕಾರದಿಂದ ಬಹಳ ಉಪೇಕ್ಷಿಸಲ್ಪಟ್ಟಿದೆ ಎಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು; ಇವೊತ್ತು ನಮ್ಮ ರಾಜ್ಯ ಸರ್ಕಾರಕ್ಕೆ ಶೇಕಡ 60 ರಷ್ಟು ಆದಾಯ ಕೃಷಿ ಕ್ಷೇತ್ರದಿಂದ ಬರುತ್ತಿದೆಯಾದರೂ ಸಹ ಅದರ ಕಡೆಗೆ ಸರ್ಕಾರದವರು ಅಷ್ಟೊಂದು ನಿಗಾ ಕೊಟ್ಟಿಲ್ಲ. ಅಲ್ಲದೆ ಇಂದು ಶೇಕಡ 80 ರಷ್ಟು ಜನರು ಕೃಷಿ ಯನ್ನೇ ಅವಲಂಬಿಸಿದ್ದಾರೆ; ಈ ಕಾರಣದಿಂದ ಅವರ ಅಭಿವೃದ್ಧಿ ಬಗ್ಗೆ ನಾವು ಏನು ಕೆಲಸ ಮಾಡಿ ದ್ದೇವೆ, ನಮ್ಮ ಕೊಡುಗೆ ಏನು ಎಂಬುದು ಮುಖ್ಯವಾದ ವಿಷಯ. ಈಗಾಗಲೇ ಮಾನ್ಯ ಸಚಿವರು ಒಂದು ವರದಿಯನ್ನು ತಮ್ಮ ಇಲಾಖೆಯಿಂದ ಕೊಟ್ಟಿದ್ದಾರೆ. ಅದರಲ್ಲಿ ಹೇಳಿರುವ ಪ್ರಕಾರ ನೋಡುವುದಾದರೆ, ನಮ್ಮ ರಾಜ್ಯದಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿ 104 ಲಕ್ಷ ಹೆಕ್ಟೇರ್ ನಷ್ಟು ಇದ್ದರೆ, ನೀರಾವರಿಗೆ ಒಳಪಟ್ಟಿರುವುದು ಇದರಲ್ಲಿ ಶೇಕಡ 14 ರಷ್ಟು ಮಾತ್ರ. ಇನ್ನು ಬೆಳೆಗಳ ಪ್ರಮಾಣವನ್ನು ತೆಗೆದುಕೊಂಡರೆ, 24 ಲಕ್ಷ ಹೆಕ್ಟೇರ್‌ನಲ್ಲಿ ಜೋಳವನ್ನು ಬೆಳೆಯಲಾಗು ತ್ತಿದೆ, ಇದೇ ನಮ್ಮ ರಾಜ್ಯದ ಪ್ರಮುಖವಾದಂಥ ಬೆಳೆ; ತದನಂತರ ಭತ್ತ ಮತ್ತು ರಾಗಿ ಬರುತ್ತದೆ. 11 ಲಕ್ಷ ಹೆಕ್ಟೇರ್‌ನಲ್ಲಿ ಭತ್ತವನ್ನು ಮತ್ತು 9.6 ಲಕ್ಷ ಹೆಕ್ಟೇರ್‌ನಲ್ಲಿ ರಾಗಿಯನ್ನು ಬೆಳೆಯಲಾಗು ತ್ತಿದೆ. ಅದೇ ರೀತಿ ಹತ್ತಿ ಬೆಳೆಯುವ ಪ್ರದೇಶ 10.77 ಲಕ್ಷ ಹೆಕ್ಟೇರ್ ಇದೆ. ಎಣ್ಣೆಬೀಜಗಳನ್ನು ಬೆಳೆಯುವ ಪ್ರದೇಶ 12.30 ಲಕ್ಷ ಹೆಕ್ಟೇರ್‌ನಷ್ಟು ಇದೆ. ಸುಮಾರು 1.06 ಲಕ್ಷ ಹೆಕ್ಟೇರ್ ಪ್ರದೇಶ ದಲ್ಲಿ ಕಬ್ಬನ್ನು ಬೆಳೆಯಲಾಗುತ್ತಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕೃಷಿ ಕ್ಷೇತ್ರ ನಮ್ಮ ರಾಜ್ಯ ದಲ್ಲಿ ಇದ್ದರೂ ಸಹ ಆಹಾರದ ಕೊರತೆ ಮಾತ್ರ ಹೋಗಿಲ್ಲ. ಅನ್ನದ ಬವಣೆಯಿಂದ ನಾವು ದೂರ ವಾಗಿಲ್ಲ. ಅನ್ನಕ್ಕಾಗಿ ಬೇರೆಯವರ ಕಡೆ ಕೈನೀಡುವುದು ತಪ್ಪಲಿಲ್ಲ? ಇದೊಂದು ವಿಪರ್ಯಾಸದಿಂದ ಕೂಡಿದ ಪ್ರಶ್ನೆಯಾಗಿದೆ; ನಮ್ಮಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಕೃಷಿ ಕ್ಷೇತ್ರವಿದ್ದರೂ ಸಹ ಅದರ ಕಡೆಗೆ ವಿಶೇಷವಾದಂಥ ಗಮನವನ್ನು ಸರ್ಕಾರದವರು ಹರಿಸುವುದರ ಮೂಲಕ ರಾಜ್ಯದ ಜನತೆಗೆಲ್ಲಾ ಕನಸುಗಳನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಮತ್ತು ಅನ್ನದ ಪ್ರಶ್ನೆಯನ್ನು ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಿಲ್ಲ; ಇಂದು ವ್ಯವಸಾಯ ಕ್ಷೇತ್ರದಲ್ಲಿರುವ ಜನತೆಗೆ ಆಲೋಚನೆ ಮಾಡುವ ಪ್ರಜ್ಞೆ ಬಂದಿದೆ. ಆದರೆ ಎಲ್ಲರಿಗೂ ಬಂದಿಲ್ಲ. ಕೆಲವರು ಇಂದು ಟ್ರಾಕ್ಟರ್ ಗಳನ್ನು, ಟಿಲ್ಲರ್‌ಗಳನ್ನು, ಬುಲ್ಡೋಜರ್‌ಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ ಇವುಗಳನ್ನು ಉಪಯೋಗ ಮಾಡುತ್ತಿರುವವರು ದೊಡ್ಡ ದೊಡ್ಡ ಹಿಡುವಳಿದಾರರೇ ಹೊರತು, ಸಣ್ಣ ಸಣ್ಣ ಹಿಡುವಳಿದಾರರಿಗೆ ಈ ಸವಲತ್ತುಗಳು ಇನ್ನೂ ಸಿಕ್ಕಿಲ್ಲ. ಇಂದು ನಮ್ಮ ರಾಜ್ಯದಲ್ಲಿ ಭೂಹೀನ ಕುಟುಂಬಗಳು ಶೇಕಡ 18.12 ರಷ್ಟು ಇವೆ. ಗೇಣಿ ಜಮೀನು ಮಾಡುವವರು ಶೇಕಡ 15 ರಷ್ಟು ಮಂದಿ ಇದ್ದಾರೆ. ಮತ್ತು 5 ಎಕರೆಗೆ ಒಳಪಟ್ಟಿರತಕ್ಕಂಥ ಹಿಡುವಳಿದಾರರು ಶೇಕಡ 47ರಷ್ಟು ಇದ್ದಾರೆ. ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ವ್ಯವಸಾಯವನ್ನೇ ಶೇಕಡ 80 ರಷ್ಟು ಮಂದಿ ತಮ್ಮ ಕಸುಬನ್ನಾಗಿ ಅವಲಂಬಿಸಿದ್ದಾರೆ. ಆದರೆ ಸರ್ಕಾರದವರು ಒದಗಿಸುತ್ತಿರುವ ರಾಸಾಯನಿಕ ಗೊಬ್ಬರವಾಗಲೀ, ಟ್ರಾಕ್ಟರ್ ಆಗಲಿ, ಟಿಲ್ಲರ್ ಆಗಲೀ, ಬೀಜಗಳಾಗಲೀ ಎಲ್ಲವೂ ದೊಡ್ಡ ದೊಡ್ಡ ಹಿಡುವಳಿದಾರರಿಗೆ ಸಿಗುತ್ತಿವೆಯೇ ಹೊರತು ಸಣ್ಣ ಸಣ್ಣ ಹಿಡುವಳಿದಾರರಿಗೆ ಸಿಗುತ್ತಿಲ್ಲ; ಈ ಕಾರಣದಿಂದ ದೊಡ್ಡ ದೊಡ್ಡ ಜಮೀನುದಾರರೇ ಬಹಳ ಮುಂದೆ ಬರುವುದಕ್ಕೆ ಅವಕಾಶ ವಾಗಿದೆಯೇ ಹೊರತು ಸಣ್ಣ ಸಣ್ಣ ಹಿಡುವಳಿದಾರರಾಗಲೀ, ಭೂಹೀನ ಕಾರ್ಮಿಕರಾಗಲೀ ಮುಂದ ಬರುವುದಕ್ಕೆ ಸಾಧ್ಯವಾಗಿಲ್ಲ; ಮತ್ತು ಅವರ ಒಂದು ಜೀವನ ಮಟ್ಟ ಉತ್ತಮ ಪರಿಸ್ಥಿತಿಗೆ ಬಂದಿಲ್ಲ. ಇಂದು ಭೂಹೀನ ಕಾರ್ಮಿಕರ ವೇತನ ಜಾಸ್ತಿಯಾಗಿಲ್ಲ, ಅವರ ಒಂದು ಯೋಗಕ್ಷೇಮ ವನ್ನು ನೋಡಿಕೊಳ್ಳುವ ಸಲುವಾಗಿ ಯಾವ ಒಂದು ಯೋಜನೆಯನ್ನು ಸಹ ಸರ್ಕಾರದವರು ಇವೊತ್ತಿನವರೆಗೂ ರೂಪಿಸಿಲ್ಲ; ಅವರಿಗೆ ಮನೆಗಳನ್ನು ಕಟ್ಟಿಸಿಕೊಡತಕ್ಕ ಬಗ್ಗೆ ಯೋಜನೆಯನ್ನು ತಯಾರು ಮಾಡಿಲಿಲ್ಲ; ಅದೇ ಕೈಗಾರಿಕಾ ಕ್ಷೇತ್ರದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಇನ್ಶೂರೆನ್ಸ್ ಮುಂತಾದ ಹಲವಾರು ಸವಲತ್ತುಗಳು ಮತ್ತು ರಕ್ಷಣೆಗಳು ಇರುತ್ತವೆ. ಆದರೆ ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಯಾವ ರಕ್ಷಣೆಯೂ ಇಲ್ಲವಾಗಿದೆ. ಇದಕ್ಕೆ ಕಾರಣ ಅವರಲ್ಲಿ ಮುಖಂಡತ್ವ ಇಲ್ಲದಿರುವುದು; ಮತ್ತು ಅವರು ಅವಿದ್ಯಾವಂತರಾಗಿರುವುದು. ಈ ಕಾರಣದಿಂದ ಅವರನ್ನು ಅನೇಕ ರೀತಿಯಿಂದ ಇಂದು ಶೋಷಣೆ ಮಾಡಲಾಗುತ್ತಿದೆ. ಇಂದು ಕೃಷಿ ಕ್ಷೇತ್ರದಲ್ಲಿ ಏನಾದರು ಉತ್ಪಾದನೆ ಜಾಸ್ತಿಯಾಗಿದ್ದರೆ, ಅದಕ್ಕೆ ಕೃಷಿ ಕಾರ್ಮಿಕರೇ ಕಾರಣವಾದ್ದರಿಂದ, ಅದರ ಲಾಭದಲ್ಲಿ ಒಂದು ಪಾಲು ಅವರಿಗೆ ಹೋಗಬೇಕಾಗುತ್ತದೆ. ಆದರೆ ಇದರ ಬಗ್ಗೆಯಾಗಲೀ, ಕೃಷಿ ಕಾರ್ಮಿಕರ ಬಗ್ಗೆಯಾಗಲೀ ಒಂದು ಚಕಾರ ಶಬ್ದವನ್ನೂ ಸಹ ಈ ವರದಿಯಲ್ಲಿ ಪ್ರಸ್ತಾಪ ಮಾಡಿಲ್ಲ. ಈ ಸರ್ಕಾರ ದವರು ಯಾವಾಗಲೂ ಸಮಾಜವಾದದ ಬಗ್ಗೆ ಹೇಳುತ್ತಿರುತ್ತಾರೆ, ಆದರೆ ಅದಕ್ಕೆ ತಕ್ಕಂತೆ ನಡೆದು ಕೊಳ್ಳುತ್ತಿಲ್ಲವೆಂದು ಇಂದು ನಾನು ಆಪಾದನೆ ಮಾಡಬೇಕಾಗಿದೆ. ಈಗಲಾದರೂ ಕೃಷಿ ಕಾರ್ಮಿಕರ

(ಶ್ರೀ ಕಾಗೋಡು ತಿಮ್ಮಪ್ಪ)

ವೇತನವನ್ನು ಜಾಸ್ತಿ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಇಂದು ಕೈಗಾರಿಕಾ ಕ್ಷೇತ್ರದಲ್ಲಿ ಶೇಕಡ 20 ರಷ್ಟು ಮಾತ್ರ ಜನರು ಕೆಲಸ ಮಾಡುತ್ತಿದ್ದಾರೆ, ಇನ್ನುಳಿದ ಶೇಕಡ 80ರಷ್ಟು ಜನರು ಕೃಷಿ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಜನರ ಬಗ್ಗೆ ಸರ್ಕಾರದವರು ಏನು ಮಾಡಿದ್ದಾರೆಂದು ಕೇಳುತ್ತೇನೆ? ಇಂದು ಪ್ರತಿ ತಾಲ್ಲೂಕಿನಲ್ಲಿ ಲೇಬರ್ ಇನ್ಸ್‌ಪೆಕ್ಟರ್ ಎಂದು ಇಟ್ಟಿದ್ದೀರಿ. ಆದರೆ ಕೃಷಿ ಕಾರ್ಮಿಕರ ಯೋಗಕ್ಷೇಮವನ್ನು ನೋಡಿಕೊಳ್ಳುವ ಸಲುವಾಗಿ ಯಾರನ್ನು ಇಟ್ಟಿದ್ದೀರಿ? ಕೃಷಿ ಕಾರ್ಮಿಕರಿಗೆ ಯೋಗ್ಯವಾದ ಕೂಲಿ ಕೊಟ್ಟಿಲ್ಲ, ವಾಸಕ್ಕೆ ಮನೆ ಕಟ್ಟಿಸಿಕೊಟ್ಟಿಲ್ಲ ಎಂದು ಎಷ್ಟು ಜನ ಜಮೀನುದಾರರ ಮೇಲೆ ಕೇಸ್ ಹಾಕಿದ್ದೀರಿ ಎಂಬ ಬಗ್ಗೆ ಅಂಕಿಅಂಶಗಳನ್ನು ಈ ಸದನದ ಮುಂದೆ ಇಡಬೇಕು. ನಮ್ಮ ತಾಲ್ಲೂಕಿನಲ್ಲಿ ಒಂದು ಸಲ ಅಡಿಕೆ ಸುಲಿಯುವ ಕಾರ್ಮಿಕರಿಗೆ ಸರಿಯಾದ ಕೂಲಿಯನ್ನು ಕೊಡಲಿಲ್ಲ ಎಂದು ಲೇಬರ್ ಇನ್ಸ್‌ಪೆಕ್ಟರ್ ಅವರು ಸಂಬಂಧಪಟ್ಟವರ ಮೇಲೆ ಕೇಸ್ ಹಾಕಿದ್ದಕ್ಕೆ ಅವರನ್ನೇ ಕೇಸ್ ಹಾಕಿದ ಮೂರು ದಿವಸಗಳಲ್ಲಿ ವರ್ಗ ಮಾಡಿದ ನಿದರ್ಶನ ಇದೆ. ಮುಖ್ಯವಾಗಿ ಇಂದು ಕೃಷಿ ಕಾರ್ಮಿಕರಲ್ಲಿ ಸಂಘಟನೆ ಇಲ್ಲ, ಅವರದ್ದೇ ಆದ ಒಂದು ಸಂಸ್ಥೆ ಇಲ್ಲವಾದ್ದರಿಂದ ಅವರುಗಳು ತಮಗೆ ಬೇಕಾದಂಥ ರಕ್ಷಣೆಗಳನ್ನು ಕೇಳುವುದಕ್ಕೆ ಬಾಯಿ ಇಲ್ಲದಂತೆ ಆಗಿದೆ. ಇದೇ ಕಾರಣದಿಂದ ಅವರನ್ನು ನಾನಾ ರೀತಿಯಿಂದ ಶೋಷಣೆ ಮಾಡಲು ಈ ನಮ್ಮ ಸಮಾಜ ತಯಾರಾಗಿದೆ. ಇಂದು ದೊಡ್ಡ ದೊಡ್ಡ ಹಿಡುವಳಿದಾರರು ಯಾರು ಯಾರು ಇದ್ದಾರೆ, ಅವರಿಗೆ ಸರ್ಕಾರದ ಎಲ್ಲ ಸೌಲಭ್ಯಗಳು ಸಿಗುತ್ತಿವೆಯೇ ಹೊರತು ಸಣ್ಣ ಸಣ್ಣ ಹಿಡುವಳಿದಾರರಿಗೆ ಯಾವ ರೀತಿಯ ಸೌಲಭ್ಯಗಳೂ ಸಹ ಸಿಗುತ್ತಿಲ್ಲ.

3-00 P.M.

ಇಂದು 10 ಎಕರೆಯಿಂದ 15 ಎಕರೆಯವರೆಗೆ ಇರತಕ್ಕ ಹಿಡುವಳಿದಾರರ ಸಂಖ್ಯೆ ಶೇಕಡಾ 10 ರಷ್ಟು ಇದೆ. 15 ಎಕರೆಯಿಂದ 30 ಎಕರೆಯವರೆಗೆ ಇರತಕ್ಕ ಹಿಡುವಳಿದಾರರ ಸಂಖ್ಯೆ ಶೇಕಡಾ 12ರಷ್ಟು ಇದೆ. ಅವರ ಹತ್ತಿರ ಶೇಕಡಾ 24ರಷ್ಟು ಭೂಮಿ ಇದೆ. 30 ಎಕರೆಯಿಂದ 45 ಎಕರೆಯವರೆಗೆ ಭೂಮಿ ಇರತಕ್ಕ ಹಿಡುವಳಿದಾರರು ಶೇಕಡಾ 4ರಷ್ಟು ಇದ್ದಾರೆ. ಅವರ ಕೈಯಲ್ಲಿ ಶೇಕಡಾ 12ರಷ್ಟು ಭೂಮಿ ಇದೆ. 45 ಎಕರೆಯಿಂದ 60 ಎಕರೆಯವರೆಗೆ ಇರತಕ್ಕಂಥಾ ಹಿಡುವಳಿದಾರರು ಶೇಕಡಾ 1½ಯಷ್ಟು ಇದ್ದಾರೆ. ಕುಟುಂಬದಲ್ಲಿ ಜಾಸ್ತಿ ಜನ ಇರುವವರು ಸಾವಿರಾರು ಎಕರೆ ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇದೆ. ಯಾರು ಇವೊತ್ತು ಭೂಮಿಯಲ್ಲಿ ದುಡಿಯುತ್ತಾನೆಯೋ ಆ ಮನುಷ್ಯನಿಗೆ ನ್ಯಾಯವಾದ ವೇತನವನ್ನು ಕೊಡಿ. ಒಂದು ದಿವಸಕ್ಕೆ ಮೂರು ರೂಪಾಯಿ ಕೂಲಿಯನ್ನು ಕೊಡಿ. ಒಂದು ತಿಂಗಳಿಗೆ 4 ದಿವಸ ರಜಾ ಕೊಡಿ. ಬೇರೆ ಕಾರ್ಮಿಕರಿಗೆ ಏನು ವ್ಯವಸ್ಥೆ ಇದೆ, ಏನು ವೇತನ ಇದೆ, ಇದೇ ವೇತನವನ್ನು ಕೃಷಿ ಕಾರ್ಮಿಕರಿಗೂ ಕೊಡಿ. ಕೃಷಿ ಕಾರ್ಮಿಕರು ವಿದ್ಯಾವಂತರಾಗಿದ್ದರೆ, ಸಂಘಟಿತರಾಗಿದ್ದರೆ ಸಮಾಜದಲ್ಲಿ ಪ್ರಜ್ಞೆಯನ್ನು ಪಡೆದಿದ್ದರೆ ಅವರು ಸರ್ಕಾರದವರನ್ನು ಅಷ್ಟು ಸುಲಭವಾಗಿ ಬಿಡುತ್ತಿರಲಿಲ್ಲ. ಅವರು ಮೂಕ ಪ್ರಾಣಿಗಳ ಹಾಗೆ ಇದ್ದಾರೆ. ಅವರು ಸಂಘಟಿತರಾಗಿಲ್ಲ, ಅವರಿಗೆ ಕೇಳುವುದಕ್ಕೆ ಬಾಯಿಲ್ಲ. ಅವರು ತಮ್ಮ ಸವಲತ್ತಿನ ಬಗ್ಗೆ ಹೋರಾಟ ಮಾಡುತ್ತಿಲ್ಲ. ಆದ್ದರಿಂದ ಇಂಥಾ ಜನರ ಬಗ್ಗೆ ಕಾಳಜಿ ಹೆಚ್ಚು ಇರಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕೃಷಿ ಕಾರ್ಮಿಕರಿಗೆ ಇವೊತ್ತೂ ಕೂಡ ಸರಿಯಾದ ಕೂಲಿಯನ್ನು ಕೊಡುತ್ತಿಲ್ಲ. ಸರಿಯಾದ ವೇತನವನ್ನು ಕೊಡುತ್ತಿಲ್ಲ. ಆದ್ದರಿಂದ ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಕೃಷಿ ಕಾರ್ಮಿಕರ ಬಗ್ಗೆ ಒಂದು ಅವ್ಯವಸ್ಥೆಯ ಪದ್ಧತಿ ಏನಿದೆ ಅದು ಕೊನೆಗಾಣಬೇಕು. ಅವರ ಸ್ಥಿತಿಗತಿಗಳನ್ನು ಉತ್ತಮ ಪಡಿಸತಕ್ಕ ಕಾರ್ಯಗಳು ಕೃಷಿ ಕ್ಷೇತ್ರದಲ್ಲಿ ಆಗಬೇಕು. ಅವರ ಮೂಲ ವೇತನವನ್ನು ಕನಿಷ್ಟ ವೇತನವನ್ನು ಜಾಸ್ತಿ ಮಾಡಬೇಕು. ಕೃಷಿ ಕಾರ್ಮಿಕರ ಯೋಗಕ್ಷೇಮ ಏನಿದೆ ಅದರ ಬಗ್ಗೆ ಇದ್ದಂತಹ ಕಾನೂನುಗಳನ್ನು ಜಾರಿಗೆ ತಂದು ಅವರು ಅದರ ರಕ್ಷಣೆಯನ್ನು ಪಡೆಯಬೇಕಾದರೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಬ್ಬೊಬ್ಬ ಕೃಷಿ ಲೇಬರ್ ಇನ್ಸ್‌ಪೆಕ್ಟರನ್ನು ನೇಮಕ ಮಾಡಿ ಅವರು ಕೃಷಿ ಕಾರ್ಮಿಕರ ಯೋಗಕ್ಷೇಮವನ್ನು ನೋಡಿಕೊಳ್ಳುವಂತೆ ಮಾಡಬೇಕು. ಕೃಷಿ ಕಾರ್ಮಿಕರಿಗೆ ಕಾಲೋನಿಗಳನ್ನು ಮಾಡಬೇಕು. ಅವರಿಗೆ ಮನೆಗಳನ್ನು ಕಟ್ಟಿಸಿಕೊಟ್ಟು ಅವರಿಗೆ ವಸತಿ ಸೌಕರ್ಯವನ್ನು ಒದಗಿಸತಕ್ಕ ಪ್ರಯತ್ನವನ್ನು ಮಾಡಬೇಕು ಬೇರೆ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರಿಗೆ ಇನ್‌ಷ್ಯೂರೆನ್ಸ್ ಮತ್ತು ಪ್ರಾವಿಡೆಂಟ್ ಫಂಡ್ ಸೌಲಭ್ಯ ಏನು ಕೊಡುತ್ತಿದ್ದಾರೆ ಅದೇ ಸೌಲಭ್ಯವನ್ನು ಕೃಷಿ ಕಾರ್ಮಿಕರಿಗೂ ಒದಗಿಸುವ ಹಾಗೆ ವ್ಯವಸ್ಥೆ ಮಾಡ

ಬೇಕು. ಆ ಬಗ್ಗೆ ಸರ್ಕಾರದವರು ನಿಗಾ ಕೊಟ್ಟು ಸೂಕ್ತ ವ್ಯವಸ್ಥೆಯನ್ನು ಮಾಡದಿದ್ದರೆ ನಾಳೆ ಅವರು ದೊಣ್ಣೆ ತೆಗೆದುಕೊಳ್ಳುತ್ತಾರೆ. ಆದ್ದರಿಂದ ಕೃಷಿ ಕ್ಷೇತ್ರದಲ್ಲಿ ಪ್ರಧಾನವಾಗಿರತಕ್ಕ ಜನಗಳ ಬಗ್ಗೆ ಸರ್ಕಾರ ತಮ್ಮ ಲಕ್ಷ್ಯವನ್ನು ಹರಿಸಬೇಕು. ಇವೊತ್ತು ಕೃಷಿ ಕ್ಷೇತ್ರದಲ್ಲಿ ಎಷ್ಟೇ ಪ್ರಗತಿಯನ್ನು ಸಾಧಿಸಿದರೂ ಕೂಡ ಸರ್ಕಾರದವರು ಆ ವರ್ಗದ ಜನಗಳಿಗೆ ಎಷ್ಟೇ ಸವಲತ್ತನ್ನೂ ಕೊಟ್ಟರೂ ಕೂಡ ಅದು ಸಣ್ಣ ಪ್ರಮಾಣದ ಹಿಡುವಳಿದಾರರಿಗೆ ಸಂಬಂಧಪಟ್ಟ ಹಾಗೆ ಸರ್ಕಾರದವರು ಕೆಲವು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಈ ಯೋಜನೆಗಳನ್ನು ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಇಟ್ಟುಕೊಂಡಿದ್ದಾರೆ. ಸಣ್ಣ ಹಿಡುವಳಿದಾರರ ಅಭಿವೃದ್ಧಿ ಯೋಜನೆ ಮತ್ತು ಮಾರ್ಜಿನಲ್ ಫಾರ್ಮರ್ಸ್ ಅಭಿವೃದ್ಧಿಯೋಜನೆ ಈ ಎರಡು ಯೋಜನೆಗಳನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಆದರೆ ಈ ಯೋಜನೆ ಕೆಲವೇ ಜಿಲ್ಲೆಗಳಲ್ಲಿ ಮಾತ್ರ ಇದೆ. ಎಲ್ಲೆಲ್ಲಿ ಸಣ್ಣ ಹಿಡುವಳಿದಾರರು ಇದ್ದಾರೆಯೋ ಅಲ್ಲೆಲ್ಲಾ ಈ ಎರಡು ಯೋಜನೆಗಳನ್ನು ಜಾರಿಗೆ ತಂದು ಅವುಗಳ ಮುಖಾಂತರ ಸಣ್ಣ ಹಿಡುವಳಿದಾರರಿಗೆ ವಿಶೇಷ ಸವಲತ್ತನ್ನು ಒದಗಿಸಿಕೊಟ್ಟು ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು ಎನ್ನುವ ದೃಷ್ಟಿಯಿಂದ ಈ ಯೋಜನೆಯನ್ನು ಇಟ್ಟಿದ್ದಾರೆ. ಈ ಯೋಜನೆ ಯೇನೋ ಉತ್ತಮವಾದ ಯೋಜನೆ ಹೌದು. ಆದರೆ ಅದರಿಂದ ಯಾವ ಪರಿಣಾಮ ಕೂಡ ಆಗಿಲ್ಲ. ಈ ವರದಿಯಲ್ಲಿ ಎರಡು ಯೋಜನೆಗಳನ್ನು ಕೆಲವು ಜಿಲ್ಲೆಗಳಲ್ಲಿ ಅಳವಡಿಸಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅದನ್ನು ಅಳವಡಿಸಿದ ಮೇಲೆ, ಪ್ರಾರಂಭ ಮಾಡಿದ ಮೇಲೆ ಸಣ್ಣ ಹಿಡುವಳಿದಾರರಿಗೆ ಏನು ಆದಾಯ ಆಗಿದೆ, ಏನು ಪರಿಣಾಮವಾಗಿದೆ, ಎಷ್ಟರಮಟ್ಟಿಗೆ ಆ ಜನಗಳ ಜೀವನ ಸ್ಥಿತಿ ಉತ್ತಮಗೊಂಡಿದೆ ಎನ್ನುವುದನ್ನು ಪರಿಶೀಲನೆ ಮಾಡಿ ಈ ವಾರ್ಷಿಕ ವರದಿಯಲ್ಲಿ ಹೇಳಿಲ್ಲ. ಸಣ್ಣ ಹಿಡುವಳಿದಾರರಿಗೆ ಇರತಕ್ಕ ಭೂಮಿಯಲ್ಲಿ ಅವರು ದುಡಿಮೆಮಾಡಿ ಅವರ ಕುಟುಂಬವನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರು ಬೇರೆ ಕೆಲಸವಾಡಿ ಜೀವನ ಮಾಡುತ್ತಾರೆ. ಅವರ ಸ್ಥಿತಿ ಬಹಳ ಚಿಂತಾಜನಕವಾಗಿದೆ ಅವರು ಟ್ರ್ಯಾಕ್ಟರುಗಳನ್ನು ಕೊಳ್ಳುವುದಕ್ಕೆ ಆಗುವುದಿಲ್ಲ. ಬಾವಿಗಳನ್ನು ತೋಡುವುದಕ್ಕೆ ಆಗುವುದಿಲ್ಲ. ನೀರಾವರಿ ಬಾವಿಗಳಿಗೆ ಪಂಪುಸೆಟ್ಟುಗಳನ್ನು ಹಾಕಿಕೊಳ್ಳುವುದಕ್ಕೆ ಆಗುವುದಿಲ್ಲ. ಉತ್ತಮವಾದ ಬೀಜವನ್ನು ತರುವುದಕ್ಕೆ ಆಗುವುದಿಲ್ಲ. 5 ಎಕರೆಗಳಿಗಿಂತ ಕಡಿಮೆ ಭೂಮಿ ಇರುವವರ ಸುಮಾರು 40 ಪರ್ಸೆಂಟ್ ಇದ್ದಾರೆ. ಅವರಲ್ಲಿ 10.32 ಪರ್ಸೆಂಟ್ ಜಮೀನು ಇದೆ. ಇವರು ಸರ್ಕಾರದಿಂದ ಯಾವುದೇ ಅನುಕೂಲವನ್ನು ಪಡೆಯುವುದಕ್ಕೆ ಆಗುವುದಿಲ್ಲ. ಸೊಸೈಟಿಗಳಿಂದ ಕ್ರಾಪ್‌ಲೋನ್ ಮಾತ್ರ ಕೊಡುತ್ತಾರೆ. ಆದರೆ ಅವರು ಮತ್ತೆ ಯಾವುದೇ ಲೋನನ್ನೂ ಪಡೆಯುವುದಕ್ಕೆ ಅವಕಾಶ ಇಲ್ಲ. ಆದ್ದರಿಂದ ಸಣ್ಣ ಹಿಡುವಳಿದಾರರಿಗೆ ಸರ್ಕಾರದವರು ವಿಶೇಷ ಯೋಜಯನ್ನೇನು ಮಾಡಿದ್ದಾರೆ ಅದು ನಡೆಯತಕ್ಕ ರೀತಿ ತೃಪ್ತಿಕರವಾಗಿಲ್ಲ. ಅದು ಚೆನ್ನಾಗಿ ಕೆಲಸ ಮಾಡುತ್ತಿಲ್ಲ ಅವರಿಗೆ ಸಾಲ ಕೊಡುವುದನ್ನು ಮಾತ್ರ ಕೊಟ್ಟು ಅವರು ಕೊಟ್ಟಂತಹ ಸಾಲವನ್ನು ಸರಿಯಾಗಿ ಉಪಯೋಗ ಮಾಡಿದ್ದಾರೆಯೇ ಅದರಿಂದ ಅವರ ಜೀವನ ಪರಿಸ್ಥಿತಿ ಸುಧಾರಿಸಿದೆಯೇ ಅವರ ಆದಾಯ ಎಷ್ಟರಮಟ್ಟಿಗೆ ಹೆಚ್ಚಿದೆ ಎನ್ನುವ ಮೌಲ್ಯ ಮಾಪನವನ್ನು ಇವೊತ್ತಿನವರೆಗೂ ಮಾಡುತ್ತಿಲ್ಲ. ಈ ಯೋಜನೆಯಿಂದ ಸಣ್ಣ ಹಿಡುವಳಿದಾರರು ಎಷ್ಟರಮಟ್ಟಿಗೆ ಉದ್ಧಾರವಾಗಿದ್ದಾರೆ ಎಂಬುದನ್ನು ಇವೊತ್ತಿನವರೆಗೂ ಕಂಡುಹಿಡಿಯುವುದಕ್ಕೆ ಆಗಿಲ್ಲ. ಇದನ್ನು ಕಂಡು ಹಿಡಿದು ಕೊಟ್ಟಿದ್ದರೆ ಚೆನ್ನಾಗಿತ್ತು. ಸಣ್ಣ ಹಿಡುವಳಿದಾರರು ಪ್ರತಿಯೊಂದು ಜಿಲ್ಲೆಯಲ್ಲಿಯೂ ಹೇರಳವಾಗಿದ್ದಾರೆ. ಆದ್ದರಿಂದ ಈ ಸಣ್ಣ ಹಿಡುವಳಿದಾರರ ಅಭಿವೃದ್ಧಿ ಯೋಜನೆಯನ್ನು ಪ್ರತಿಯೊಂದು ಜಿಲ್ಲೆಗೂ ವಿಸ್ತರಣೆ ಮಾಡಬೇಕು. ರಾಜ್ಯದ ಎಲ್ಲಾ ಭಾಗದ ಜನಗಳಿಗೂ ಇದರ ಪ್ರಯೋಜನೆ ಸಿಕ್ಕುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಒಂದು ಕಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆಮಾಡಿದ ಹಾಗುತ್ತವೆ. ತಾರತಮ್ಯವನ್ನು ತೋರಿಸಿದಂತಾಗುತ್ತದೆ. ಮುಂದಿನ 5ನೇ ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭ ಮಾಡುವಾಗ ದೇಶದಲ್ಲಿ ಕಲ್ಪವೃಕ್ಷವನ್ನು ಸೃಷ್ಟಿ ಮಾಡುತ್ತೇವೆ, ಎಲ್ಲರಿಗೂ ಕನಿಷ್ಟ ಪ್ರಮಾಣದ ಸೌಲಭ್ಯವನ್ನು ಒದಗಿಸಿಕೊಡುತ್ತೇವೆ, ಈ ಯೋಜನೆಗೆ ಸುಮಾರು 830 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎಂದು ಹೇಳಿದ್ದಾರೆ. ಹೀಗಿರುವಾಗ ಶೇಕಡಾ 47 ಮಂದಿ ಸಣ್ಣ ಹಿಡುವಳಿದಾರರ ಅಭಿವೃದ್ಧಿಯ ಬಗ್ಗೆ ಯಾವ ಯೋಜನೆಯನ್ನು ಸಿದ್ಧಪಡಿಸಿದ್ದಾರೆ ? ಕೆಲವು ಜಿಲ್ಲೆಗಳಲ್ಲಿ ಮಾತ್ರ ಈ ಯೋಜನೆಯನ್ನು ಇಟ್ಟುಕೊಂಡು ಅವರಿಗೆ ಈ ಹಣವನ್ನು ಖರ್ಚುಮಾಡಿದರೆ ಇತರ ಜಿಲ್ಲೆಗಳಿಗೆ ಏನೂ ಪ್ರಯೋಜನ ಸಿಕ್ಕುವುದಿಲ್ಲ. ಆದ್ದರಿಂದ ಎಲ್ಲಾ ಜಿಲ್ಲೆಗಳಿಗೂ ಈ ಯೋಜನೆಯನ್ನು ಅನ್ವಯಿಸಬೇಕು. ಮತ್ತು 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಸಣ್ಣ ಹಿಡುವಳಿದಾರರ ಅಭಿವೃದ್ಧಿ ಯೋಜನೆಗೆ ಹೆಚ್ಚು ಹಣವನ್ನು ಒದಗಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಅದರಂತೆ ಕಾರ್ಯಕ್ರಮವನ್ನು ರೂಪಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ 100ಕ್ಕೆ 20ರಷ್ಟು ಜನ ಮಾತ್ರ ವಿದ್ಯಾವಂತರಿದ್ದಾರೆ. ಇನ್ನು 80 ಪರ್ಸೆಂಟ್ ಜನ ವ್ಯವಸಾಯ ಮಾಡುತ್ತಿದ್ದಾರೆ. ಅದೂ 20 ಪರ್ಸೆಂಟ್ ವಿದ್ಯಾ

(ಶ್ರೀ ಕಾಗೋಡು ತಿಮ್ಮಪ್ಪ)

ವಂತರು ಎಂದರೆ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬರುವವರು ಎಂದು ಅರ್ಥ. ವ್ಯವಸಾಯ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ವಿದ್ಯಾವಂತರನ್ನು ತೊಡಗಿಸೋಣ ಎಂದರೆ ಅವರು ಮುಂದೆ ಬರುವುದಿಲ್ಲ. ಅವರು ವ್ಯವಸಾಯ ಕ್ಷೇತ್ರಕ್ಕೆ ಏತಕ್ಕೆ ಮುಂದೆ ಬರುವುದಿಲ್ಲ ಎಂಬುದು ಗೊತ್ತಾಗುವುದಿಲ್ಲ. ವ್ಯವಸಾಯ ಕ್ಷೇತ್ರದಲ್ಲಿ ವಿದ್ಯಾವಂತರನ್ನು ತೊಡಗಿಸಬೇಕು ಎಂದರೆ ಕೃಷಿ ಕ್ಷೇತ್ರ ಲಾಭದಾಯಕವಾಗಿ ಕಾಣಬೇಕು. ಇವತ್ತು ನೀವು ಶಾಲಾ ಕಾಲೇಜುಗಳನ್ನು ವಿಸ್ತಾರವಾಗಿ ಮಾಡುತ್ತಿದ್ದೀರಿ. ಎಲ್ಲಿ ಕೇಳಿದರೂ ಹೈಸ್ಕೂಲ್ಸ್ ಮತ್ತು ಜೂನಿಯರ್ ಕಾಲೇಜುಗಳನ್ನು ಮಾಡಿಸಿದ್ದೀರಿ. ಆದರೆ ವ್ಯವಸಾಯಗಾರರಿಗೆ ಶಿಕ್ಷಣ ಕೊಡುವ ಶಾಲೆಗಳು ಎಷ್ಟು ಇವೆಯೆಂಬುದನ್ನು ನೋಡಿದರೆ ಪ್ರತಿಯೊಂದು ಜಿಲ್ಲೆಯಲ್ಲಿಯೂ ಎಲ್ಲೋ ಅಲ್ಲಷ್ಟು ಇಲ್ಲಷ್ಟು ನೀರು ಚುಮುಕಿಸುವ ಹಾಗೆ ಇವೆ. ವ್ಯವಸಾಯ ಕ್ಷೇತ್ರದಲ್ಲಿ ಯುವ ಜನಾಂಗವನ್ನು ಆಕರ್ಷಣೆ ಮಾಡಬೇಕಾದರೆ ಮೂರು ನಾಲ್ಕು ತಾಲ್ಲೂಕುಗಳಿಗೆ ಸೇರಿಸಿ ಒಂಬೊಂದು ವ್ಯವಸಾಯ ಶಾಲೆಯನ್ನು ತೆಗೆಯಬೇಕು. ಇದಕ್ಕಾಗಿ ಸ್ವಲ್ಪ ಭೂಮಿಯನ್ನೂ ಸಹ ಅವರಿಗೆ ಕೊಡಬೇಕು. ಒಂದು ಎಕರೆಯಾಗಲಿ, ಎರಡುಎಕರೆಯಾಗಲೀ ಅಥವಾ ಮೂರು ಎಕರೆಯಾಗಲು ಜಮೀನು ಕೊಡಬೇಕಾಗುತ್ತದೆ. ಅವರಿಗೆ ಹೊಸಗೊಬ್ಬರ ಹೊಸಬಂಡವಾಳ ಮುಂತಾದ ವ್ಯವಸಾಯ ಸಾಧನೋಪಕರಣಗಳನ್ನು ವ್ಯವಸಾಯಗಾರರಿಗೆ ಒದಗಿ ವ್ಯವಸಾಯೋತ್ಪಾದನೆಯನ್ನು ಜಾಸ್ತಿಮಾಡುವುದಕ್ಕೆ ಅವಕಾಶಮಾಡಿ ಕೊಡಬೇಕು. ಅವರ ಬಗ್ಗೆ ಸರ್ಕಾರದವರು ಹೆಚ್ಚಿಗೆ ಗಮನವನ್ನು ಕೊಡುವುದಾದರೆ, ನಿಜವಾಗಿಯೂ ನಮ್ಮ ಈಗಿನ ಉತ್ಪಾದನೆಗಿಂತ ಎರಡರಷ್ಟು ಮಾಡಿಕೊಳ್ಳಬಹುದೆಂದು ನಾನು ಹೇಳುತ್ತೇನೆ. ಗುನ್ನಾರ್ ಮಿರ್ಡಾಲ್ ಎಂಬುವರು ಒಂದು ಪುಸ್ತಕವನ್ನು ಬರೆದಿದ್ದಾರೆ. ಅದು ಏಷಿಯನ್ ಡ್ರಾಮಾ ಅದರಲ್ಲಿ ಯಾವ ರೀತಿ ವ್ಯವಸಾಯವನ್ನು ಆಧುನಿಕ ರೀತಿಯಲ್ಲಿ ಮಾಡಬಹುದು ಎಂಬ ಬಗ್ಗೆ ಬಹಳ ಚೆನ್ನಾಗಿ ಹೇಳಿದ್ದಾರೆ. ಸಾಂದ್ರತೆ ವ್ಯವಸಾಯ ಇಂಟೆನ್ಸಿವ್ ಕಲ್ಟಿವೇಷನ್ ಯಾವ ರೀತಿ ಮಾಡಬಹುದು ಎಂಬುದನ್ನು ಹೇಳಿದ್ದಾರೆ. ಆದರೆ ಕೇವಲ ಹೊಸ ರಾಸಾಯನಿಕ ಪದಾರ್ಥಗಳನ್ನು ಹಾಕಿದ್ದರಿಂದ ಕೃಷಿ ಉತ್ಪಾದನೆ ಜಾಸ್ತಿಮಾಡಬೇಕೆಂಬ ಕಲ್ಪನೆಯಲ್ಲ. ಇವತ್ತು ಇರುವ ಉತ್ಪಾದನೆಯನ್ನು ಎರಡರಷ್ಟು ಮಾಡಬೇಕಾದರೆ ಸಾಂದ್ರತೆ ವ್ಯವಸಾಯನ್ನು ಇಡೀ ಏಷಿಯಾ ಖಂಡದಲ್ಲಿ ಬಹಳ ಚೆನ್ನಾಗಿ ಮಾಡಬಹುದೆಂದು ಹೇಳಿದ್ದಾರೆ. ಆದ್ದರಿಂದ ನಮ್ಮ ಯುವ ಜನಾಂಗವರಿಗೆ ಭೂಮಿ ಭೂಮಿ ಉಳುವ ಕೆಲಸದ ಜ್ಞಾನ ಅವರಿಗೆ ಉಂಟಾಗುವಂತೆ ಮಾಡುವುದು ಬಹಳ ಮುಖ್ಯ. ಆ ರೀತಿಯಾಗಿ ಮಾಡಿದರೆ ಖಂಡಿತವಾಗಿ ಹೆಚ್ಚಿಗೆ ಉತ್ಪಾದನೆ ಮಾಡಬಹುದು. ಆದ್ದರಿಂದ ಈಗ ಕೃಷಿ ಶಾಲೆಗಳನ್ನು ಪ್ರತಿಯೊಂದು ಮೂರು ಮತ್ತು ನಾಲ್ಕು ತಾಲ್ಲೂಕುಗಳಿಗೆ ಒಂದೊಂದರಂತೆ ಕೃಷಿ ಶಾಲೆಯನ್ನು ತೆಗೆಸಿದರೆ, ನಮ್ಮ ಮಕ್ಕಳನ್ನು ಹೈಸ್ಕೂಲ್‌ಗಳಿಗೆ ಕಳುಹಿಸುವುದಕ್ಕೆ ಬದಲಾಗಿ ವ್ಯವಸಾಯ ಶಾಲೆಗಳಿಗೆ ಕಳುಹಿಸುವುದಕ್ಕೆ ಹೆಚ್ಚಿಗೆ ಅವಕಾಶವಾಗುತ್ತದೆ. ಮಾನ್ಯ ಶ್ರೀ ಕೆ.ಎಚ್. ಪಾಟೀಲ್ ಅವರು ಹಿಂದೆ ಕೃಷಿ ಸಚಿವರಾಗಿದ್ದಾಗ ಎರಡು ಕಾಲೇಜುಗಳಿಗೆ ಎರಡು ವಿಶ್ವವಿದ್ಯಾನಿಲಯಗಳನ್ನು ಮಾಡಬೇಕೆಂದು ಹೊರಟಿದ್ದರು. ಯಾವಾಗಲೂ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಬೇಕಾದರೆ ಸಾಮಾನ್ಯವಾಗಿ 10 ಕಾಲೇಜುಗಳು ಇರಬೇಕು. ಧಾರವಾಡದಲ್ಲಿ ಒಂದು ಕಾಲೇಜಿಗೆ ಒಂದು ವಿಶ್ವವಿದ್ಯಾನಿಲಯವನ್ನು. ಮೈಸೂರಿನಲ್ಲಿ ಒಂದು ಕಾಲೇಜಿಗೆ ಒಂದು ವಿಶ್ವವಿದ್ಯಾನಿಲಯ.

Sri K. H. PATIL.—Agricultural University is not based on Colleges. It is based on Agricultural Research Farms, Demonstration Farms, and Seed Producing Farms, etc., "Agricultural University has very litle to do with Colleges."

ಶ್ರೀ ಕಾಗೋಡು ತಿಮ್ಮಪ್ಪ.—ಇದೆಲ್ಲದರ ಮೇಲೆ ರಿ-ಓರಿಯೆಂಟೆಡ್ ಆಗಿರುತ್ತದೆ. ರಿಸರ್ಚ್ ಸೆಂಟರ್‌ಗಳನ್ನು ಮಾಡಬೇಕು. ಬೀಜೋತ್ಪಾದನೆ ಮಾಡುವುದಕ್ಕೆ ಕೃಷಿ ವಿಶ್ವವಿದ್ಯಾನಿಲಯಬೇಕೆಂದು ಹೇಳುವುದಿಲ್ಲ. ಏಕೆಂದರೆ ಕೃಷಿ ವಿಶ್ವವಿದ್ಯಾನಿಲಯ ವ್ಯಾಪ್ತಿ ಬಹಳ ದೊಡ್ಡದು. ಅದಕ್ಕೆ ಧಾರವಾಡದಲ್ಲಿ ಒಂದು ಕಾಲೇಜು ಮತ್ತೆ ಇನ್ನೂ ಎರಡೂ ವಿಶ್ವವಿದ್ಯಾನಿಲಯಗಳನ್ನು ಮಾಡಬೇಕೆಂದಿದ್ದಾರೆ. ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದೊಂದು ಕೃಷಿ ಕಾಲೇಜ್ ಮಾಡಬೇಕು. 19 ಜಿಲ್ಲೆಗಳಲ್ಲಿ 19 ಕೃಷಿ ಶಾಲೆಗಳು ಆಗಬೇಕು. ಕೃಷಿ ಕಾಲೇಜುಗಳನ್ನು ನೀವು ಮಾಡದಿದ್ದರೂ ಕೃಷಿ ಶಾಲೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿಯಾದರೂ ಮಾಡಬೇಕು. ಕೃಷಿ ವಿಶ್ವವಿದ್ಯಾನಿಲಯ ಒಂದಲ್ಲ, ಎರಡುಮಾಡಿ. ಆದರೆ ಕೃಷಿ ಶಾಲೆಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ಮಾಡಬೇಕು.

ವ್ಯವಸಾಯಗಾರರ ಮಕ್ಕಳನ್ನು ಅಲ್ಲಿಗೆ ಕಳುಹಿಸುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಎಸ್.ಎಸ್.ಎಲ್.ಸಿ. 10ನೇ ತರಗತಿಯನ್ನು ಪಾಸ್ ಮಾಡಿದಮೇಲೆ ಅವರು ಸರ್ಕಾರದ ನೌಕರಿಗೆ ಅರ್ಜಿ ಹಾಕೋಣವೆಂದು ಯೋಚನೆ ಮಾಡುತ್ತಿರುತ್ತಾರೆ. ಈ ಪರಿಸ್ಥಿತಿ ಬರುವುದಕ್ಕೆ ಅವಕಾಶ ಕೊಡಬಾರದು. 10ನೇ ತರಗತಿ ಪಾಸ್‌ಮಾಡಿ ಸರ್ಕಾರದ ನೌಕರಿಗೆ ಜೋತು ಬೀಳುವ ಪರಿಸ್ಥಿತಿ ಮಾಡುವದಕಿಂತ ವ್ಯವಸಾಯ ಶಾಲೆಗಳನ್ನು ಪ್ರತಿಯೊಂದು ತಾಲ್ಲೂಕಿನಲ್ಲಿ ಮಾಡಿದರೆ, ವ್ಯವಸಾಯಗಾರನಾಗಲು ಅವಕಾಶವಾಗುತ್ತದೆ ಮತ್ತು ಇನ್ನು ಭೂಮಿಯಮೇಲೆ ನಿಂತು ಕೆಲಸಮಾಡುವುದಕ್ಕೆ ಅನುಕೂಲವಾಗುತ್ತದೆ. ಈಗಿನ ವಿದ್ಯಾಭ್ಯಾಸ ಕ್ರಮ ಏನಾಗಿದೆಯೆಂದರೆ, ವ್ಯವಸಾಯಗಾರರ ಮಕ್ಕಳೇನಾದರೂ ಎಸ್. ಎಸ್. ಎಲ್. ಸಿ. ಪಾಸ್ ಆಯಿತೆಂದರೆ, ಅವರು ಸ್ವಲ್ಪಮಟ್ಟಿಗೆ ವಿದ್ಯಾವಂತರಾದರ ಮಣ್ಣಿನ ಬಗ್ಗೆ ಅವರಿಗೆ ತುಂಬಾ ಹೇಸಿಕೆ ಬರುತ್ತದೆ. ಇಂತಹ ವಿದ್ಯಾಭ್ಯಾಸ ಕ್ರಮದಿಂದ ಏನು ದುಷರಿಣಾಮ ನಡೆಯುತ್ತಿದೆಯೆಂದರೆ ವಿದ್ಯಾವಂತರಾದಮೇಲೆ ಅವರು ವ್ಯವಸಾಯ ಕ್ಷೇತ್ರದಿಂದ ದೂರ ಇರುವುದಕ್ಕೆ ಪ್ರಯತ್ನಮಾಡುತ್ತಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ 5ನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ವ್ಯವಸಾಯ ಶಾಲೆಗಳನ್ನು ಪ್ರಾರಂಭಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದು ನನಗೆ ಗೊತ್ತಿಲ್ಲ. 9 ಶಾಲೆಗಳು ಇದ್ದುವು. ಅದನ್ನು 13ಕ್ಕೆ ಏರಿಸಿದ್ದೀರಿ.

ಶ್ರೀ ಎನ್. ಚಿಕ್ಕೇಗೌಡ.—ನಾವು ಅದರ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಆದರೆ ನೀವು ಕೊಟ್ಟಿರುವ ವರದಿಯ ಪ್ರಕಾರ ಈಗ 19 ಜಿಲ್ಲೆಗಳಿಗೂ 19 ಕೃಷಿ ಶಾಲೆಗಳನ್ನು ಕೊಟ್ಟಿದ್ದೀರಿ. In addition to the 10 additional schools, 9 more schools were sanctioned-thus bringing the total number of schools to 19. ಪ್ರತಿಯೊಂದು ಜಿಲ್ಲೆಗೂ ಕೇವಲ ಒಂದು ಕೃಷಿ ಶಾಲೆ ಇದ್ದರೆ ಇಡೀ ಜಿಲ್ಲೆಯ ಜನರಿಗೆ ಅಷ್ಟು ಸೌಲಭ್ಯ ಕೊಡುವುದಕ್ಕಾಗುವುದಿಲ್ಲ. ಏಕೆಂದರ ಸೇಕಡ 80 ರಷ್ಟು ಈ ದೇಶದಲ್ಲಿ ರೈತರು ಹಾಗೂ ವ್ಯವಸಾಯಗಾರರು ಇದ್ದಾರೆ. ಕೆಲವು ಕಡೆಗಳಲ್ಲಿ ಅಗ್ರಿಕಲ್‌ಚರಲ್ ಸೆಂಟರ್‌ಗಳಲ್ಲಿ ಕೆಲಸಗಳು ಚೆನ್ನಾಗಿ ನಡೆಯುತ್ತಿವೆಯೋ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಹೋಗುವವರು ಏನು ಮಾಡುತ್ತಾರೆಂದರೆ, ಅಲ್ಲಿ ಹೋಗಿ ಕಾಫಿ, ತಿಂಡಿ ತಿಂದು ಸುಮ್ಮನೆ ವಾಪಸ್ಸು ಬರುತ್ತಾರೆ. ಆದ್ದರಿಂದ ಇವತ್ತು ಯುವ ಜನಾಂಗವನ್ನು ಸರಿಯಾಗಿ ಸಿದ್ಧಪಡಿಸಬೇಕಾಗಿದ್ದರೆ, ಅವರು ಒಂದುವೇಳೆ ಹೈಸ್ಕೂಲಿನಲ್ಲಿ ಹೋಗಿ ಕಲಿಯುವುದನ್ನು ಕೈಬಿಟ್ಟರೂ ಚಿಂತಿಲ್ಲ. ಅವರನ್ನು ಮೊದಲು ವ್ಯವಸಾಯ ಶಾಲೆಗಳಿಗೆ ಹಾಕಿ. ಕೃಷಿ ಕ್ಷೇತ್ರಕ್ಕೆ ಹೆಚ್ಚಿಗೆ ವಿದ್ಯಾವಂತ ಯುವಕರು ಬರುವ ಹಾಗೆ ಕೃಷಿ ಶಾಲೆಗಳನ್ನು ಹೆಚ್ಚಿಗೆ ಸ್ಥಾಪನೆಮಾಡಬೇಕು. ಪ್ರತಿಯೊಂದು ತಾಲ್ಲೂಕಿಗೂ ಇದನ್ನು ತೆಗೆದರೆ ಸರ್ಕಾರಕ್ಕೆ ಹೆಚ್ಚಿಗೆ ಖರ್ಚೇನೂ ಆಗಲಾರದು. ಪ್ರತಿ 3-4 ತಾಲ್ಲೂಕುಗಳಿಗೂ ಒಂದು ಕೃಷಿ ಶಾಲೆಯನ್ನು ಪ್ರಾರಂಭಮಾಡುವುದಕ್ಕೆ ಈಗಿನಿಂದಲೇ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕು. ಇವತ್ತು ಗ್ರಾಮಾಂತರ ಪ್ರದೇಶದ ವ್ಯವಸಾಯ ಕ್ಷೇತ್ರಕ್ಕೆ ದಿಗ್ದರ್ಶಕರು ಯಾರು ಅಂದರೆ ನಮ್ಮ ಗ್ರಾಮಸೇವಕರು. ವ್ಯವಸಾಯಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಹಾಗೂ ತಿಳುವಳಿಕೆಯನ್ನು ಅವರು ನೀಡಿ ಗ್ರಾಮಾಂತರ ಪ್ರದೇಶದ ಜನರಿಗೆ ಅನುಕೂಲಗಳನ್ನು ಮಾಡಿಕೊಡಬೇಕು. ಇದನ್ನು ಅಲ್ಲಿರತಕ್ಕ ಗ್ರಾಮಸೇವಕರು ಮಾಡಿಕೊಡಬೇಕು. ಆದರೆ ಇವತ್ತಿನವರಗೆ ಅವರು ತಂತಮ್ಮ ಕ್ಷೇತ್ರದಲ್ಲಿ ವಾಸಮಾಡುವುದಿಲ್ಲ. ಅದರ ಬಗ್ಗೆ ನೀವು ಕಡ್ಡಾಯವಾದ ಒಂದು ನಿಯಮವನ್ನು ಹಾಕಿಲ್ಲ. ಅವರಿಗೆ ಒಂದು ತೊಂದರೆ ಇದೆಯೆಂದು ಹೇಳುತ್ತಾರೆ. ಅವರಿಗೆ ಸ್ಟೈಪೆಂಡ್ ಬಂದು ಏನು ಮಾಡುತ್ತಾರೆ ? ಅವರೇನೂ ನೇಗಿಲು ಹಿಡಿಯುವುದಿಲ್ಲ. ಹಳ್ಳಿಯ ಜನರು ಯಾವುದಾದರೂ ಒಂದು ಸಂದರ್ಭದಲ್ಲಿ ಗ್ರಾಮಸೇವಕರು ಬೇಕೆಂದು ಹೇಳಿದರೆ ಅವರು ಅಲ್ಲಿ ಸಿಗುವುದಿಲ್ಲ. ನೀವು ಈಗ 15 ಸಾವಿರ ಜನಸಂಖ್ಯೆಗೆ ಒಬ್ಬೊಬ್ಬ ಗ್ರಾಮಸೇವಕರು ಇರಬೇಕೆಂದು ಮಾಡಿದ್ದೀರಿ. ಆದರೆ ಅವರ ಸೇವೆ ವ್ಯವಸಾಯಗಾರರಿಗೆ ಸರಿಯಾಗಿ ಸಿಗುತ್ತಾ ಇಲ್ಲ. ಅವರು ಸರಿಯಾಗಿ ಕೆಲಸವನ್ನೂ ಸಹ ಮಾಡುತ್ತಾ ಇಲ್ಲ. ಅಂತಹವರ ಬಗ್ಗೆ ಒಂದು ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಬೇಕು. ಅವನು ತಪ್ಪಿತಸ್ಥನಾದರೆ ಆ ರೀತಿಯಾಗಿ ಮಾಡಬೇಕು. ಇದನ್ನು ಮಾಡುವುದಕ್ಕೆ ಅಲ್ಲಿ ಯಾರಿಗೆ ಅಧಿಕಾರವಿದೆ ! ಅವರು ಸುಮ್ಮನೆ ಟೈಟ್ ಪ್ಯಾಂಟ್ ಹಾಕಿಕೊಂಡು ಇದ್ದರೆ ಅಲ್ಲಿ ಹೋಗಿ ಏನು ಕೆಲಸ ಮಾಡುತ್ತಾರೆ ? ಆದ್ದರಿಂದ ಅಲ್ಲಿರತಕ್ಕ ಡೆಪ್ಯುಟಿ ಡೈರೆಕ್ಟರ್ ತಾಲ್ಲೂಕ್ ಹಾಗೂ ಡಿವಿಜನಲ್ ಲೆವಲ್‌ನಲ್ಲಿ ಏನು ಇರುತ್ತಾರೋ ಅವರಿಗೆ ಈ ಒಂದು ಅಧಿಕಾರವನ್ನು ಕೊಡಿ. ಏಕೆಂದರೆ ನನಗೆ ಗೊತ್ತಿರುವ ಹಾಗೆ ಅಲ್ಲಿನ ಒಬ್ಬ ಅಗ್ರಿಕಲ್ಚರಲ್ ರಿಸರ್ಚ್ ಸ್ಟೇಷನ್ ಆಫೀಸರ್ ಒಬ್ಬರು ಸುಮಾರು 7–8 ಸಾವಿರ ರೂಪಾಯಿಗಳನ್ನು ಈಗಾಗಲೇ ತಿಂದುಹಾಕಿದ್ದಾರೆ ನಾನೇ ಅಲ್ಲಿಯ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿದ್ದೇನೆ. ಎಷ್ಟೇ ಪ್ರಯತ್ನ

(ಶ್ರೀ ಕಾಗೋಡು ತಿಮ್ಮಪ್ಪ)

ಪಟ್ಟರೂ ಕೂಡ ಆತ ನಮ್ಮ ತಾಲ್ಲೂಕಿನಲ್ಲಿ ಪತ್ತೆ ಇಲ್ಲ. ಅವನು ಯಾರೂ ಕೈಗೂ ಸಿಗುವುದಿಲ್ಲ. ಸುಮಾರು 6–7 ತಿಂಗಳುಗಳಿಂದಲೂ ಸರ್ಕಾರದವರು ಈ ಒಂದು ವಿಚಾರದ ಬಗ್ಗೆ ಮೀನಾಮೇಷ ನೋಡುತ್ತಿದ್ದಾರೆ. ಅವನು ಅದೇ ತಾಲ್ಲೂಕಿನಲ್ಲಿಯೇ ಇದ್ದಾನೆಂದು ನಾನು ಕೇಳಿದ್ದೇನೆ. ಅವನ ಅಡ್ರೆಸ್ ಇಲ್ಲ. ಬಿ.ಡಿ.ಒ. ಬಂದರೆ ಅವರಿಗೂ ಹೇಳಿದ್ದೇನೆ. ಜಾಯಿಂಟ್ ಡೈರೆಕ್ಟರ್‌ಗೂ ಕೂಡ ಒಂದು ಕಾಗದವನ್ನು ಬರೆದಿದ್ದೇನೆ. ಈವರೆಗೆ ಕ್ರಮ ಕೈಗೊಂಡಲ್ಲಿ ಅದ್ದರಿಂದ ಅವನನ್ನು ಉಳಿಸುವುದಕ್ಕೆ ಅಲ್ಲಿನ ಬಿ.ಡಿ.ಒ. ಪ್ರಯತ್ನ ಪಡುತ್ತಿದ್ದಾನೆ.

ಅವರನ್ನು ಉಳಿಸುವುದಕ್ಕೆ ಆ ಬಿ.ಡಿ.ಒ.ಗಳು ಪ್ರಯತ್ನ ಮಾಡುತ್ತಾರೆ. ನಿಮ್ಮ ಅಧಿಕಾರಿಗಳ ಮೇಲೆ ನಮಗೆ ಒಂದು ಸರಿಯಾದ ನಿಯಂತ್ರಣವಿಲ್ಲವೆ ಇರುವುದರಿಂದ ಅವರನ್ನು ಸರಿಯಾಗಿ ಕೆಲಸ ಮಾಡುವಂತೆ ಒತ್ತಾಯ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ನಾನು ಹೇಳುತ್ತಿರುವುದೇನೆಂದರೆ ಪ್ರತಿಯೊಂದು ಜಿಲ್ಲೆಯಲ್ಲಿರತಕ್ಕ ವ್ಯವಸಾಯದ ಜಿಲ್ಲಾಧಿಕಾರಿಗಳಿಗೆ ಇವರ ಮೇಲೆ ಅಧಿಕಾರವಿರುವುದು ಒಳ್ಳೆಯದೆಂದು ಸಲಹೆ ಮಾಡುತ್ತಿದ್ದೇನೆ. ಯಾವಾಗ ಈ ಗ್ರಾಮ ಸೇವಕರು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಕಂಡುಬರುತ್ತದೋ ಆಗ ಅವರನ್ನು ಕಿತ್ತುಹಾಕುವುದಕ್ಕೆ ಅಧಿಕಾರವಿರಬೇಕು. ಆದುದರಿಂದ ಈ ಗ್ರಾಮಾಧಿಕಾರಿಗಳನ್ನು ದಂಡಿಸತಕ್ಕ ಅಧಿಕಾರವನ್ನು ಜಿಲ್ಲಾ ವ್ಯವಸಾಯಾಧಿಕಾರಿಗಳಿಗೆ ಕೊಡಬೇಕೆಂದು ಹೇಳುತ್ತೇನೆ. ಹಾಗೆ ಅವರಿಗೆ ಅಧಿಕಾರ ಕೊಡದಿದ್ದರೆ ಗ್ರಾಮದ ಜನರಿಗೆ ಈ ಗ್ರಾಮಸೇವಕರ ಸಹಾಯ ಖಂಡಿತ ಕಾಲಕ್ಕೆ ಸರಿಯಾಗಿ ಸಿಕ್ಕುವುದಿಲ್ಲ ಎಂಬ ಮಾತನ್ನು ನಾನು ಒತ್ತಿ ಹೇಳಬೇಕಾಗಿದೆ. ಆದರೆ ಅವರೇನು ಒಂದು ನೆಪ ಒಡ್ಡುತ್ತಾರೆಂದರೆ ತಾವು ಎಲ್ಲಿ ಇರಬೇಕೆಂದು ಸರ್ಕಾರದವರು ನಿಗದಿ ಮಾಡಿರುತ್ತಾರೋ ಆ ಜಾಗದಲ್ಲ ಆ ಗ್ರಾಮದಲ್ಲಿ ಅವರಿಗೆ ವಾಸದ ಮನೆಗಳು ಸಿಕ್ಕುವುದಿಲ್ಲ ಎಂದು ಹೇಳುತ್ತಾರೆ. ಸ್ವಲ್ಪಮಟ್ಟಿಗೆ ಅದೂ ನಿಜವೇ. ಆದರೆ ಇನ್ನು ಕೆಲವು ಕಡೆಗಳಲ್ಲಿ ಅವರಿಗೆ ಇರುವುದಕ್ಕೆ ವಾಸದ ಮನೆ ಸಿಕ್ಕಿದರೂ ಅವರು ಅಲ್ಲಿರುವುದಿಲ್ಲ. ಆದುದರಿಂದ ಸರ್ಕಾರದವರೇ ಇವರಿಗೆ ಎಲ್ಲೆಲ್ಲಿ ಹೆಡ್‌ಕ್ವಾರ್ಟರ್ಸ್ ಅನ್ನು ಮಾಡಿರುತ್ತಾರೋ ಅಲ್ಲಿ ಇವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಎಲ್ಲ ಗ್ರಾಮಸೇವಕರಿಗೂ ಇರಲು ಸರ್ಕಾರದವರು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ನನ್ನ ಕ್ಷೇತ್ರದಲ್ಲಂತೂ ಸರ್ಕಾರದವರು ಅವರಿಗಾಗಿ ಯಾವ ಮನೆಯನ್ನೂ ಕಟ್ಟಿಸಿದ್ದಾಗಿ ನನಗೆ ಕಂಡುಬಂದಿಲ್ಲ. ನಾವು ಅವರಿಗೆ ವಾಸದ ಮನೆಯನ್ನು ಮಾಡಿ ಕೊಟ್ಟಾಗ್ಯೂ ಅವರು ಅಲ್ಲಿರುವುದಕ್ಕೆ ಒಪ್ಪುವುದಿಲ್ಲ. ಆದುದರಿಂದ ಸರ್ಕಾರದವರು ಏನಾದರೂ ಮಾಡಿ ಅವರು ಅವರವರ ನಿಗದಿಯಾದ ಸ್ಥಳದಲ್ಲೇ ಅವರು ವಾಸಮಾಡುವಂತೆ ಕಡ್ಡಾಯ ಮಾಡಬೇಕು. ಹಾಗೆ ವಾಸಮಾಡುವುದಕ್ಕೆ ಯಾರು ಇಷ್ಟವಿಲ್ಲವೆಂದು ಹೇಳಿದರೆ ಅಂಥವರನ್ನೂ ಕೂಡಲೆ ಕೆಲಸದಿಂದ ಕಿತ್ತುಹಾಕಬೇಕೆಂದು ಒತ್ತಾಯ ಮಾಡುತ್ತೇನೆ. ನನಗೆ ತಿಳಿದಿರುವಂತೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅರ್ಧಕ್ಕೆ ಮೇಲ್ಪಟ್ಟ ಗ್ರಾಮಾಧಿಕಾರಿಗಳು ಅವರು ತಮ್ಮ ಹೆಡ್‌ಕ್ವಾರ್ಟರ್ಸಿನಲ್ಲಿ ಇರುವುದಿಲ್ಲ. ನನ್ನ ಕ್ಷೇತ್ರದ ವಿಚಾರವನ್ನೇ ನಾನು ಹೇಳುತ್ತಿದ್ದೇನೆ ಅಲ್ಲಿ ಆತನು ವಾಸ ಮಾಡುತ್ತಿಲ್ಲ...

ಶ್ರೀ ಎನ್. ಚಿಕ್ಕೇಗೌಡ.—ನಿಮ್ಮ ಕ್ಷೇತ್ರದ ವಿಚಾರದಲ್ಲಿ ನನಗೆ ಬರೆಯಿರಿ, ನಾನು ಅದನ್ನು ವಿಚಾರ ಮಾಡಿ ಸರಿಪಡಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ನನ್ನ ಕ್ಷೇತ್ರದಲ್ಲೇ ಇಡೀ ದಿನವೆಲ್ಲಾ ರೈತರು ಹುಡುಕಿದ್ದಾರೆ, ಆತ ಸಿಕ್ಕಲಿಲ್ಲ. ಆತನು ಎಲ್ಲಿರುತ್ತಾನೋ? ಏನೋ? ಒಂದೂ ಗೊತ್ತಾಗುವುದಿಲ್ಲ. ಈಗ ಈ ಗೊಬ್ಬರದ ಹಂಚಿಕೆಯನ್ನು ಜೀರ ಅಂದರೆ ಕಾರ್ಡುಗಳನ್ನು ಹಂಚತಕ್ಕ ಕಾರ್ಯವನ್ನು ಇವರಿಗೇ ಹಾಕಿರುವುದರಿಂದ ಇವರ ದರ್ಶನವಾಗುವುದೇ ಬಹಳ ದುರ್ಲಭವಾಗಿದೆ. ಇವರನ್ನು ಪತ್ತೇ ಮಾಡುವುದೇ ಒಂದು ದೊಡ್ಡ ಕಷ್ಟಕ್ಕೆ ಬಂದಿದೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಅಧ್ಯಕ್ಷರೇ ; ಮಾತನಾಡುತ್ತಿರುವ ಮಾನ್ಯ ಸದಸ್ಯರು ಒಂದು ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು. ನಾವು ಆ ಗ್ರಾಮಸೇವಕರನ್ನು ಇಟ್ಟಿರುವುದು ಇವರ ಕೈಕೆಳಗೆ. ಹಾಗಿದ್ದರೂ ಇವರು ಹೀಗೆ ಹೇಳುತ್ತಿರುವುದು ಸರಿಯೇ?

ಶ್ರೀ ಕಾಗೋಡು ತಿಮ್ಮಪ್ಪ.—ಇರಬಹುದು. ಆದರೆ ಇವರನ್ನು ದಂಡಿಸಲು ನಮಗೇನು ಅಧಿಕಾರ ಕೊಟ್ಟಿದ್ದಾರೆ? ಆ ಬಿ.ಡಿ.ಓ.ಗಳು ಸರ್ಕಾರದವರನ್ನು ಎತ್ತಬೇಕಾದರು ಲಾಗ ಹಾಕಿಸ ಬಲ್ಲರು. ಸರ್ಕಾರದವರಿಗೇ ಅವರ ಮೇಲೆ ಸರಿಯಾದ ಒಂದು ಹತೋಟಿ ಇಲ್ಲ—ಅವರ ಸೇವೆ ಜನಕ್ಕೆ ಸರಿಯಾಗಿ ಸಿಕ್ಕುತ್ತಿಲ್ಲ ಅಂದಾಗ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ಏನು ಮಾಡಬಲ್ಲರು? ನಾವು ಈ ಸಾಲಿನಲ್ಲಿ ಇಷ್ಟೆಲ್ಲವನ್ನೂ ಹೇಳಿದ ನಂತರ ಸರ್ಕಾರದವರು ಮುಂದಿನ ಸಾಲಿನಲ್ಲಿ ಈ ಬಗ್ಗೆ ಎಷ್ಟು ಜನರಿಗೆ ಶಿಕ್ಷೆ ಮಾಡಿದರೆಂಬುದನ್ನು ಈ ಸದನಕ್ಕೆ ತಿಳಿಸಬೇಕೆಂದು ಒತ್ತಾಯ ಮಾಡುತ್ತೇನೆ. ನಾವು ಇಲ್ಲಿ ಸುಮ್ಮನೆ ಹೇಳಿದ್ದನ್ನೇ ವೇಳುತ್ತಿರುವುದು—ಮಂತ್ರಿಗಳೂ ಕೂಡ ಕೇಳಿದ್ದನ್ನೇ ಕೇಳಿ ಏನೋ ಒಂದು ಹೇಳಿದರಾಯಿತೆಂಬುದು ಸರಿಯಲ್ಲ. ಈ ಗ್ರಾಮಸೇವಕರೇನಿದ್ದಾರೆ ಇವರೇ ನಮ್ಮ ಹಳ್ಳಿಯ ಜನಗೆ ಡಾಕ್ಟರು—ಸರ್ಜನ್ನುಗಳು ಮತ್ತು ಸರ್ವವೂ ಆಗಿರುವಾಗ ಇವರನ್ನು ಜನ ಸಾಮಾನ್ಯರು ಅಪೇಕ್ಷಿಸಿದಾಗ ಇವರು ಸಿಕ್ಕುವಂತಿರಬೇಕು. ಇನ್ನು ಈ ಎ.ಇ.ಓ.ಗಳೇನಿದ್ದಾರೆ ಇವರ ಮೇಲಿನ ಅಧಿಕಾರವನ್ನು ಕೆಲವು ಕಡೆ ತಾಲ್ಲೂಕ್ ಬೋರ್ಡಿಗೂ ಇನ್ನು ಕೆಲವು ಕಡೆ ಸಬ್ ಡಿವಿಜನರಿಗೂ ಕೊಡಲಾಗಿದೆ. ಇದು ಸರಿಯಾದ್ದಲ್ಲ. ಹೀಗೆ ಒಬ್ಬರಮೇಲೆ ಇಬ್ಬರಿಗೆ ಅಧಿಕಾರ ವ್ಯಾಪ್ತಿ ಇಟ್ಟಿರುವುದು ಸರಿಯಲ್ಲ. ಇದರಿಂದ ಆ ಬಿ.ಡಿ.ಓ.ಗಳು ಇವರ ಬಗ್ಗೆ ಏನು ಮಾಡುವುದಕ್ಕಾಗುವುದಿಲ್ಲ. ಆದರೆ ಈ ಎ.ಇ.ಓ.ಗಳ ಮೇಲಿನ ಅಧಿಕಾರವನ್ನು ತಾಲ್ಲೂಕ್ ಬೋರ್ಡ್ ಅಧ್ಯಕ್ಷರುಗಳಿಗೆ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಈಗ ತಾಲ್ಲೂಕ್ ಬೋರ್ಡುಗಳಿಗೆ ವ್ಯವಸಾಯಾಭಿವೃದ್ಧಿ ಕೆಲಸಕಾರ್ಯಗಳಿಗೆ ಹೆಚ್ಚಿನ ಗಮನ ಕೊಡಬೇಕಾದ್ದು ಅವುಗಳ ಆದ್ಯಕರ್ತವ್ಯವಾಗಿದೆ. ಅದೊಂದು ಅಬ್ಲಿಗೇಟರ್ ಫಂಕ್ಷನ್. ಆದುದರಿಂದ ಸರ್ಕಾರದವರು ತಾಲ್ಲೂಕ್ ಬೋರ್ಡುಗಳಿಗೆ ಪ್ರಾತ್ಯಕ್ಷತೆಗಳನ್ನು ನಡೆಸತಕ್ಕ ಬಗ್ಗೆ ಹಣದ ಮಿತಿಯನ್ನು ಹಾಕುತ್ತಿದ್ದಾರೆ. ಅದು ನ್ಯಾಯವಾದ್ದಲ್ಲ. ಈ ವಿಚಾರದಲ್ಲಿ ಹಿಂದೆ ಶ್ರೀಮಾನ್ ರಾಚಯ್ಯನವರು ವ್ಯವಸಾಯದ ಮಂತ್ರಿಗಳಾಗಿದ್ದಾಗ ಒಂದು ಮನವಿಯನ್ನೂ ಕೂಡ ಕೊಡಲಾಗಿತ್ತು. ಆದರೆ ಅದರ ಬಗ್ಗೆ ಇಲ್ಲಿಯವರೆಗೂ ಇನ್ನೂ ಯಾವ ತೀರ್ಮಾನವನ್ನೂ ಸರ್ಕಾರದವರು ತೆಗೆದುಕೊಂಡಂತೆ ಕಾಣುತ್ತಿಲ್ಲ. ಆದುದರಿಂದ ಈಗ ಈ ಕೃಷಿ ಸಮಸ್ಯೆಯನ್ನು ಸರ್ಕಾರದವರು ಕೊಡಲೆ ಬಗೆಹರಿಸಬೇಕೆಂದು ನಾನು ಆಗ್ರಹಪೂರ್ವಕವಾಗಿ ಹೇಳುತ್ತೇನೆ.

ಇನ್ನು ಈ ರಾಸಾಯನಿಕ ಗೊಬ್ಬರವನ್ನು ಹಂಚುವುದರಲ್ಲಿ ಬಹಳ ಅವ್ಯವಸ್ಥೆ ಉಂಟಾಗಿದೆ. ನಮ್ಮ ಶಿವಮೊಗ್ಗ ಜಿಲ್ಲೆಗೆ ಬಹಳ ತೊಂದರೆಯಾಗಿದೆ. ಈ ಹಂಚತಕ್ಕ ಗೊಬ್ಬರದಲ್ಲಿ ಎರಡು ಜಾತಿ ಗಳು ಸೇರಿದೆ. ಒಂದು ಪೂಲ್ ಗೊಬ್ಬರ—ಇನ್ನೊಂದು ನಾನ್ ಪೂಲ್ ಗೊಬ್ಬರ. ನಮ್ಮ ರಾಜ್ಯಕ್ಕೆ ಇದು ಎಷ್ಟು ಬೇಕೋ ಅಷ್ಟು ಸಿಕ್ಕದೆ ರೈತರಿಗೆ ಬಹಳ ತೊಂದರೆಯಾಗಿದೆ. ಆದರೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರ ನೀತಿ ಕೂಡ ಸರಿಯಾಗಿಲ್ಲ. ನಮ್ಮ ತೊಂದರೆಗೆ ಅದೂ ಒಂದು ಕಾರಣ. ರಾಜ್ಯ ಸರ್ಕಾರದವರು ಈ ರಾಸಾಯನಿಕ ಗೊಬ್ಬರದ ಹಂಚಿಕೆಯ ಬಗ್ಗೆ ನಾನು ಒಂದು ಸಲಹೆ ಮಾಡುತ್ತೇನೆ. ಈಗ ಯಾವ ರಾಜ್ಯದಲ್ಲಿ ರಾಸಾಯನಿಕ ಗೊಬ್ಬರವನ್ನು ಉತ್ಪತ್ತಿ ಮಾಡುತ್ತಿದ್ದಾರೆ ಆ ರಾಜ್ಯಗಳಿಗೆ ಹೆಚ್ಚು ಗೊಬ್ಬರವನ್ನು ಕೊಡುತ್ತಿದ್ದಾರೆ. ಬೇರೆ ರಾಜ್ಯಗಳ ಬಗ್ಗೆ ಅಲಕ್ಷ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಯಾವ ರಾಜ್ಯದಲ್ಲೇ ತಯಾರು ಮಾಡಲಿ, ಇತರ ರಾಜ್ಯಗಳಿಗೆ ಅಗತ್ಯವಾದ ಪ್ರಮಾಣವನ್ನು ಪೂರೈಸಬೇಕು, ಎಲ್ಲ ರಾಜ್ಯಗಳಿಗೂ ಒಂದೇ ಸಮನಾಗಿ ಹಂಚಬೇಕು. ಇದರ ಬಗ್ಗೆ ರಾಜ್ಯ ಸರಕಾರ ಒತ್ತಾಯ ಮಾಡಬೇಕು. ದಾಕ್ಷಿಣ್ಯಕ್ಕೆ ಮಣಿಯ ಬಾರದು. ಹಾಗೆ ಮಣಿದರೆ ರಾಜ್ಯದ ಹಿತಾಸಕ್ತಿಯನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಇಂದು ಪೂಲ್ ಫರ್ಟಿಲೈಜರ್ಸ್ ಮತ್ತು ನಾನ್-ಪೂಲ್ ಫರ್ಟಿಲೈಜರ್ಸನ್ನು ಎರಡು ರೀತಿಯಲ್ಲಿ ವಿತರಣೆ ಮಾಡುತ್ತಿದ್ದಾರೆ, ಇಂದು ಪೂಲ್ ಫರ್ಟಿಲೈಜರ್ಸನ್ನು ಗ್ರಾಮ ಸೇವಕರು ಮತ್ತು ನಾನ್‌ಪೂಲ್ ಫರ್ಟಿಲೈಜರ್ಸನ್ನು ಎ.ಇ.ಓ. ಹಂಚುವರು. ಇದನ್ನು ತಪ್ಪಿಸಿ ಒಬ್ಬರೇ ಪರ್ಮಿಟ್ ಕೊಡುವ ವ್ಯವಸ್ಥೆ ಮಾಡಬೇಕು. ಇವೆರಡನ್ನೂ ಪ್ರತ್ಯೇಕವಾಗಿ ಹಂಚಿಕೆ ಮಾಡಬಾರದು. ರಾಜ್ಯದ ಎಷ್ಟೇ ಗೊಬ್ಬರ ಬರಲಿ, ಅದನ್ನು ಒಟ್ಟಿಗೆ ಸೇರಿಸಿ ಒಟ್ಟಾಗಿ ಹಂಚಬೇಕು. ಹಂಚುವಾಗ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಏಕಕಾಲದಲ್ಲಿ ಹಂಚಬೇಕು.

3–30 P.M.

ಶ್ರೀ ಎಂ. ಬಿ. ರಾಮಸ್ವಾಮಿ.—ಒಟ್ಟಿಗೆ ಹಂಚುವುದಕ್ಕಾಗುವುದಿಲ್ಲ, ಪೂಲ್ ಫರ್ಟಿಲೈಜರ್ಸ್ ಒಂದು ಸಲ ಮತ್ತು ನಾನ್‌ಫರ್ಟಿಲೈಜರ್ಸ್ ಇನ್ನೊಂದು ಸಲ ಬರುವುದರಿಂದ ಅವೆರಡನ್ನೂ ಕ್ಲಬ್ ಮಾಡಿ ಒಂದೇ ಸಲ ಹಂಚುವುದಕ್ಕಾಗುವುದಿಲ್ಲ. ಈಗಿರುವ ವ್ಯವಸ್ಥೆ ಸರಿಯಾಗಿದೆ. ಆದರೆ ಸೂಪರ್‌ವಿಷನ್ ಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ರಾಜ್ಯಕ್ಕೆ ಗೊಬ್ಬರ ಕೊಡುವಾಗ ಒಂದೇ ಸಾರಿ ಅಲಾಟ್ ಮಾಡಬೇಕು, ಪೂಲ್ ಮತ್ತು ನಾನ್ ಪೂಲ್ ಫರ್ಟಿಲೈಜರ್ಸ್ ಒಂದೇ ಸಲ ಬಂದರೆ ಏಕ ಕಾಲದಲ್ಲಿ ವ್ಯವಸ್ಥಿತವಾಗಿ ಹಂಚಿಕೆ ಮಾಡಲು ಅನುಕೂಲ.

ಶ್ರೀ ಎನ್. ಚಿಕ್ಕೇಗೌಡ.—ಈಗ ಪೂಲ್ ಫರ್ಟಿಲೈಜರ್ಸ್ ಮತ್ತು ನಾನ್ ಪೂಲ್ ಫರ್ಟಿಲೈಜರ್ ಇರುವುದು, ಹೊರದೇಶದಿಂದ ಕೂಡ ನಮ್ಮ ದೇಶಕ್ಕೆ ಗೊಬ್ಬರ ಬಂದು ಹಂಚಿಕೆಯಾಗುವುದು. ಗೊಬ್ಬರವನ್ನು ಆಮದು ಸಹ ಮಾಡಿಕೊಳ್ಳುವರು. ಈಗ ದೇಶದಲ್ಲಿ ನಾನಾ ಕಡೆ ಕಾರ್ಖಾನೆಗಳಲ್ಲಿ ತಯಾರಿಸುವ ಮಿಶ್ರಣ ಗೊಬ್ಬರ ಅಥವ ಸಾರಜನಕ ಗೊಬ್ಬರ ಮುಂತಾದ್ದನ್ನು ಹಿಂದಿನ್ನ ಡೀಲರ್ಸ್ ಅಥವ ಏಜೆಂಟರಿಗೆ ನೇರವಾಗಿ ಕಳಿಸುವರು. ಅವರು ಹಂಚಿದ್ದರ ಮೇಲೆ ಹತೋಟಿ ಇಟ್ಟುಕೊಂಡು ವ್ಯವಸಾಯ ಇಲಾಖೆ ಅಧಿಕಾರಿಗಳು ಹಂಚುವರು ಗೊಬ್ಬರವನ್ನು ಎಲ್ಲಿಗೆ ಹಂಚಬೇಕು, ಯಾವ ರಾಜ್ಯಕ್ಕೆ ಎಷ್ಟು ಹಂಚಬೇಕು ಎಂದು ಇಂಡಿಯಾ ಸರಕಾರದವರು ತೀರ್ಮಾನಿಸುವರು, ಅದರ ಪ್ರಕಾರ ನಮ್ಮ ರಾಜ್ಯಕ್ಕೆ ಅಥವ ಬೇರೆ ರಾಜ್ಯಕ್ಕೆ ಕೊಡುವರು. ಅದನ್ನು ಪರ್ಮಿಟ್ ಮೂಲಕ ರಾಜ್ಯ ಸರಕಾರ ಹಂಚುವುದು.

ಶ್ರೀ ಕಾಗೋಡು ತಿಮ್ಮಪ್ಪ.—ಗೊಬ್ಬರದ ಹಂಚಿಕೆ ಕಾರ್ಯವನ್ನು ಹಿಂದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ವಹಿಸಿದರು ಅವರು ಖಾಸಗಿ ಏಜೆಂಟರ ಮೂಲಕ ಹಂಚಿದರು. ಹಾಗೆ ಹಂಚುವಾಗ ಲಕ್ಷಾಂತರ ರೂಪಾಯಿ ದುರುಪಯೋಗವಾಗಿದೆ, ಇದು ಸರಕಾರಕ್ಕೆ ಗೊತ್ತು, ಈ ಸಭೆಯ ಮುಂದೆ ಈ ವಿಚಾರ ಪ್ರಸ್ತಾಪಿಸಲ್ಪಟ್ಟಿದೆ. ಈ ಸಂಬಂಧದಲ್ಲಿ ಕೆಲವು ಅಧಿಕಾರಿಗಳು ಕಾನೂನಿಗೆ ವಿರೋಧವಾಗಿ ನಡೆದಿದ್ದಾರೆ, ಅವರು ಜವಾಬ್ದಾರಿಯಿಂದ ಕೆಲಸ ಮಾಡಿಲ್ಲ. ಆ ಕಾರಣದಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಕಾರಣವೇನೆಂದರೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಫರ್ಟಿಲೈಜರ್ಸ್‌ನ್ನು ಏಜೆಂಟರಿಗೆ ಕೊಡುವಾಗ ಕೇವಲ ಸಹಕಾರ ಸಂಘಗಳಿಗೆ ಗಳಿಗೆ ಕೊಡಬೇಕು ಎಂಬ ನೀತಿ ಇದ್ದರೂ ಅದನ್ನು ಬಿಟ್ಟು ಖಾಸಗಿಯವರಿಗೆ ಕೊಡುವಾಗ ತಕ್ಕ ಸೆಕ್ಯೂರಿಟಿ ಪಡೆದು ಕೊಡಬೇಕೆಂದಿರುವ ಆರ್ಡರನ್ನು ನಿರ್ಲಕ್ಷ್ಯಮಾಡಿ ಕೊಟ್ಟಿದ್ದಾರೆ, ಶಿವಮೊಗ್ಗ ಮುಂತಾದ ಕಡೆ ಖಾಸಗಿ ಜನರಿಗೆ ಫರ್ಟಿಲೈಜರ್ಸ್ ಏಜೆನ್ಸಿ ಕೊಡುವಾಗ ಸೆಕ್ಯೂರಿಟಿ ಪಡೆಯದೆ ಕೊಟ್ಟುದರಿಂದ ಸುಮಾರು 10 ಲಕ್ಷ ರೂಪಾಯಿ ಬಾಕಿ ಬರಬೇಕಾಗಿದೆ. ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹೀಗೆ ಜವಾಬ್ದಾರಿಯಿಂದ ಕೆಲಸಮಾಡದೆ ಸರಿಯಾದ ವ್ಯವಸ್ಥೆ ಮಾಡದೆ ಖಾಸಗಿಯವರಿಗೆ ಕೊಡಲು ಕಾರಣರು ಯಾರು ? ಈ ವಿಚಾರ ಈ ಸಭೆಯಲ್ಲಿ ಈ ದಿವಸ ಚರ್ಚೆಯಾಗುತ್ತಿಲ್ಲ, ಕಳೆದ ಎರಡು ವರ್ಷಗಳಿಂದಲೂ ಚರ್ಚೆಯಾಗುತ್ತಿದೆ. ಆದರೂ ಕೂಡ ಸಂಬಂಧಪಟ್ಟ ತಪ್ಪಿತಸ್ಥರ ಮೇಲೆ ಯಾವ ಕ್ರಮವನ್ನೂ ತೆಗದುಕೊಂಡಿಲ್ಲ. ಇದರಿಂದ ಏನು ಗೊತ್ತಾಗುವುದೆಂದರೆ ಸರಕಾರದ ಇಲಾಖೆಯ ಕೆಲವು ಅಧಿಕಾರಿಗಳು ಈ ಸಂಬಂಧದಲ್ಲಿ ಪಾಲುದಾರರಾಗಿದ್ದಾರೆಂಬ ಶಂಕೆ ಬರುವುದು. ಆದುದರಿಂದ ಆದಷ್ಟು ಬೇಗ ಈ ರೀತಿಯಾಗಲು ಯಾರು ಕಾರಣರೆಂಬುದನ್ನು ಕಂಡುಹಿಡಿದು ಅವರ ಮೇಲೆ ಸೂಕ್ತ ಕ್ರಮ ತೆಗದುಕೊಳ್ಳಬೇಕು. ತಪ್ಪು ಮಾಡಿದವರು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಇವತ್ತಿನವರೆಗೆ ಇಲಾಖೆಯ ಮೂಲಕ ತನಿಖೆ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಕೊಳ್ಳದಿರಲು ಕಾರಣವಾದರೂ ಏನು ? ಯಾರೋ ಅಧಿಕಾರಿಗಳು ಷರೀಕಾಗಿರಬೇಕು, ಇದೇ ಮುಖ್ಯ ಕಾರಣ. ಸಚಿವರು ಇದನ್ನು ಗಮನಿಸಿ ಈಗಲಾದರೂ ತಪ್ಪಿತಸ್ತರಿಗೆ ಶಿಕ್ಷೆ ಮಾಡಬೇಕು. ಹಾಗ ಮಾಡದಿದ್ದರೆ ಬರಬೇಕಾದ ಹಣ ಬರುವುತಿಲ್ಲ.

ಹಿಂದೆ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನಿಗೆ ಸಂಬಂಧಪಟ್ಟಂತೆ ಕೆ. ಎಚ್. ಪಾಟೀಲರ ಬಗ್ಗೆ ಪಿ.ಯು.ಸಿ. ಕಮಿಟಿಯು ಕೇವಲ ಆರೋಪ ಮಾಡಿತ್ತು. ಮುಖ್ಯಮಂತ್ರಿಗಳು ಅಥವ ಸರಕಾರದವರು ಆ ಸಚಿವರನ್ನು ಅವರ ಮೇಲೆ ಹೊರಿಸಿದ್ದ ಅಪಾದನೆಯಿಂದ ವಿಮುಕ್ತಮಾಡಿದ್ದಾರೆ; ನಿಜ. ಆದರೂ ಕೂಡ ಪಿ.ಯು.ಸಿ. ಕಮಿಟಿಯ ವರದಿಯಲ್ಲಿ ನಮೂದಾಗಿರುವ ಅಪಾದನೆಗಳಿಂದ ಸಂಪೂರ್ಣವಾಗಿ ಸಚಿವರನ್ನು ವಿಮುಕ್ತರನ್ನಾಗಿ ಮಾಡಲು ಸಾಧ್ಯವಿಲ್ಲ ಇದು ಒಂದು ಇಲಾಖೆಗೆ ಸಂಬಂಧಪಟ್ಟ ವಿಷಯ, ಒಂದು ಇಲಾಖೆಯ ಅಧಿಕಾರಿಯು ಮಾಡಿರುವ ವ್ಯವಹಾರ. ಅದು ಟ್ರೆಸಸ್ ಸಾಗಿಸುವ ಕೆಲಸಕ್ಕೆ ಸಂಬಂಧಪಟ್ಟಿರಬಹುದು, ಬುಲ್ಡೋಜರುಗಳಿಗೆ ಸಂಬಂಧಪಟ್ಟಿರಬಹುದು ಅಥವ ಕಬ್ಬಿಣಕ್ಕೆ ಸಂಬಂಧಿಸಿರಬಹುದು; ಲಾರಿ ಕೊಟ್ಟಿರುವುದಕ್ಕೆ ಸಂಬಂಧಪಟ್ಟಿರಬಹುದು. ಈ ಎರಡು ಮೂರು ವ್ಯವಹಾರಗಳಿಗೆ ಸಂಬಂಧಪಟ್ಟಂತೆ ವರದಿಯಲ್ಲಿ ಸ್ಪಷ್ಟವಾದ ಆಕ್ಷೇಪಣೆಗಳಿವೆ. ಕೆಲವು ಅಧಿಕಾರಿಗಳು ತಪ್ಪು ಮಾಡಿದ್ದಾರೆಂದು ತೋರಿಸಿದ್ದಾರೆ. ಅಧಿಕಾರದಲ್ಲಿರುವವರು ಇಲಾಖೆಯಲ್ಲಿ ಇಂಥ ಅಕ್ಷಮ್ಯವಾದ ಲೋಪ ನಡೆದಾಗ ತಕ್ಕ ಕ್ರಮ ಕೈಕೊಳ್ಳಬೇಕಾಗಿತ್ತು, ಕೈಕೊಂಡಿಲ್ಲವೆಂದು ನಾನು ತಿಳಿದಿದ್ದೇನೆ. ಆದುದರಿಂದ ಸಚಿವರು ಈಗಲಾದರೂ ಆ ವರದಿಯಲ್ಲಿರುವ ಕೆಲವು

ತಪ್ಪುಗಳಿಗೆ ಯಾರು ಜವಾಬ್ದಾರರು ಎಂಬುದನ್ನು ತಿಳಿದು ಅವರ ಮೇಲೆ ಕ್ರಮ ಕೈಗೊಳ್ಳಬೇಕು. ಕೈಕೊಳ್ಳದಿದ್ದರೆ ಯಾವಾಗ ಕೈಕೊಳ್ಳಲಾಗುವುದು ಎಂಬುದನ್ನು ತಿಳಿಸಬೇಕೆಂದು ಕೇಳುತ್ತೇನೆ. ಈ ವಿಚಾರದಲ್ಲಿ ಯಾರಿಂದಲಾದರೂ ಒತ್ತಾಯ ಬರಬಹುದು. ಆ ಕಾರಣದಿಂದ ಕೈಬಿಟ್ಟರೆ ಸಂಬಂಧಪಟ್ಟ ಸಮಿತಿಗೆ ಮತ್ತು ಈ ಸಭೆಗೆ ಗೌರವ ತರುವುದಿಲ್ಲ. ಆ ಸಮಿತಿಗ ಮತ್ತು ಈ ಸದನಕ್ಕೆ ಗೌರವ ಕೊಡುವುದಾದರೆ ಆ ವರದಿಯಲ್ಲಿರುವ ಕೆಲವು ಅಂಶಗಳನ್ನು ಪರಿಶೀಲಿಸಿ ಯಾರು ತಪ್ಪು ಮಾಡಿದ್ದಾರೆ ಎಂದು ನೋಡಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸುತ್ತೇನೆ.

ಮಲೆನಾಡಿನ ಬಗ್ಗೆ ಮಾನ್ಯ ಮಂತ್ರಿಗಳಿಗೆ ಒಂದು ಮಾತನ್ನು ಹೇಳಬೇಕಾಗಿದೆ. ಮಲೆನಾಡು ಪ್ರದೇಶ ಪಶುಸಂಗೋಪನೆ ವಿಷಯದಲ್ಲಿ ಬಹಳ ಹಿಂದುಳಿದಿವೆ. ಎಷ್ಟೋ ಉತ್ತಮ ಜಾತಿಯ ತಳಿಗಳು ಬಂದಿವೆ. ಆದರೆ ಈ ಹೊತ್ತಿನವರೆಗೂ ಅದನ್ನು ಮಲೆನಾಡಿನ ಜನ ಅಳವಡಿಸಿಕೊಳ್ಳುವುದಕ್ಕಾಗಿಲ್ಲ. ಅಲ್ಲಿ ಹೇರಳವಾಗಿ ಗೋಮಾಳವಿದೆ, ವಿಸ್ತಾರವಾದ ಪ್ರದೇಶವಿದೆ. ಆದರೂ ಕೂಡ ಉತ್ತಮವಾದ ಜಾನುವಾರು ತಳಿಯನ್ನು ಅಲ್ಲಿಗೆ ಪಡೆಯುವುದಕ್ಕೆ ಆಗಿಲ್ಲ. ಈ ಕ್ಷೇತ್ರದಲ್ಲಿ ಮಲೆನಾಡು ಬಹಳಹಿಂದುಳಿದಿದೆ. ಹಿಲ್ ಟ್ರೈಬ್ ಡೆವಲಪ್‌ಮೆಂಟ್ ಸ್ಕೀಂ ಎಂಬ ಇದೆ. ಅದರಪ್ರಕಾರ ಮಲೆನಾಡಿಗೆ ಅನುಕೂಲವಾಗುವ ರೀತಿಯಲ್ಲಿ ಅತಿ ಶೀಘ್ರವಾಗಿ ಉತ್ತಮ ಜನಗಳ ತಳಿಯನ್ನು ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಜೊತೆಗೆ ಮಲೆನಾಡಿನಲ್ಲಿ ಸಣ್ಣ ಹಿಡುವಳಿದಾರರು ಜಾಸ್ತಿ. ಅವರಿಗೆ ಪಶುಪಾಲನೆಯಲ್ಲಿ ತರಪೇತಿಯನ್ನು ಕೊಟ್ಟರೆ, ಒಳ್ಳೆಯ ತಳಿಯನ್ನು ಒದಗಿಸಿದರೆ ಮಲೆನಾಡು ಪ್ರದೇಶದ ಸಣ್ಣ ಹಿಡುವಳಿದಾರರು ತನ್ನ ಮೂಲಕ ಉಪಕಸುಬನ್ನು ಮಾಡಿ ತಮ್ಮ ಉತ್ಪತ್ತಿಯನ್ನು ಹೆಚ್ಚು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ಪಶುಪಾಲನೆ ವಿಷಯದಲ್ಲ ಮಲೆನಾಡಿನ ಬಗ್ಗೆ ವಿಶೇಷವಾದ ರಿಯಾಯಿತಿಯನ್ನು ತೋರಿಸಬೇಕು ಎಂದು ಹೇಳುತ್ತೇನೆ.

ಗ್ರಾಮಾಂತರ ಪ್ರದೇಶಗಳಲ್ಲಿ ಜಾನುವಾರು ಆಸ್ಪತ್ರೆಗಳಿವೆ. ಅವುಗಳನ್ನು ಇನ್ನೂ ಹೆಚ್ಚು ಮಾಡಬೇಕು. ನಮ್ಮಲ್ಲಿ ಕಾಯಿಲೆ ಬರುವುದು ಜಾಸ್ತಿ. ಗೋಮಾಳ ಹೆಚ್ಚು ಇರುವುದರಿಂದ ಎಲ್ಲ ಜಾನುವಾರುಗಳೂ ಒಂದು ಕಡೆ ಸೇರಿ, ಒಂದೇ ಕಡೆ ಕೂಡಿ ಮೇಯುವುದರಿಂದ ಸುಲಭವಾಗಿ ರೋಗಗಳು ಹರಡುತ್ತವೆ. ಜಾನುವಾರು ಆಸ್ಪತ್ರೆಗಳನ್ನು ತೆರೆಯಲು ಗರಿಷ್ಠ ಪ್ರಮಾಣದ ಜಾನುವಾರು ಸಂಖ್ಯೆಯನ್ನು ಮತ್ತು ವಿಸ್ತೀರ್ಣವನ್ನು ಇಟ್ಟುಕೊಳ್ಳಲಾಗಿದೆ. ಈ ನಿಯಮವನ್ನು ಸಡಿಲ ಮಾಡಿ ಮಲೆನಾಡು ಪ್ರದೇಶದ ಪ್ರತಿಯೊಂದು ಕಡೆಗೂ ಗ್ರಾಮಾಂತರ ಜಾನುವಾರು ಆಸ್ಪತ್ರೆಗಳನ್ನು ಮಂಜೂರು ಮಾಡಬೇಕು. ಎಲ್ಲೆಲ್ಲಿ ಕನಿಷ್ಠಪಕ್ಷ 10 ಸಾವಿರ ಜಾನುವಾರುಗಳು ಸಿಕ್ಕುತ್ತವೆಯೋ ಅಂಥ ಕಡೆಗಳಲ್ಲಿ ಒಂದು ಗ್ರಾಮಾಂತರ ಆಸ್ಪತ್ರೆಯನ್ನು ತೆರೆಯಬೇಕು ಮತ್ತು ಹೆಚ್ಚು ಔಷಧವನ್ನು ಸರಬರಾಜು ಮಾಡುವುದಕ್ಕೂ ಅವಕಾಶ ಮಾಡಬೇಕು. ಈಗ ಕೊಟ್ಟಿರತಕ್ಕ ಗ್ರಾಮಾಂತರ ಪ್ರದೇಶದ ಜಾನುವಾರು ಆಸ್ಪತ್ರೆಗಳ ಪ್ರಮಾಣ ಬಹಳ ಕಡಮೆಯಾಗಿದೆ. ಆದ್ದರಿಂದ ಮಲೆನಾಡು ಪ್ರದೇಶದಲ್ಲಿ ಹೆಚ್ಚು ಜನರು ಅದರ ಪ್ರಯೋಜನವನ್ನು ಪಡೆಯುವುದಕ್ಕಾಗುತ್ತಿಲ್ಲ. ಆ ದೃಷ್ಟಿಯಿಂದ ಮಲೆನಾಡು ಪ್ರದೇಶಕ್ಕೆ ಗ್ರಾಮಾಂತರ ಜಾನುವಾರು ಆಸ್ಪತ್ರೆಯನ್ನು ಹೆಚ್ಚು ಹೆಚ್ಚು ಒದಗಿಸಲು ಸಹಾಯ ಮಾಡಬೇಕೆಂದು ಮಂತ್ರಿಗಳನ್ನು ಕೇಳಿಕೊಂಡು, ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರಲ್ಲಿ, ಸನ್ಮಾನ್ಯ ಕೃಷಿ ಮಂತ್ರಿಗಳು ಮಂಡಿಸಿರುವ ವ್ಯವಸಾಯ, ಪಶುಪಾಲನೆ ಹಾಗೂ ಹಾಲಿನ ಉತ್ಪಾದನೆಗೆ ಸಂಬಂಧಪಟ್ಟ ಇಲಾಖೆಯ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತ ಒಂದೆರಡು ವಿಷಯಗಳನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ರಾಜ್ಯ ವ್ಯವಸಾಯ ಪ್ರಧಾನವಾದ ರಾಜ್ಯ. ಸೇಕಡ 80 ಭಾಗದ ಜನ ವ್ಯವಸಾಯವನ್ನು ಅವಲಂಬಿಸಿ ತಮ್ಮ ಜೀವನವನ್ನು ನಡೆಸುವವರು. ವ್ಯವಸಾಯ ಅಭಿವೃದ್ಧಿಯಾಗದೆ ಇದ್ದರೆ, ವ್ಯವಸಾಯಗಾರರ ಆರ್ಥಿಕ ಮಟ್ಟ, ಉತ್ಪನ್ನ ಹೆಚ್ಚದೆ ಇದ್ದರೆ ದೇಶದ ಪ್ರಗತಿ ಸಾಧ್ಯವಿಲ್ಲವೆನ್ನುವುದು ಎಲ್ಲರೂ ಒಪ್ಪತಕ್ಕ ಮಾತು. ಈ ಹೊತ್ತು ರಾಜ್ಯ ಸರ್ಕಾರದವರು ಎಷ್ಟೇ ಪ್ರಯತ್ನ ಮಾಡಿದರೂ ಕೂಡ, ಪ್ರಕೃತಿಯ ವಿಕೋಪದಿಂದಲೋ ಅಥವಾ ಪರಿಸ್ಥಿತಿಯ ಅಭಾವದಿಂದಲೋ ಅಷ್ಟಾಗಿ ನಾವು ಇದರಲ್ಲಿ ಸಾಧನೆಯನ್ನು ಪಡೆದಿಲ್ಲವೆಂದರೆ ಅತಿಶಯೋಕ್ತಿಯಲ್ಲ ಎನ್ನುವುದನ್ನು ಗಮನಿಸಬೇಕು. ರಾಜ್ಯ ಸರ್ಕಾರದವರು ವ್ಯವಸಾಯದ ಅಭಿವೃದ್ಧಿಗಾಗಿ ಮತ್ತು ವ್ಯವಸಾಯದ ಉತ್ಪನ್ನವನ್ನು ಹೆಚ್ಚಿಸುವುದಕ್ಕೆ ವ್ಯವಸಾಯಗಾರನಿಗೆ ಸಕಾಲದಲ್ಲಿ ಬೀಜ, ಗೊಬ್ಬರ, ಕ್ರಿಮಿನಾಶಕಗಳು ಅಥವಾ ಸಾಲದ ಸೌಲಭ್ಯಗಳಿಗೆ ಅಷ್ಟೇ ವಿಧವಾಗಿ

(ಶ್ರೀ ಎಂ. ಮಲ್ಲಪ್ಪ)

ಅನುಕೂಲತೆಗಳನ್ನು ಒದಗಿಸಿದರೂ ಕೂಡ ವ್ಯವಸಾಯಗಾರನಿಗೆ ಅದರ ಪ್ರತಿಫಲ ದೊರೆಯುತ್ತಿಲ್ಲ. ಅವನು ನಿಜವಾಗಿಯೂ ದಿನೇ ದಿನೇ ಕೃಶನಾಗುತ್ತಿದ್ದಾನೆ. ಅವನು ಪಟ್ಟ ಕಷ್ಟಕ್ಕೆ ಪ್ರತಿಫಲ ದೊರಕದೆ, ಅವನ ಆರ್ಥಿಕ ಸ್ಥಿತಿಯನ್ನು ನೋಡಿದರೆ ಅವನ ಅವಶ್ಯಕತೆಗಳನ್ನು ಪೂರೈಸುವುದಕ್ಕೆ ಮತ್ತು ಪಡೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ಈ ಹೊತ್ತು ಸರ್ಕಾರದವರು ವ್ಯವಸಾಯದ ಅಭಿವೃದ್ಧಿಗೆ ಮತ್ತು ವ್ಯವಸಾಯಗಾರನ ಪ್ರಗತಿಗೆ ಹೆಚ್ಚಿನ ಲಕ್ಷ್ಯ ಕೊಡಬೇಕಾದ್ದು ಅವಶ್ಯಕವೆಂದು ನಾನು ಭಾವಿಸಿದ್ದೇನೆ.

ನಮ್ಮ ರಾಜ್ಯದಲ್ಲಿರುವ ವ್ಯವಸಾಯ ಭೂಮಿಯಲ್ಲಿ ಬಹು ಭಾಗ ಮಳೆಯನ್ನು ಅನುಸರಿಸ ತಕ್ಕ ಭೂಮಿ. ಕೇವಲ 10—12 ಭಾಗ ಮಾತ್ರ ನೀರಾವರಿಗೆ ಒಳಪಟ್ಟಿರತಕ್ಕ ಭೂಮಿ ಇದೆ. ನೀರಾವರಿಗೆ ಒಳಪಡದ ಭೂಮಿ ಮಳೆಯನ್ನು ಅನುಸರಿಸಿರುವ ಭಾಗದಲ್ಲಿ ರೈತ ದೇವರ ಕಡೆ ಕೈ ಮಾಡಿ ಬರತಕ್ಕ ಮಳೆಯನ್ನು ಆಶ್ರಯಿಸಿ ಈ ಹೊತ್ತು ಅದರ ಪ್ರತಿಫಲವನ್ನು ಪಡೆಯಬೇಕಾದ ಕಾಲ ವಾಗಿದೆ. ರೈತರಿಗೆ ಸರ್ಕಾರದವರು ಕೊಡಬೇಕಾದುದು ಹೆಚ್ಚಾಗಿಲ್ಲದಿದ್ದರೂ ನೀರನ್ನು ಒದಗಿಸಿದರೆ ಮಾತ್ರ ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ ಸಾಧ್ಯವಿದೆ. ಬೇರೆ ಯಾವ ಕ್ರಮ ದಿಂದಲೂ ಸಾಧ್ಯವಿಲ್ಲ ಎನ್ನುವುದನ್ನು ಎಲ್ಲರೂ ಒಪ್ಪತಕ್ಕ ಮಾತು. ಕಳೆದ 25 ವರ್ಷಗಳಿಂದ ನೀರಾವರಿ ಅಭಿವೃದ್ಧಿಯನ್ನು ನಮ್ಮ ರಾಜ್ಯದಲ್ಲಿ ಸಾಧಿಸುವುದಾಗಿಲ್ಲ. ಅದಕ್ಕೆ ಸರ್ಕಾರ ಕಾರಣ ವಿರಬಹುದು, ರೈತ ಕಾರಣನಿರಬಹುದು, ಸರ್ಕಾರ ಒದಗಿಸತಕ್ಕ ಅವಕಾಶವನ್ನು ರೈತ ಉಪಯೋಗಿಸಿಕೊಳ್ಳದೆ ತಾನು ಹಿಂದುಳಿದಿರಬಹುದು. ಭೂ ಅಭಿವೃದ್ಧಿ ಬ್ಯಾಂಕುಗಳ ಮೂಲಕ ಬಾವಿಗಳನ್ನು ತೆಗೆದು ನೀರಾವರಿಯ ಅಭಿವೃದ್ಧಿಯನ್ನು ಮಾಡುವುದಕ್ಕೆ ಎಷ್ಟೋ ಸಾಲಸೌಲಭ್ಯ ಗಳನ್ನು ಸರ್ಕಾರ ಒದಗಿಸುತ್ತಿದೆ. ಆದರೂ ಕೂಡ ರೈತರು ಮುಂದೆ ಬರುತ್ತಿಲ್ಲ. ಕಾರಣವಾದರೂ ಅದರ ಬಗ್ಗೆ ತಕ್ಕ ಪ್ರಚಾರವಿಲ್ಲ. ನೀರಾವರಿ ಬಾವಿಗೆ ಸಾಲವನ್ನು ತೆಗೆದುಕೊಳ್ಳುವುದರಿಂದ ತನ್ನ ವ್ಯವಸಾಯದ ಅಭಿವೃದ್ಧಿಯನ್ನು ಸಾಧಿಸಿಕೊಂಡು ಉತ್ಪತ್ತಿಯನ್ನೂ ಹೆಚ್ಚು ಮಾಡಿಕೊಳ್ಳಬಹುದು ಎನ್ನುವ ವಿಶ್ವಾಸ ಮೂಡಿದರೆ ಅವನು ಖಂಡಿತವಾಗಿ ಮುಂದೆ ಬರುತ್ತಾನೆ. ಆದರೆ ಒಂದು ಸಲ ತಾನು ಸಾಲಮಾಡಿದರೆ ತನಗೆ ಇರತಕ್ಕ ಭೂಮಿ ಎಲ್ಲಿ ಕೈಬಿಟ್ಟುಹೋಗುತ್ತದೆಯೋ ಭವಿಷ್ಯವೇನಾಗು ತ್ತದೆಯೋ ಎನ್ನುವ ಅಪನಂಬಿಕೆ ಇರುವುದರಿಂದ ಸಾಲದ ಸೌಲಭ್ಯವನ್ನು ಪಡೆಯುವುದಕ್ಕೆ ಮುಂದೆ ಬರುತ್ತಿಲ್ಲ. ಅದಕ್ಕಾಗಿ ಸರ್ಕಾರದವರು ಹೆಚ್ಚು ಪ್ರಚಾರ ಮಾಡಬೇಕಾಗಿದೆ.

ಸರ್ಕಾರದಲ್ಲಿರತಕ್ಕ ರಿಗ್ಸ್ ಎಲ್ಲ ಜಿಲ್ಲೆಗಳಿಗೂ ಒದಗಿಸಿ ಎಲ್ಲೆಲ್ಲಿ ಭೂಮಿಯಲ್ಲಿ ನೀರಿದೆಯೋ ಅಂಥ ಕಡೆ ರಿಗ್ಸ್ ಸಹಾಯದಿಂದ ಬಾವಿಗಳನ್ನು ತೋಡಿಸಿ, ಅವುಗಳಿಗೆ ವಿದ್ಯುತ್ ಪಂಪ್‌ಸೆಟ್‌ಗಳನ್ನು ಹಾಕಿ ನೀರನ್ನು ಒದಗಿಸುವುದಾದರೆ ನಿಜವಾಗಿಯೂ ರೈತ ಹೆಚ್ಚು ಬೆಳೆಯುವುದಕ್ಕೆ ಅನುಕೂಲ ವಾಗುತ್ತದೆ.

ಸರ್ಕಾರ ಒದಗಿಸತಕ್ಕ ಗೊಬ್ಬರದ ವಿಚಾರದಲ್ಲಿಯೂ ಎಷ್ಟು ಕಷ್ಟವಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಮಾತು. ಗೊಬ್ಬರದ ಹಂಚಿಕೆಯಲ್ಲಿ ಎಷ್ಟೋ ದುರುಪಯೋಗವಾಗುತ್ತಿದೆ. ಗೊಬ್ಬರವನ್ನು ಹಂಚುವವನು ಅಥವಾ ಮಾರಾಟ ಮಾಡುವ ವರ್ತಕ ಇವರೆಲ್ಲರೂ ಕೂಡಿ ಮಾಡುವ ದುರ್ನಡತೆಯ ಫಲವಾಗಿ ರೈತನಿಗೆ ಗೊಬ್ಬರ ಸಕಾಲಕ್ಕೆ ಸಿಕ್ಕುತ್ತಿಲ್ಲ. ಮಾರುಕಟ್ಟೆಯಲ್ಲಿರತಕ್ಕ ಗೊಬ್ಬರವನ್ನು ಹೆಚ್ಚು ಬೆಲೆಗೆ ಕೊಂಡು ರೈತನಾದವನು ಭೂಮಿಯನ್ನು ಹದ ಮಾಡಿ ಹೆಚ್ಚು ಬೆಳೆ ಯನ್ನು ಬೆಳೆಯುವುದು ಬಹಳ ಕಷ್ಟದ ಮಾತು. ಈ ಹೊತ್ತು ರೈತನಾದವನು ಬೀಜಕ್ಕೆ, ಗೊಬ್ಬರಕ್ಕೆ ಹೆಚ್ಚು ಬೆಲೆ ತೆರಬೇಕಾಗಿದೆ. ಇದರ ಜೊತೆಗೆ ಎತ್ತುಗಳಿಂದ ಬೇಸಾಯ ಮಾಡುವುದು ಕಷ್ಟಸಾಧ್ಯ ವಾದ ವಿಷಯ. ಇದು ತಮಗೆಲ್ಲರಿಗೂ ಮನವರಿಕೆಯಾಗಿರಲೇ ಬೇಕು. ಈ ಹೊತ್ತು ಒಂದು ಜೊತೆ ಎತ್ತುಗಳು ಎರಡು ಸಾವಿರ ರೂಪಾಯಿ ಕೊಟ್ಟರೂ ಸಿಕ್ಕುತ್ತಿಲ್ಲ. ಪಶುಪಾಲನೆ ಇಲಾಖೆ ಯವರು ಅಲ್ಲಲ್ಲಿ ಅಮೃತಮಹಲ್ ದನಗಳನ್ನು ಮಾರಾಟ ಮಾಡುವ ವ್ಯವಸ್ಥೆ ಮಾಡಿದ್ದಾರೆ. ಅಲ್ಲಿ ಮಾರಾಟವಾಗುವ ದನಗಳ ಬೆಲೆಗಳನ್ನು ನೋಡಿದರೆ ಎಂಥವರಿಗೂ ಎದೆ ಝಲ್ ಎನ್ನುತ್ತದೆ. ಎರಡು ಎತ್ತುಗಳನ್ನು 4500 ರೂಪಾಯಿಗಳಿಗೆ ಮಾರಾಟ ಮಾಡಿದ್ದಾರೆಂದರೆ ಎತ್ತುಗಳ ಬೆಲೆ ಎಷ್ಟು ದುಬಾರಿಯಾಗಿವೆ, ರೈತ ನಿಜವಾಗಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಒಂದು ಜೊತೆ ಎತ್ತುಗಳನ್ನು ಒಬ್ಬ ರೈತ ಸಾಕಬೇಕಾದರೆ ಕನಿಷ್ಟಪಕ್ಷ ಎರಡು ಸಾವಿರ ರೂಪಾಯಿ ಖರ್ಚು ಬರುತ್ತದೆ. ಅವನು ತನ್ನ ಸಂಸಾರವನ್ನು ಸಾಗಿಸಿ, ತನ್ನ ಜಮೀನನ್ನು ಅಭಿವೃದ್ಧಿಪಡಿಸಿಕೊಂಡು ಎಷ್ಟುಮಟ್ಟಿಗೆ ಬೆಳೆಯನ್ನು ಬೆಳೆಯಬೇಕು, ಮತ್ತು ನೀರಾವರಿ ಸೌಲಭ್ಯವನ್ನು ಕೊಡದೆ ಇದ್ದರೆ ಅವನಿಗೆ ಎಷ್ಟು ಹಾನಿಯಾಗುತ್ತದೆ ಎನ್ನುವುದನ್ನು

ನಾವು ಯೋಚನೆ ಮಾಡಬೇಕು. ಮಳೆ ಬಾರದೆ ಇದ್ದರೆ ಸರ್ಕಾರ ಏನೂ ಮಾಡುವುದಕ್ಕಾಗುವುದಿಲ್ಲ. ಅದು ಪ್ರಕೃತಿ ನಿಯಮ. ಅದನ್ನು ಮೀರಿ ನಡೆಯುವುದಕ್ಕಾಗುವುದಿಲ್ಲ. ನಾವು ಬೇಕು ಎಂದಾಗ ಮಳೆ ಬರುವುದಿಲ್ಲ. ಆದ್ದರಿಂದ ನಮಗೆ ಇರತಕ್ಕ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ರೈತನಿಗೆ ಹೆಚ್ಚು ಅನುಕೂಲವನ್ನು ಒದಗಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ಹೇಳಬಯಸುತ್ತೇನೆ.

ನಮ್ಮ ರಾಜ್ಯದಲ್ಲಿ ಒರಟು ಧಾನ್ಯಗಳಿಗೆ ಕೊರತೆ ಇಲ್ಲ. ಎಲ್ಲೆಲ್ಲಿಯೂ ರಾಗಿ, ಜೋಳ ಇವೆಲ್ಲವೂ ತಕ್ಕಮಟ್ಟಿಗೆ ದೊರೆಯುತ್ತಿವೆ. ಆದರೆ ಬೇಳೆ ಕಾಳಿನ ಕೊರತೆ ಇದೆ. ನಮ್ಮ ರಾಜ್ಯದಲ್ಲಿ ನಾಲ್ಕೈವರೆ ಲಕ್ಷ ಟನ್ ಬೇಳೆ ಕಾಳಿನ ಕೊರತೆ ಇದೆ. ಅದನ್ನು ಬೆಳೆಯುವುದಕ್ಕೆ ಹೆಚ್ಚು ಪ್ರೋತ್ಸಾಹ ವನ್ನು ರೈತರಿಗೆ ನೀಡಬೇಕು ಮತ್ತು ಒಳ್ಳೆಯ ಬೀಜವನ್ನು ಒದಗಿಸುವುದು, ಅವುಗಳಿಗೆ ಸಬ್ಸಿಡಿ ಕೊಡುವುದು, ಅದಕ್ಕೆ ಉತ್ತಮವಾದ ಗೊಬ್ಬರವನ್ನು ಒದಗಿಸುವುದು, ಈ ರೀತಿಯ ಉತ್ತೇಜನ ವನ್ನು ಕೊಟ್ಟರೆ ನಮ್ಮ ರಾಜ್ಯದಲ್ಲಿರುವ ಬೇಳೆ ಕಾಳಿನ ಕೊರತೆಯನ್ನು ಕಡಮೆ ಮಾಡಿಕೊಳ್ಳ ಬಹುದು ಎಂದು ಸಲಹೆ ಮಾಡುತ್ತೇನೆ. ಇನ್ನೊಂದು ವಿಷಯವೇನೆಂದರೆ ರೈತ ತಾನು ಬೆಳೆದ ಬೆಳೆಗೆ ಇವೊತ್ತು ಸರಿಯಾದ ಬೆಲೆ ಅವನಿಗೆ ಸಿಗುತ್ತಿಲ್ಲ. ರೈತ ಬೆಳೆದ ಬೆಳೆಯನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದಾಗ ಅವನಿಗೆ ಕಡಿಮೆ ಬೆಲೆ ಸಿಗುತ್ತದೆ. ಇದಕ್ಕಾಗಿ ಅವನು ಕೆಲವು ಕಾಲ ತಾನು ಬೆಳೆದ ಬೆಳೆಯನ್ನು ಶೇಖರಿಸಿಟ್ಟುಕೊಂಡು ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಬಂದಾಗ ಅದನ್ನು ಮಾರಿ ಅದರಿಂದ ಲಾಭ ಸಂಪಾದನೆ ಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ರೈತ ಬೆಳೆಯುವ ಭತ್ತ ಇಲ್ಲವೇ ರಾಗಿಗಾಗಲೀ ರೈತನಿಗೆ ಅದನ್ನು ಬೆಳೆಯಲು ಎಷ್ಟು ಖರ್ಚಾಗುತ್ತದೆ ಎನ್ನುವುದನ್ನು ಸರಕಾರವೇ ನಿಗದಿ ಮಾಡಿ ಆ ನಂತರ ರೈತನು ಬೆಳೆದ ಬೆಳೆಗೆ ಸಪೋರ್ಟಿಂಗು ಪ್ರೈಸ್‌ನ್ನು ಸರಕಾರವೇ ನಿಗದಿ ಮಾಡಬೇಕು. ಇದಕ್ಕಾಗಿ ಕೆಲವು ಬೆಳೆಗಳ ಬಗ್ಗೆ ಎಕ್ಸ್‌ಪರಿಮೆಂಟು ಮಾಡಿ ನೋಡಬಹುದು. ಭತ್ತಕ್ಕೆ ಎಷ್ಟು ಖರ್ಚು ಬರುತ್ತದೆ, ಖುಷ್ಕಿ ಬೆಳೆ ಎಂದರೆ ರಾಗಿ ಬೆಳೆಯಲು ಎಷ್ಟು ಖರ್ಚು ಬರುತ್ತದೆ ಅದರಂತೆ ಖರ್ಚನ್ನು ನಿಗದಿ ಮಾಡಿ ಅದಕ್ಕೆ ಸಪೋರ್ಟಿಂಗು ಪ್ರೈಸು ಹೀಗಿರಬೇಕು ಎಂದು ನಿಗದಿ ಮಾಡುವುದರಲ್ಲಿ ಸರಕಾರ ಹಿಂದು ಮುಂದು ನೋಡಬಾರದು. ಇನ್ನು ಸಣ್ಣ ರೈತರ ಆವಶ್ಯಕತೆಗಳನ್ನು ನೋಡಿ ಅವರಿಗೆ ಬೇಕಾದ ಬೀಜ, ಗೊಬ್ಬರ ಕ್ರಿಮಿನಾಶಕ ಔಷಧಿಗಳು, ಅವನಿಗೆ ಬೇಕಾಗುವ ಸಾಲದ ಸೌಲಭ್ಯಗಳು ಇವನ್ನೆಲ್ಲಾ ಒದಗಿಸಿಕೊಡಬೇಕು. ಇವನ್ನು ಒದಗಿಸಿಕೊಟ್ಟರೆ ಅವನು ಬೆಳೆ ಬೆಳೆಯಲು ಸ್ವಲ್ಪಮಟ್ಟಿಗೆ ಸಹಾಯ ವಾಗುತ್ತದೆ. ದೊಡ್ಡ ರೈತರುಗಳಾಗಿರುವವರು ಟ್ರಾಕ್ಟರು ಇತ್ಯಾದಿಗಳನ್ನುಪಯೋಗಿಸಿಕೊಂಡು ಜಮೀನನ್ನು ಉತ್ತು ವ್ಯವಸಾಯ ಮಾಡುತ್ತಾರೆ. ಆದರೆ ಸಣ್ಣ ರೈತರಿಗೆ ಟ್ರಾಕ್ಟರುಗಳನ್ನು ಉಪಯೋಗಿಸಲಾಗುವುದಿಲ್ಲ. ಆದರೆ ಇಂದಿನ ಬೆಲೆಗಳು ಇರುವ ಪರಿಸ್ಥಿತಿಯಲ್ಲಿ ದೊಡ್ಡ ರೈತರಾಗಿ ರುವವರು ಸಣ್ಣ ರೈತರಂತಾಗುತ್ತಿದ್ದಾರೆ. ಇಂತಹ ಕಾಲ ಈಗ ಸನ್ನಿಹಿತವಾಗುತ್ತಿದೆ. ಇಂದು ನಮ್ಮ ವ್ಯವಸಾಯದ ಇಲಾಖೆಯವರು ಕೂಡ ರೈತರು ಹೆಚ್ಚು ಹೆಚ್ಚು ಟ್ರಾಕ್ಟರುಗಳು ಹಾಗೂ ಬುಲ್‌ಡೋಜರುಗಳನ್ನುಪಯೋಗಮಾಡಬೇಕೆಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ವ್ಯವಸ್ಥೆ ಮಾಡು ತ್ತಿದ್ದಾರೆ. ಇದನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮೂಲಕ ಮಾಡುತ್ತಿದ್ದಾರೆ. ಇಂತಹ ಕೇಂದ್ರಗಳನ್ನು ಬರೀ ಜಿಲ್ಲಾ ಕೇಂದ್ರಗಳಲ್ಲಿ ತೆರೆಯದೆ ತಾಲ್ಲೂಕ್ ಮಟ್ಟದಲ್ಲೂ ಕೇಂದ್ರ ಗಳನ್ನು ತೆರೆಯುವ ವ್ಯವಸ್ಥೆ ಮಾಡಿದರೆ ಇದರಿಂದ ರೈತರಿಗೆ ಅನುಕೂಲವಾಗುತ್ತದೆ. ಇದಕ್ಕಾಗಿ ಸರಕಾರ ಹೆಚ್ಚು ಹೆಚ್ಚು ರೈತರುಗಳಿಗೆ ಸಹಾಯ ಮಾಡಲು ಇಂತಹ ಕೇಂದ್ರಗಳನ್ನು ಎಲ್ಲ ತಾಲ್ಲೂಕು ಗಳಲ್ಲೂ ತೆರೆಯಬೇಕೆಂದು ಮತ್ತೊಮ್ಮೆ ಸರಕಾರಕ್ಕೆ ಇಲ್ಲಿ ಒತ್ತಿ ಹೇಳಬಯಸುತ್ತೇನೆ.

ಇನ್ನು ಪಶುಪಾಲನೆ ಇಲಾಖೆ ಬಗ್ಗೆ ಹೇಳುವುದಾದರೆ, ನಮ್ಮ ಸರಕಾರ ಪಶುಪಾಲನೆ ಬಗ್ಗೆ ಮೊದಲಿಂದಲೂ ವಿಶೇಷವಾದ ಆಸಕ್ತಿ ವಹಿಸುತ್ತಿತ್ತು. ಇಂದು ರೈತರು ಕೂಡ ಪಶುಪಾಲನೆ ವಿಚಾರದಲ್ಲಿ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಇದು ಎಲ್ಲರೂ ಒಪ್ಪತಕ್ಕ ಮಾತು. ನನಗೆ ತಿಳಿದಂತೆ ಈ ವರ್ಷ ಸುಮಾರು ಒಂದು ನೂರ ನಲವತ್ತು ರೂರಲ್ ಡಿಸ್‌ಪೆನ್‌ಸರಿಗಳನ್ನು ಸರಕಾರ ತೆರೆದಿವೆ. ಹಿಂದೆ ನಮ್ಮ ರಾಜ್ಯದಲ್ಲಿ ಯಾವಾಗಲೂ ಇಷ್ಟು ಆಸ್ಪತ್ರೆಗಳನ್ನು ತೆರೆದಿರಲಿಲ್ಲ. ಒಂದೇ ಒಂದು ವರ್ಷದಲ್ಲಿ ಇಷ್ಟು ಆಸ್ಪತ್ರೆಗಳನ್ನು ತೆರೆದಿರುವುದನ್ನು ನೋಡಿದರೆ ನಿಜವಾಗಿಯೂ ಸರಕಾರ ಯಾವ ಮಟ್ಟದಲ್ಲಿ ರೈತರಿಗೆ ಸಹಾಯ ಮಾಡುತ್ತಿದೆ ಎನ್ನುವುದು ಇದರಿಂದ ನಮಗೆ ಗೊತ್ತಾಗುತ್ತದೆ. ನಿಜವಾಗಿಯೂ ಸುಮಾರು ಹತ್ತು, ಹದಿನೈದು ಸಾವಿರ ರಾಸುಗಳಿರುವ ಪ್ರದೇಶಗಳಲ್ಲಿ ವೆಟರ್‌ನರಿ ಡಿಸ್‌ಪೆನ್‌ಸರಿಗಳನ್ನು ಒದಗಿಸಬೇಕೆಂದು ಮಾಡಿದ್ದಾರೆ. ಇದಲ್ಲದೆ ತಾಲ್ಲೂಕಾ ಮಟ್ಟದಲ್ಲಿರುವ ಕೆಲವು ವೆಟರ್‌ನರಿ ಡಿಸ್‌ಪೆನ್‌ಸರಿಗಳನ್ನು ಕೂಡ ಅಪ್‌ಗ್ರೇಡು ಮಾಡಿ ದ್ದಾರೆ. ಇದೊಂದು ಸ್ವಾಗತಾರ್ಹವಾದ ವಿಚಾರ. ಇದಕ್ಕಾಗಿ ನಾನು ಸರಕಾರವನ್ನು

(ಶ್ರೀ ಎಂ ಮಲ್ಲಪ್ಪ)

ಅಭಿನಂದನೆ ಮಾಡುತ್ತೇನೆ. ನಮ್ಮ ಸರಕಾರ ರೈತರಿಗೇನು ಕಷ್ಟಗಳಿವೆ ಎನ್ನುವುದನ್ನು ಅರಿತು ಕೊಂಡಿದೆ. ರೈತ ಒಂದು ಎತ್ತನ್ನು ಕೊಂಡುಕೊಳ್ಳಬೇಕಾದರೆ ಎಷ್ಟು ಕಷ್ಟವಿದೆ ಎನ್ನುವುದು ಗೊತ್ತು ಮತ್ತು ಇವನ್ನು ಕಾಪಾಡಬೇಕವದರೂ ಇದರ ಖರ್ಚು ಹೆಚ್ಚಾಗುತ್ತಿದೆ. ಇದಲ್ಲದೆ ಆಗಾಗ್ಗೆ ಎತ್ತುಗಳಿಗೆ ಕಾಲು ಜ್ವರ, ರಿಂಡರುಪೆಸ್ಟ್ ಇತ್ಯಾದಿ ವ್ಯಾಧಿಗಳು ಬರುತ್ತವೆ. ಇವನ್ನೆಲ್ಲಾ ತಡೆಗಟ್ಟಲು ಸಾಕಷ್ಟು ಪ್ರಯತ್ನ ಮಾಡಿ ರೈತರು ಎತ್ತುಗಳನ್ನು ಸಾಕಲು ಸರಿಯಾದ ಉತ್ತೇಜನ ಕೊಟ್ಟು ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಎತ್ತುಗಳಿಗೆ ಒಂದೊಂದು ಸಲ ದೊಡ್ಡ ರೋಗ ಬರುತ್ತವೆ. ಇದನ್ನು ತಡೆಗಟ್ಟಲು ಶೀಘ್ರವಾದ ಕ್ರಮ ತೆಗೆದುಕೊಂಡು ರೈತರಿಗೆ ಸಹಾಯ ಮಾಡಬೇಕಾದುದು ಬಹಳ ಪ್ರಾಮುಖ್ಯವಾದುದು. ಕೃಷಿ ಮಾಡುವ ರೈತರಿಗೆ ಎಲ್ಲ ಸಂಪನ್ಮೂಲಗಳನ್ನೂ ಹೆಚ್ಚು ಹೆಚ್ಚಾಗಿ ಉಪಯೋಗಿಸಿಕೊಳ್ಳಬೇಕು. ನನ್ನ ಕ್ಷೇತ್ರದಲ್ಲಿ ಎಮ್ಮೆ ದೊಡ್ಡಿ ಅಮೃತ ಮಹಲ್ ಕಾವಲು ಎಂದು ಇದೆ. ಇದು ಸುಮಾರು ಆರನೂರು ಎಕರೆಯಷ್ಟು ವಿಸ್ತಾರವಾಗಿದೆ. ಸರಕಾರ ಪ್ರತಿ ವರ್ಷವೂ ಇದಕ್ಕೆ ಐದುಸಾವಿರ ರೂಪಾಯಿಗಳಷ್ಟು ಖರ್ಚು ಮಾಡುತ್ತಿದೆ. ಇಲ್ಲಿ ಹುಲ್ಲು ಬೆಳೆಯಲು ಎಲ್ಲ ಸೌಕರ್ಯಗಳೂ ಇವೆ. ನೀರು ಇದೆ. ಸರಕಾರ ಇದರ ಬಗ್ಗೆ ಇನ್ನೂ ಹೆಚ್ಚು ದಕ್ಷತೆಯಿಂದ ಇದನ್ನು ಅಭಿವೃದ್ಧಿ ಮಾಡಿದರೆ ಇದರಿಂದ ಹೆಚ್ಚು ಉಪಯೋಗವಾಗುತ್ತದೆ. ಇಲ್ಲಿ ಬೆಳೆಯುವ ಹುಲ್ಲನ್ನು ಇತರ ಕಡೆಗಳಿಗೂ ಕಳುಹಿಸಬಹುದು. ಇದರ ಬಗ್ಗೆ ಸರಕಾರ ಇನ್ನೂ ಹೆಚ್ಚು ಗಮನ ಕೊಟ್ಟು ರೈತರಿಗೆ ಸಹಾಯ ಮಾಡಬೇಕೆಂದು ಹೇಳುತ್ತೇನೆ ಮತ್ತು ಇಲ್ಲಿ ಹೆಚ್ಚು ರಾಸುಗಳನ್ನು ಬೆಳೆಯಲು ತಳಿಗಳನ್ನು ಅಭಿವೃದ್ಧಿ ಮಾಡಿದರೆ ಹೆಚ್ಚು ಹಾಲು ಶೇಖರಣೆ ಮಾಡಲೂ ಸಹಾಯವಾಗುತ್ತದೆ. ಹಾಲಿನ ಉತ್ಪಾದನೆ ಜಾಸ್ತಿ ಮಾಡಲು ಇಲ್ಲಿ ಡೈರಿಗಳನ್ನು ತೆರೆಯಬಹುದು. ಇದರಿಂದ ಬಹಳ ಅನುಕೂಲವಾಗುತ್ತದೆ. ಇಂದು ಪಟ್ಟಣಗಳಲ್ಲೆನೋ ಡೇರಿಗಳನ್ನು ಮಾಡುತ್ತಿದ್ದಾರೆ. ಆದರೆ ಗ್ರಾಮಾಂತರ ಪ್ರದೇಶಗಳಲ್ಲಿ ನೋಡಿದರೆ ಹಾಲಿನ ಉತ್ಪನ್ನ ಕಡಿಮೆ ಎನ್ನುವುದು ಗೊತ್ತಾಗುತ್ತದೆ ಇದಕ್ಕಾಗಿ ಹಳ್ಳಿಗಳ ಕಡೆ ಕೂಡ ಹುಲ್ಲು ಬೆಳೆಯುವ ಪ್ರದೇಶವನ್ನು ಅಭಿವೃದ್ಧಿ ಮಾಡಬೇಕು. ನಮ್ಮ ಕ್ಷೇತ್ರಕ್ಕೆ ಸಮೀಪದಲ್ಲೇ ಅಜ್ಜಂಪುರದಲ್ಲಿ ಕ್ಯಾಟಲ್ ಬ್ರೀಡಿಂಗು ಸ್ಟೇಷನ್ ಎಂದು ಇದೆ, ಬೀರೂರಿನಲ್ಲಿ ಅಮೃತಮಹಲ್ ಕಾವಲ್ ಇದೆ. ಇವೆರಡು ಫಾರಂಗಳನ್ನೂ ಹೆಚ್ಚು ಹೆಚ್ಚು ಅಭಿವೃದ್ಧಿ ಮಾಡಬೇಕು. ಇದರಲ್ಲಿ ನಾವು ನೋಡಿರುವ ಹಾಗೆ ಇಲ್ಲಿ ಜೋಳ, ರಾಗಿ ಇತ್ಯಾದಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಕೆಲವು ಕಡೆ ರೈತರು ಹೈ ಬ್ರಿಡ್ ಜೋಳವನ್ನೂ ಬೆಳೆಯುತ್ತಿದ್ದಾರೆ. ಇದರಿಂದ ಇಲ್ಲಿನ ಸುತ್ತಮುತ್ತ ಇರುವ ಜನರು ಕೂಡ ನೋಡಿ ತಮ್ಮ ಜಮೀನಿನಲ್ಲೂ ಇಂತಹ ಬೆಳೆಗಳನ್ನು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ಹೆಚ್ಚು ಉತ್ಪಾದನೆ ಮಾಡಲು ಒಂದು ಅವಕಾಶ ಸಿಕ್ಕಿದೆ. ರೈತರಿಗೆ ಈ ದೃಷ್ಟಿಯಲ್ಲಿ ಹೆಚ್ಚು ಹೆಚ್ಚು ಅನುಕೂಲಗಳನ್ನು ಇಲಾಖೆಯವರು ಒದಗಿಸಿಕೊಟ್ಟರೆ ಇದರಿಂದ ಹೆಚ್ಚು ಉತ್ಪನ್ನ ಮಾಡಲು ಸಹಾಯವಾಗುತ್ತದೆ.

ಇನ್ನು ರೈತರಿಗೆ ಮುಖ್ಯವಾಗಿ ಬೇಕಾಗಿರುವುದು ಗೊಬ್ಬರ. ಎಲ್ಲರೂ ಸೀಮೆ ಗೊಬ್ಬರ ಉಪಯೋಗಿಸಬೇಕೆಂದರೆ ಅದು ಸಾಕಷ್ಟು ಸಿಗುವುದಿಲ್ಲ ಇದಕ್ಕಾಗಿ ಬೇರೆ ರೀತಿಯಾದ ಗೊಬ್ಬರಗಳು ಎಂದರೆ ಕಾಂಪೋಸ್ಟು ಗೊಬ್ಬರ, ಹಸಿರೆಲೆ ಗೊಬ್ಬರ ಇತ್ಯಾದಿ ವಿಧವಾದ ಗೊಬ್ಬರಗಳನ್ನು ಹಳ್ಳಿಗಳಲ್ಲಿ ತಯಾರುಮಾಡಿ ಇದರಿಂದ ರೈತರು ತಮ್ಮ ಬೆಳೆಗಳನ್ನು ಬೆಳೆಯಲು ಸಹಾಯವಾಗುತ್ತದೆ. ಇದರ ಕಡೆಗೆ ಹೆಚ್ಚು ಹೆಚ್ಚು ಗಮನ ಕೊಟ್ಟು ಸರಕಾರ ರೈತರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿಕೊಡಬೇಕು. ಇದರಲ್ಲಿ ಇಲಾಖೆಯವರು ರೈತರಿಗೆ ಸರಿಯಾದ ತಿಳುವಳಿಕೆ ಕೊಡಲು ಇಲಾಖೆಯಲ್ಲಿರುವವರೇ ರೈತರ ಜಮೀನು ಬಳಿ ಹೋಗಿ ಅವನಿಗೆ ಏನೇನು ಕಷ್ಟಗಳಿವೆ ಮತ್ತು ಯಾವ ರೀತಿ ಸಹಾಯವನ್ನು ಇಲಾಖೆಯ ಮೂಲಕ ಮಾಡಬಹುದು ಎನ್ನುವುದನ್ನು ರೈತರಿಗೆ ತಿಳಿಯುವಂತೆ ಹೇಳಿ ಕೃಷಿ ಇಲಾಖೆ ಅವರಿಗೆ ನೆರವಾಗಬಹುದು. ಇದರಿಂದ ರೈತರಿಗೂ ಕೂಡ ಇಲಾಖೆಯವರ ಬಗ್ಗೆ ಒಂದು ರೀತಿಯ ವಿಶ್ವಾಸ ಹುಟ್ಟುತ್ತದೆ ಮತ್ತು ಹೆಚ್ಚು ಕ್ರಾಂತಿಕಾರಕವಾದ ಸುಧಾರಣೆಗಳನ್ನು ಮಾಡಲೂ ಸಹಾಯವಾಗುತ್ತದೆ. ಇಂತಹ ಒಂದು ವ್ಯವಸ್ಥೆಯನ್ನು ವ್ಯವಸಾಯ ಕ್ಷೇತ್ರದಲ್ಲಿ ಮಾಡಬೇಕು ಎಂದು ಇಲ್ಲಿ ಒತ್ತಾಯಪೂರ್ವಕವಾಗಿ ಹೇಳುತ್ತೇನೆ. ನಿಜವಾಗಿಯೂ ಇಂದು ನಮ್ಮ ವ್ಯವಸಾಯದ ಇಲಾಖೆ ಪ್ರಶಂಸನೀಯವಾದ ಕಾರ್ಯಗಳನ್ನು ಮಾಡುತ್ತಿದೆ. ಅದರಲ್ಲೂ ನಮ್ಮ ಈ ವ್ಯವಸಾಯ ಇಲಾಖೆಯ ಮಂತ್ರಿಗಳು ಸ್ವತಃ ವ್ಯವಸಾಯಗಾರರೇ ಆಗಿದ್ದಾರೆ, ಅವರೇ ತಮಗಾಗಿರುವ ಮೂರು ನಾಲ್ಕು ಎಕರೆಗಳ ಜಮೀನಿನಲ್ಲಿ ಸುಮಾರು ಇಪ್ಪತ್ತು, ಮುವತ್ತು ಸಾವಿರ ರನ್ನಿನಷ್ಟು ಟೊಮೇಟೋ ಬೆಳೆಯಲು ಸ್ವತಃ ಅವರೇ ಹೋಗಿ

ಕೆಲಸ ಮಾಡಿದ್ದಾರೆ. ರೈತರ ಅಭಿವೃದ್ಧಿ ವಿಷಯದಲ್ಲಿ ಮತ್ತು ವ್ಯವಸಾಯದ ಅಭಿವೃದ್ಧಿ ವಿಷಯದಲ್ಲಿ ಮಾಹಿತಿಗಳನ್ನೆಲ್ಲಾ ತಿಳಿದಿರುವಂತಹವರು ಇಲಾಖೆಯ ಮಂತ್ರಿಗಳಾಗಿದ್ದರೆ ಅದರಿಂದ ರೈತರಿಗೆ ಹೆಚ್ಚು ಪ್ರಗತಿ ಸಾಧನೆ ಮಾಡಲು ಸಹಾಯವಾಗುತ್ತದೆ. ಅಂತಹವರು ಇಂದು ನಮ್ಮ ಈ ಇಲಾಖೆಯಲ್ಲಿ ಮಂತ್ರಿಗಳಾಗಿದ್ದಾರೆ.

ಇನ್ನು ಒಂದು ಮಾತನ್ನು ಹಾಲಿನ ಉತ್ಪನ್ನದ ಬಗ್ಗೆ ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿ ಎಲ್ಲ ಕಡೆಗಳಲ್ಲೂ ಹಾಲನ್ನು ಹೆಚ್ಚು ಉತ್ಪಾದನೆ ಮಾಡಬೇಕೆಂದು ಸರಕಾರ ಪ್ರಯತ್ನ ಮಾಡುತ್ತಲಿದೆ. ನಮ್ಮ ಬೆಂಗಳೂರು ನಗರದಲ್ಲಿ ಡ್ಯೆರಿಯಿಂದ ಬರುವ ಹಾಲಿನ ಸೀಸೆಗಳನ್ನು ನಾವು ನೋಡುತ್ತಿದ್ದೇವೆ. ಇದೇ ರೀತಿ ನಮ್ಮ ಶಿವಮೊಗ್ಗದಲ್ಲೂ ಡ್ಯೆರಿಯ ಹಾಲು ಸೀಸೆಗಳು ಬರುತ್ತಿರುವುದನ್ನು ನೋಡಿದ್ದೇವೆ. ಹಾಲನ್ನು ಇಂತಹ ಸೀಸೆಗಳಲ್ಲಿ ಡ್ಯೆರಿಯವರು ಅಲ್ಲಲ್ಲಿ ಸರಬರಾಜು ಮಾಡುತ್ತಿದ್ದಾರೆ. ಇದರಿಂದ ಎಷ್ಟೋ ಜನರಿಗೆ ಅನುಕೂಲಗಳಾಗುತ್ತಿದೆ. ಆದರೆ ಇಂದು ಹಾಲನ್ನು ಉತ್ಪಾದನೆ ಮಾಡಲು ಅನುಕೂಲವಾಗುವಂತೆ ದನಗಳಿಗೆ ಬೇಕಾಗುವ ಹುಲ್ಲು ಮತ್ತು ಬ್ರಾನ್ ಇತ್ಯಾದಿಗಳನ್ನು ಒದಗಿಸಿಕೊಡಬೇಕು. ಸರಿಯಾದ ಮೇವನ್ನು ದನಗಳಿಗೆ ಒದಗಿಸದೇ ಇದ್ದರೆ ಅವುಗಳಿಂದ ಹೆಚ್ಚು ಹಾಲನ್ನು ಪಡೆಯಲಾಗುವುದಿಲ್ಲ. ಒಂದು ಸಾರಿ ನಮ್ಮ ತಾಲ್ಲೂಕಿನಲ್ಲಿರುವ ರಾಸುಗಳಿಗೆ ಬೇಕಾದ ಬ್ರಾನ್ ಸಿಗದೆ ಬಹಳ ತೊಂದರೆಯಾಗಿ ನಮ್ಮ ರಾಜ್ಯಮಂತ್ರಿಗಳಾದ ಶ್ರೀಮತಿ ಇವಾವಾಜ್‌ರವರ ಮೂಲಕ ಚಿಕ್ಕಮಗಳೂರು ಜಿಲ್ಲೆಗೆ ಐವತ್ತು ಮೂಟೆ ಬ್ರಾನ್ ಕಳುಹಿಸಬೇಕೆಂದು ಪ್ರಯತ್ನ ಮಾಡಲಾಗಿತ್ತು. ಇಷ್ಟು ಕಷ್ಟ ಅಲ್ಲಿನ ದನಗಳಿಗೆ ಮೇವು ಸಿಗದೆ ತೊಂದರೆಯಾಗಿತ್ತು. ಇದಕ್ಕಾಗಿ ಸರಕಾರ ದನಗಳಿಗೆ ಬೇಕಾಗುವ ಎಲ್ಲ ಮೇವನ್ನೂ ಸರಿಯಾಗಿ ಒದಗಿಸಲು ಸಾಕಷ್ಟು ಹುಲ್ಲು ಇತ್ಯಾದಿಗಳನ್ನು ಫಾರಂಗಳಲ್ಲಿ ಹೆಚ್ಚು ಹೆಚ್ಚು ಬೆಳೆಯಲು ತಕ್ಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಕೃಷಿ ಮಾಡುವ ರೈತರಿಗೆ ಇದರಿಂದ ಹೆಚ್ಚು ಅನುಕೂಲವಾಗುತ್ತದೆ. ಸರಕಾರದ ಇಲಾಖೆಯವರು ಹಾಕಿಕೊಳ್ಳುವ ಸ್ಕೀಂಗಳನ್ನು ಆದಷ್ಟು ಬೇಗನೆ ಕಾರ್ಯಗತವಾಗುವಂತೆ ಪ್ರಯತ್ನ ಮಾಡಬೇಕು. ಇಂದು ಎಲ್ಲಾ ಜಿಲ್ಲೆಗಳಲ್ಲೂ ಹಾಲಿನ ಕೇಂದ್ರಗಳನ್ನು ತೆರೆದು ಹೆಚ್ಚು ಹೆಚ್ಚು ಹಾಲು ಎಲ್ಲ ಜನರಿಗೂ ಸಿಗುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಶಿವಮೊಗ್ಗದಲ್ಲಿರುವ ಡ್ಯೆರಿಯಲ್ಲಿ ಇನ್ನೂ ಸ್ವಲ್ಪ ದಕ್ಷತೆಯಿಂದ ಕೆಲಸ ಮಾಡಬೇಕೆಂದು ಸಲಹೆ ಮಾಡುತ್ತೇನೆ. ನಮ್ಮ ಶಿವಮೊಗ್ಗ—ಮಲೆನಾಡಿನ ಪ್ರದೇಶ. ಇಲ್ಲಿ ನೀರು ಸೌಕರ್ಯವಿದೆ ಮತ್ತು ಹೆಚ್ಚು ಮೇವು ಬೆಳೆಯಲು ಅನುಕೂಲಗಳೂ ಇವೆ. ಇವೆಲ್ಲವನ್ನೂ ಉಪಯೋಗಿಸಿಕೊಂಡು ಸರಕಾರ ಹೆಚ್ಚು ಪ್ರಯತ್ನ ಮಾಡಿದರೆ ಹಾಲಿನ ಉತ್ಪಾದನೆಯನ್ನು ಹೆಚ್ಚು ಮಾಡಲು ಸಹಾಯವಾಗುತ್ತದೆ. ಎಲ್ಲೆಲ್ಲಿ ನೀರಿನ ಸೌಲಭ್ಯಗಳಿವೆಯೋ ಅವನ್ನೆಲ್ಲಾ ಸರಿಯಾಗಿ ಉಪಯೋಗಿಸಿಕೊಳ್ಳಬೇಕು ಮತ್ತು ಇಲ್ಲಿರುವ ಡ್ಯೆರಿಗಳನ್ನು ಹೆಚ್ಚು ಹಾಲು ಉತ್ಪಾದನೆ ಮಾಡಲು ಅನುಕೂಲವಾಗುವಂತೆ ತಕ್ಕ ಏರ್ಪಾಡುಗಳನ್ನು ಮಾಡಬೇಕು ಮತ್ತು ಗ್ರಾಮಾಂತರ ಪ್ರದೇಶಗಳಿಂದ ಬರುವ ಹಾಲನ್ನು ಸರಿಯಾಗಿ ಶೇಖರಣೆ ಮಾಡಿ ಎಲ್ಲರಿಗೂ ದೊರೆಯುವಂತೆ ತಕ್ಕ ವ್ಯವಸ್ಥೆ ಮಾಡಬೇಕು. ಆದರೆ ನಮ್ಮ ಸರಕಾರ ಏನು ಮಾಡುತ್ತದೆ ಎಂದರೆ ಎಲ್ಲ ಕಡೆಯಲ್ಲೂ ಡ್ಯೆರಿಗಳನ್ನು ಸ್ಥಾಪನೆ ಮಾಡಬೇಕೆಂದು ಹೇಳಿ ಮೊದಲಿಗೆ ಅದಕ್ಕೆ ಬೇಕಾಗುವ ಬಿಲ್ಡಿಂಗುಗಳಿಗೇ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದೆ. ಇದರಿಂದ ಹಾಲು ಹೆಚ್ಚು ಶೇಖರಣೆ ಮಾಡುವಾಗ ಕಷ್ಟವಾಗುತ್ತದೆ. ಮೊದಲಿಗೆ ಎಲ್ಲೆಲ್ಲಿ ಹಾಲು ಸಿಗುತ್ತದೆ ಇದರ ವ್ಯವಸ್ಥೆ ಮಾಡಿಕೊಂಡು ನಂತರ ಕಟ್ಟಡಗಳನ್ನು ಮಾಡಿದರೆ ಡ್ಯೆರಿಗಳು ಮುಂದಕ್ಕೆ ಬರುತ್ತದೆ. ಅಂತಹ ಒಂದು ರೀತಿಯಲ್ಲಿ ಕೆಲಸ ಮಾಡಿದರೆ ನಿಜವಾಗಿಯೂ ಹಾಲಿನ ಡ್ಯೆರಿಗಳು ಅಭಿವೃದ್ಧಿಯಾಗಿ ಆರ್ಥಿಕವಾಗಿ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳಿ ನನಗೆ ಈ ಸಂದರ್ಭದಲ್ಲಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

4–00 P. M.

† ಶ್ರೀ ಸಿ. ಬ್ಯೆರೇಗೌಡ (ವೇಮಗಲ್).—ಅಧ್ಯಕ್ಷರೆ, ಮಾನ್ಯ ವ್ಯವಸಾಯ ಮಂತ್ರಿಗಳು ಸಭೆಯ ಮುಂದೆ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಮೂರು ಬೇಡಿಕೆಗಳನ್ನು ಈ ಸಭೆಯ ಮುಂದಿಟ್ಟಿದ್ದಾರೆ. ಇದನ್ನು ನಾನು ವಿರೋಧಿಸಬೇಕಾಗಿದೆ. ಭಾರತದೇಶ ಪ್ರಮುಖವಾಗಿ ವ್ಯವಸಾಯವನ್ನು ಅವಲಂಬಿಸಿರುವಂಥ ದೇಶ. ನಾವು ಇಪ್ಪತ್ತೇಳು ವರ್ಷಗಳಿಂದ ಸ್ವತಂತ್ರವನ್ನು ಅನುಭವಿಸಿಕೊಂಡು ಬರುತ್ತಿದ್ದೇವೆ. ಇಲ್ಲಿಯವರೆಗೂ ಕೂಡ ವ್ಯವಸಾಯ ರಂಗದಲ್ಲಿ ಅನೇಕ ಸಾಧನೆಗಳನ್ನು ಸಾಧಿಸಿದ್ದೇವೆಂದು ಸರ್ಕಾರದವರು ಹೇಳುತ್ತಿರುವರು. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕ ಜನತೆಗಾಗಲಿ ಅಥವಾ ಪಟ್ಟಣದಲ್ಲಿರತಕ್ಕ ಜನತೆಗಾಗಲಿ ಇಲ್ಲಿಯವರೆಗೆ ಎಷ್ಟು ಕೆರೋ

(ಶ್ರೀ ಸಿ. ಬೈರೇಗೌಡ)

ಗಳಷ್ಟು ಆಹಾರಬೇಕು, ನನಗೆ ಗೊತ್ತಿರುವಮಟ್ಟಿಗೆ ಮೂರು ಸಾವಿರ ಕೆಲೋರಿ ಆಹಾರಬೇಕು ಅದನ್ನು ಇಲ್ಲಿಯುವರೆಗೂ ಕೂಡ ಆ ಒಂದು ಮಟ್ಟವನ್ನು ನಾವು ಮುಟ್ಟಿಲ್ಲ. ಅದಕ್ಕೆ ಬದಲಾಗಿ ಈವತ್ತಿನದಿವಸ ಗ್ರಾಮಾಂತರ ಪ್ರದೇಶಗಳಲ್ಲಿಯಾಗಲಿ ಅಥವಾ ನಗರದಲ್ಲಿರತಕ್ಕ ಸಾಮಾನ್ಯ ಜನತೆಗಾಗಲಿ ಬಡತನದ ಬೇಗೆಯಿಂದ, ಹಸಿವಿನಿಂದ ನರಳುತ್ತಾ ಇರತಕ್ಕ ದೃಶ್ಯ ಕಣ್ಣಾರೆ ಕಂಡಿದ್ದೇವೆ. ಇದು ಸರ್ಕಾರಕ್ಕೂ ಗೊತ್ತಿರಬಹುದು ಎಂದು ಭಾವಿಸುತ್ತೇನೆ. ಸರ್ಕಾರ ಯೋಜನೆಗಳನ್ನು ಎಷ್ಟೇ ಚಾಕಚಕ್ಯತೆಯಿಂದ ಎಷ್ಟೇ ಒಂದು ಜಾಗ್ರುತೆಯಿಂದ ಹಾಕಿದರೂ ಸಹಾ ಅದು ಸಾಮಾನ್ಯ ಜನತೆಯನ್ನು ಮುಟ್ಟುತ್ತಿಲ್ಲ. ಯಾರಿಗೆ ಯೋಜನೆಗಳ ಪ್ರತಿಫಲ ದೊರಕಬೇಕೋ ಅವರಿಗೆ ಅದು ಮುಟ್ಟುವಾಗ ಅದು ಏನು ಇಲ್ಲದೆ ಕಣ್ಣಿಗೆ ಕಾಣದೆ ಇರತಕ್ಕ ಅನೇಕ ನಿದರ್ಶನಗಳನ್ನು ನಾವು ನೋಡುತ್ತಿದ್ದೇವೆ. ಪ್ರಪಂಚದಲ್ಲಿ ವ್ಯವಸಾಯ ಆಧುನಿಕ ರೀತಿಯಲ್ಲಿ ನಡೆಯುತ್ತಿದೆ. ಅಮೇರಿಕಾ ದೇಶದಲ್ಲಿ ರಷ್ಯ ದೇಶದಲ್ಲಿ ಅಥವಾ ಚೈನಾ ದೇಶದಲ್ಲಿ ವ್ಯವಸಾಯ ಬಹಳ ಮುಂದುವರಿದಿದೆ. ಅಮೇರಿಕಾ ದೇಶದ ಒಂದು ಉದಾಹರಣೆಯನ್ನು ಹೇಳಬೇಕಾದರೆ, 7–8 ವರ್ಷಗಳ ಹಿಂದೆ 100ಕ್ಕೆ 10 ಜನ ವ್ಯವಸಾಯ ಮಾಡುತ್ತಿದ್ದದ್ದು ಕಡಿಮೆಯಾಗಿ ಈಗ ಶೇಕಡ 7ಕ್ಕೆ ಇಳಿದಿದೆ ಎಂದು ನಾನು ಕೇಳಿದ್ದೇನೆ. ನಮ್ಮ ದೇಶದಲ್ಲಿ 100ಕ್ಕೆ 75ರಿಂದ 80 ಜನ ವ್ಯವಸಾಯದಲ್ಲಿ ತೊಡಗಿದ್ದರೂ, ನಮಗೆ ಬೇಕಾದಷ್ಟು ಆಹಾರವನ್ನು ಬೆಳೆದುಕೊಳ್ಳುವುದರಲ್ಲಿ ನಾವು ಸಂಪೂರ್ಣವಾಗಿ ವಿಫಲರಾಗಿದ್ದೇವೆ. ಇದಕ್ಕೆ ಸರ್ಕಾರ 27 ವರ್ಷಗಳಕಾಲ ಅನುಸರಿಸಿದ ನೀತಿಯೇ ಕಾರಣ ಎಂದು ನಾನು ಭಾವಿಸುತ್ತೇನೆ ಈಗ ದೇಶಾದ್ಯಂತ ಪ್ರಚಲಿತವಾದ ವಿಷಯ ಭೂಸುಧಾರಣೆ. ಈ ಭೂಸುಧಾರಣೆಯನ್ನು 27 ವರ್ಷಕಾಲ ತಡೆಯುವ ಬದಲು ಸ್ವತಂತ್ರ ಬಂದ ತಕ್ಷಣವೇ ಭೂಸುಧಾರಣೆಯನ್ನು ಮಾಡಿ ಯಾರು ನಿಜವಾಗಿಯೂ ಭೂಮಿಗೋಸ್ಕರ ದುಡಿಯುತ್ತಾರೋ, ತಲೆತಲಾಂತರದಿಂದ ಭೂಮಿಯನ್ನು ನಂಬಿಕೊಂಡಿದ್ದಾರೋ, ಅಂಥವರಿಗೆ ಭೂಮಿಯನ್ನು ಕೊಟ್ಟಿದ್ದರೆ ಆಹಾರದ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ಎದುರಿಸಬಹುದಿತ್ತು. ಕಾರಣಾಂತರದಿಂದ ಅವರ ಒಂದು ಅಧಿಕಾರವನ್ನು ಮುಂದುವರಿಸಿಕೊಳ್ಳಬೇಕು ಮತ್ತು ಅಧಿಕಾರಕ್ಕೆ ಅಂಟಿಕೊಂಡಿರಬೇಕು ಎನ್ನುವ ಹಟದಿಂದ ಇದ್ದುದರಿಂದ ಆಹಾರದ ಕೊರತೆಯನ್ನು ಕೂಡ ನಾವು ಈವತ್ತಿನದಿವಸ ಕಾಣುತ್ತಿದ್ದೇವೆ. ಕಳೆದ ಒಂದು ವರ್ಷ, ಒಂದೂವರೆ ವರ್ಷದಿಂದ ಗ್ರೀನ್ ರೆವಲ್ಯೂಷನ್ ಅಂತ ಸರ್ಕಾರ ಆಡುತ್ತಿದ್ದ ಮಾತನ್ನು ಕೇಳುತ್ತಲೇ ಇಲ್ಲ. ಹಿಂದೆ ರಷ್ಯಾದಲ್ಲಿ ಆದಂತ ರೆವಲ್ಯೂಷನ್, ಚೈನಾದಲ್ಲಿ ಆದಂತ ರೆವಲ್ಯೂಷನ್ ನೋಡಿದ್ದೇವೆ. ಇದುವರೆಗೂ ಪ್ರಪಂಚದಲ್ಲಿ ಅನೇಕ ದೇಶಗಳಲ್ಲಿ ರೆವಲ್ಯೂಷನ್ ನಾವು ನೋಡಿದ್ದೇವೆ. ಆದರೆ ಹಸಿರು ಕ್ರಾಂತಿಯೂ ವಿಫಲವಾದ ಮಟ್ಟದಲ್ಲಿ ಬೇರೆ ಯಾವಕ್ರಾಂತಿಯೂ ವಿಫಲವಾಗಿಲ್ಲ. ಸರ್ಕಾರದವರೇ ಕಳೆದ ಒಂದು ವರ್ಷದಿಂಥ ಹಸಿರುಕ್ರಾಂತಿ ಮಂತ್ರವನ್ನು ಜಪಿಸುತ್ತಿರುವುದನ್ನು ಬಿಟ್ಟಿದ್ದಾರೆ. ಸರ್ಕಾರವೇ ಈವತ್ತಿನ ದಿವಸ ಹಸಿರುಕ್ರಾಂತಿ ನಿಷ್ಫಲವಾಗಿದೆ, ಪ್ರಯೋಜನವಾಗಿಲ್ಲ ಎಂಬುದನ್ನು ಒಪ್ಪಿಕೊಂಡ ಹಾಗಾಗಿದೆ ಎಂದು ನಾನಾದರೂ ಭಾವಿಸುತ್ತೇವೆ. ಗ್ರಾಮಾಂತರ ಪ್ರದೇಶಗಳಲ್ಲಿಯಾಗಲಿ; ಹಳ್ಳಿಗಳಲ್ಲಿಯಾಗಲಿ ವ್ಯವಸಾಯವನ್ನು ಮಾಡಬೇಕಾದರೆ ಅತಿಮುಖ್ಯವಾಗಿ ಬೇಕಾದುದುಗೊಬ್ಬರ. ಹಿಂದೆ ಸರ್ಕಾರ ಗ್ರಾಮಸೇವಕರ ಮೂಲಕ, ಪತ್ರಿಕೆಗಳ ಮೂಲಕ ಗೊಬ್ಬರವನ್ನು ಹೆಚ್ಚಾಗಿ ಉಪಯೋಗಿಸಬೇಕೆಂದು ಪ್ರಚಾರ ಮಾಡುತ್ತಿದ್ದರು. ರೈತರಿಗೆ ಪುಕ್ಕಟೆ ಗೊಬ್ಬರವನ್ನು ಕೊಟ್ಟಿರುವ ನಿದರ್ಶನಗಳನ್ನು ನಾವು ನೋಡಿದ್ದೇವೆ. ಗೊಬ್ಬರ ಹಾಕುವುದನ್ನು ಜನತೆಗೆ ಕಲಿಸುವಾಗ ವೈಜ್ಞಾನಿಕ ರೀತಿನೀತಿಗಳನ್ನು ಸರ್ಕಾರ ಅನುಸರಿಸಲಿಲ್ಲ. ಯಾವುದೋ ಒಂದು ಗೊಬ್ಬರ ಸಿಕ್ಕಿತು; ಅಮೋನಿಯಂ ಸಲ್‌ಫೈಟ್ ಸಿಕ್ಕಿತು ಹಾಕಿ ಎಂದು ಹೇಳಿದರು. ಯೂರಿಯಾ ಸಿಕ್ಕಿತು ಅದನ್ನು ಹಾಕಿ ಎಂದು ಹೇಳಿದರು. ನೇರವಾಗಿ ಗೊಬ್ಬರವನ್ನು ಹಾಕುವುದರಿಂದ ಅನೇಕ ಕಡೆ ಭೂಮಿ ಕೆಟ್ಟು ಬೆಳೆ ನಷ್ಟ ಆಗುವ ಪರಿಸ್ಥಿತಿ ಈವತ್ತಿನದಿವಸ ಇದೆ. ಈಗ ಒಂದು ಸಂತೋಷಕರ ವಿಷಯವೆಂದರೆ, ಒಂದೆರಡು ವರ್ಷಗಳಿಂದೀಚೆಗೆ ಕಾಂಪ್ಲೆಕ್ಸ್ ಗೊಬ್ಬರ ಬಂತು. ಭೂಮಿಗೆ ಯಾವ ಗೊಬ್ಬರ ಬೇಕು, ಎಷ್ಟು ಪ್ರಮಾಣದಲ್ಲಿ ಬೇಕು ಎನ್ನುವುದನ್ನು ರೈತರು ಸ್ವಲ್ಪಮಟ್ಟಿಗೆ ತಿಳಿದು ಅದರಂತೆ ಅನುಸರಿಸುವುದಕ್ಕೆ ಹೊರಟಿದ್ದಾರೆ. ಅಂತಹ ಪರಿಸ್ಥಿತಿ ಬಂದಿರುವಾಗ ಜನತೆಗೆ ಗೊಬ್ಬರ ಅವಶ್ಯಕತೆ ಇದೆ, ಅದರಲ್ಲೂ ಕೂಡ ಸ್ವಲ್ಪಮಟ್ಟಿಗೆ ವೈಜ್ಞಾನಿಕ ರೀತಿಯಲ್ಲಿ ರೈತರಿಗೆ ಗೊಬ್ಬರ ಹಾಕುವುದನ್ನು ಕಲಿತುಕೊಂಡ ಪರಿಸ್ಥಿತಿಯಲ್ಲಿ, ಗೊಬ್ಬರದ ಪರಿಸ್ಥಿತಿ ಏನಾಗಿದೆ ಎಂದು ಸರ್ಕಾರದ ಅಂಕಿಅಂಶಗಳಿಂದ ಗೊತ್ತಾಗಿದೆ, ಉದಾಹರಣೆಗೆ ಹೇಳುವುದಾದರೆ 1974–75ನೇ ಕ್ರಾಪಿಂಗ್ ಸೀಸನ್‌ಗೆ 2 ಲಕ್ಷ 75 ಸಾವಿರ ಟನ್ ನೈಟ್ರೋಜನ್ ಗೊಬ್ಬರಬೇಕು ಎಂದು ಹೇಳುತ್ತಾರೆ. ಹೋದವರ್ಷ 1 ಲಕ್ಷ 12 ಸಾವಿರ ಟನ್ನು ಗೊಬ್ಬರಬೇಕು ಎಂದು ಅಂದಾಜು ಮಾಡಿದ್ದರು. ಆದರೆ ಸರಬರಾಜು ಆಗಿರುವುದು

56,400 ಟನ್ನು ಗೊಬ್ಬರ. ರಾಷ್ಟ್ರದಲ್ಲಿ ಗೊಬ್ಬರದ ವಿಷಯ ಬಂದಾಗ ಕರ್ನಾಟಕ ರಾಜ್ಯದ ವಿಷಯ ನಮ್ಮ ಮಂತ್ರಿಗಳು ಹೇಳುವುದಿಲ್ಲ. ಇಡೀ ಭಾರತದೇಶದಲ್ಲಿ ಗೊಬ್ಬರ ಇಲ್ಲ, ಅಮೇರಿಕಾದಲ್ಲಿ ಗೊಬ್ಬರವಿಲ್ಲ, ರಷ್ಯಾದಲ್ಲಿ ಗೊಬ್ಬರವಿಲ್ಲ, ಎಲ್ಲೂ ಕೂಡ ಗೊಬ್ಬರವಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಅದೇ ರೀತಿ ಮುಖ್ಯಮಂತ್ರಿಗಳು ಇನ್ನು ಮುಂದೆ ಹೋಗಿ ಯಾವ ಗ್ರಹದಲ್ಲಿಯೂ ಕೂಡ ಗೊಬ್ಬರವಿಲ್ಲ ಎಂದು ಹೇಳುವ ಮಟ್ಟಕ್ಕೆ ಹೋಗುತ್ತಾರೆ.

ಉಪಾಧ್ಯಕ್ಷರು.—ಸಾಕಷ್ಟಿಲ್ಲ ಎಂದು ಹೇಳಿದರು, ಇಲ್ಲ ಎಂದರೆ ಹೇಗೆ ಆಗುತ್ತದೆ ?

ಶ್ರೀ ಸಿ. ಬೈರೇಗೌಡ.—ಈವತ್ತಿನ ದಿವಸ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಮಂಗಳೂರು ಗೊಬ್ಬರದ ಕಾರ್ಖಾನೆ ವಿಷಯವನ್ನು ನಾನು ಕೇಳುತ್ತಾ ಇದ್ದೇನೆ. ಮಂಗಳೂರು ಗೊಬ್ಬರ ಯಾರಿಗೂ ಮುಟ್ಟಿಲ್ಲ. ಕೆಲವುಕಡೆ ಆದರ ಬೋರ್ಡನ್ನು ನೋಡಿದ್ದೇನೆ. ಕೆಲವುಕಡೆ ಡೆಮಾನ್‌ಸ್ಟ್ರೇಷನ್ ಕೂಡ ಕೊಟ್ಟಿದ್ದಾರೆ. ಆದರೆ ಮಾರ್ಕೆಟ್‌ನಲ್ಲಿ ಗೊಬ್ಬರ ಬಂದಿಲ್ಲ. ಮಂಗಳೂರು ಫರ್ಟಿಲೈಸರ್ಸ್ ಕಾರ್ಖಾನೆಯ ಚರಿತ್ರೆಯ ಬಗ್ಗೆ ಶ್ರೀ ಚೆನ್ನಬಸಪ್ಪನವರೂ ಕೂಡ ಒಂದು ಸಾರಿ ದೊಡ್ಡ ಹೇಳಿಕೆಯನ್ನು ಕೊಟ್ಟಿದ್ದಾರೆ. ಲಕ್ಷಾಂತರ ರೂಪಾಯಿ ಖರ್ಚಾಗಿದ್ದರೂ ಕೆಲಸ ಆಗಿಲ್ಲ ವೆಂದು ಹೇಳಿದ್ದಾರೆ. ಕಾರ್ಖಾನೆಯ ಉತ್ಪಾದನೆಯನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಪಟ್ಟಿಲ್ಲ. ಅವರಿಗೆ ವಾರ್ಷಿಕ ಸಭೆ ಮಾಡುವುದಕ್ಕೆ ಚೈತನ್ಯವಿಲ್ಲ. ನಮಗೆ ಏನಾದರೂ ಆಶಾಕಿರಣವಿರುವುದು ಎಂದರೆ ಮಂಗಳೂರು ಗೊಬ್ಬರದ ಕಾರ್ಖಾನೆ. ಆ ಕಾರ್ಖಾನೆಯ ಆಡಳಿತ ವ್ಯವಸ್ಥೆ ಸರಿಯಾಗಿ ಇಲ್ಲದೆ ದುರಾಡಳಿತ ಈಗಾಗಲೇ ಪ್ರಾರಂಭವಾಗಿದ್ದರೆ, ಮುಂದೆ ಆ ಕಾರ್ಖಾನೆಯ ಉತ್ಪಾದನೆಗೆ ಧಕ್ಕೆ ಬರುತ್ತದೆ. ಆದುದರಿಂದ ಆ ಕಾರ್ಖಾನೆ ಬಗ್ಗೆ ಸರಿಯಾದ ಉಸ್ತುವಾರಿಯಿಂದ ನಡೆಸುವುದು ಸರ್ಕಾರದ ಮುಖ್ಯ ಕರ್ತವ್ಯ. ಈ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಹೇಳುತ್ತೇನೆ. ತಮಿಳುನಾಡಿನಲ್ಲಿ ಮದ್ರಾಸ್ ಫರ್ಟಿಲೈಸರ್ಸ್ ಕಾರ್ಖಾನೆ ಇದೆ.

ಅಲ್ಲಿನ ಸರ್ಕಾರದವರು ಏನು ಮಾಡಿದ್ದಾರೆ ಎಂದರೆ ಆ ಕಾರ್ಖಾನೆಯವರನ್ನು ಕರೆದು ನೀವು ನಮಗೆ ಸಾಕಷ್ಟು ಗೊಬ್ಬರವನ್ನು ಯಾವುದೇ ರೀತಿಯಲ್ಲಿ ಕೊಡದಿದ್ದರೆ ನಿಮಗೆ ನೀರನ್ನು ಕೊಡುವುದಿಲ್ಲ, ನಿಮಗೆ ವಿದ್ಯುಚ್ಛಕ್ತಿ ಕೊಡುವುದಿಲ್ಲ ಎಂದು ಹೆದರಿಸಿದ್ದಾರೆ. ಅದರಿಂದಾಗಿ ಈವತ್ತಿನ ದಿವಸ ತಮಿಳುನಾಡಿನಲ್ಲಿ ಸಮೃದ್ಧಿಯಾಗಿ ಗೊಬ್ಬರ ಸಿಕ್ಕುತ್ತಾ ಇದೆ. ನನ್ನ ಅನುಭವದ ಪ್ರಕಾರ ಹೇಳುವುದಾದರೆ ತಮಿಳುನಾಡಿನ ಪಕ್ಕದಲ್ಲಿರುವ ಜಿಲ್ಲೆ ನಮ್ಮದು. ನಮಗೂ ಅನೇಕ ಸಂದರ್ಭದಲ್ಲಿ ತಮಿಳುನಾಡಿನಿಂದ ಗೊಬ್ಬರ ಬರುತ್ತದೆ. ನಮ್ಮಲ್ಲಿರತಕ್ಕ ಕಾರ್ಖಾನೆಯನ್ನು ಸರಿಯಾದ ರೀತಿಯಲ್ಲಿ ನಡೆಸುವ ವ್ಯವಸ್ಥೆ ಮಾಡಿಲ್ಲ. ಗೊಬ್ಬರ ಹಂಚಿಕೆಯ ಗುರುತರವಾದ ಜವಾಬ್ದಾರಿಯನ್ನು ಗ್ರಾಮಸುಧಾರಕರಿಗೆ ವಹಿಸಿದ್ದಾರೆ. ಇದು ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದು ಕೆಲವು ಉದಾಹರಣೆಗಳ ಮೂಲಕ ಹೇಳುತ್ತೇನೆ. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಗೊಬ್ಬರ ಹಂಚಿಕೆಯ ಜವಾಬ್ದಾರಿಯನ್ನು ಗ್ರಾಮಸುಧಾರಕರಿಗೆ ಕೊಟ್ಟಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಒಂದು ಪತ್ರ ಬರೆದು ಅದರಲ್ಲಿ ಕೆಲವು ನ್ಯೂನತೆಗಳನ್ನು ಕಂಡುಹಿಡಿದು ಅವರ ಗಮನಕ್ಕೆ ತಂದಿದ್ದೇನೆ. ಈ ಇಲಾಖೆ ಯಾವ ರೀತಿಯಲ್ಲಿ ಕೆಲಸ ಮಾಡುತ್ತಿದೆ ಎನ್ನುವುದಕ್ಕೆ ಉದಾಹರಣೆಗಳು ಇವೆ.

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಕೊಟ್ಟಂಥ ದೂರು ಏನು ಇದೆ ಆ ದೂರನ್ನು ನಾನು ವಿಚಾರಣೆ ನಡೆಸಿ ಕ್ರಮ ತೆಗೆದುಕೊಂಡು ಸಂಬಂಧಪಟ್ಟ ಅಧಿಕಾರಿಯನ್ನು ಸಸ್‌ಪೆನ್‌ಷನ್‌ನಲ್ಲಿ ಇಟ್ಟಿದ್ದೇನೆ.

"Senior Officer of the Agricultural Department to inquire and report about the misuse of rea by Grama Sevakas..."

Mr. DEPUTY SPEAKER.—Whatever it is, the hon. Member has won his case. Lawyers never argue when they won the case.

ಶ್ರೀ ಸಿ. ಬೈರೇಗೌಡ.—ಪೂರ್ತಿಯಾಗಿ ಗೆದ್ದಿಲ್ಲ. ಮಂತ್ರಿಗಳು ಹೇಳಿದ್ದರಲ್ಲಿ ಸ್ವಲ್ಪ ಅರ್ಥ ಇದೆ. ಪ್ರಜಾಪ್ರಭುತ್ವದಲ್ಲಿ ಮಂತ್ರಿಗಳಾಗಿರತಕ್ಕವರು ಜನತೆಯ ಪರವಾಗಿ ಸರ್ಕಾರದ ಸೂತ್ರವನ್ನು ಹಿಡಿದುಕೊಂಡಿರತಕ್ಕವರು ಒಂದು ಆಜ್ಞೆಯನ್ನು ಹೊರಡಿಸಿದರೆ ಅದಕ್ಕೆ ಇಲಾಖೆಯಲ್ಲಿ ಇರತಕ್ಕ ಅಧಿಕಾರಿಗಳು ಕೊಡತಕ್ಕ ಮನ್ನಣೆ ಏನು ? ಅಧಿಕಾರಿಗಳು ಪ್ರಜಾಪ್ರಭುತ್ವದ ಅಡಿಗಲ್ಲನ್ನು ಕದಲಿಸುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. 5 ಸರ್ಕಲ್‌ಗಳಲ್ಲಿ ಗೊಬ್ಬರ ದುರ್ವ್ಯವಹಾರ ನಡೆದಿದೆ ಎಂದು ಸರ್ಕಾರಕ್ಕೆ ತಿಳಿಸಿದೆ. ಎರಡು ಸರ್ಕಲ್‌ಗಳಲ್ಲಿ ಆಫೀಸರ್‌ಗಳನ್ನು ಸಸ್‌ಪೆನ್‌ಷನ್ ಮಾಡಿರ

(ಶ್ರೀ ಸಿ. ಬೈರೇಗೌಡ)

ತಕ್ಕದ್ದು ನಿಜ. ಇನ್ನು ಮೂರು ಸರ್ಕಲ್‌ಗಳಲ್ಲಿ ಕೂಡ ಈವತ್ತಿನ ದಿವಸ ಗೊಬ್ಬರ ದುರುಪಯೋಗವಾಗಿ ಭೂಮಿ ಇಲ್ಲದೇ ಇರತಕ್ಕವರಿಗೆ ಗೊಬ್ಬರ ಕೊಟ್ಟಿದ್ದಾರೆ. ಯಾವ ಬೆಳೆಗೆ ಗೊಬ್ಬರ ಕೊಡಬೇಕೋ ಅದನ್ನು ಅವರಿ ಕೊಡದೆ ಇರತಕ್ಕ ಗೊಬ್ಬರವನ್ನು ಗ್ರಾಮ ಸುಧಾರಕರು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಿದ್ದಾರೆ. ನನಗೆ ತಿಳಿದ ಸಮಾಚಾರಗಳ ಪ್ರಕಾರ ಹೇಳಬೇಕಾದರೆ ಸಂಜೆ ಆದಾಕ್ಷಣ ಗ್ರಾಮಸುಧಾರಕರು ಇರುವುದು ಬಾರ್‌ಗಳಲ್ಲಿ. ಒಂದು ಮೂಟೆ ಯೂರಿಯಾ ಮಾರಾಟ ಮಾಡಿದರೆ 100 ರೂಪಾಯಿ ಸಿಕ್ಕುತ್ತದೆ. ಅವರು ಇಡೀ ರಾತ್ರೀ ಬೇಕಾದರೂ ಬಾರ್‌ನಲ್ಲಿ ಕೂತು ಕಳೆಯಬಹುದು. ಅಷ್ಟೇ ಮಾಡುತ್ತಾರೆಂದು ಭಾವಿಸಬಾರದು. ಅವರು ಬೆಂಗಳೂರಿಗೆ ಕೂಡ ಬಂದು ಯಾವ ಯಾವ ದುರ್ವ್ಯವಹಾರಗಳು ನಡೆಯುತ್ತವೆಯೋ ಅವೆಲ್ಲವನ್ನು ನಡೆಸುವುದಕ್ಕೆ ತಯಾರು ಇದ್ದಾರೆ. ಒಂದು ಮೂಟೆ ಗೊಬ್ಬರ ಮಾರಿದರೆ ಸಾಕು. ಇಂತಹ ಅನೇಕ ನಿದರ್ಶನಗಳು ನಮ್ಮ ತಾಲ್ಲೂಕಿನಲ್ಲಿ ನಡೆದಿದೆ.

ಶ್ರೀ ಎನ್. ಚಿಕ್ಕೇಗೌಡ.—ಈಗ ಮಾನ್ಯ ಸದಸ್ಯರು ಗ್ರಾಮಸುಧಾರಕರು ಗೊಬ್ಬರ ಮಾರುತ್ತಾರೆ ಎಂದು ಏನು ಹೇಳಿದರು, ಅವರು ಆ ರೀತಿ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಆದರೆ ಅವರು ಬಾರ್‌ನಲ್ಲಿ ಇರುತ್ತಾರೆ ಎಂದು ಹೇಳುವುದು ಸೂಕ್ತವಾಗಿ ಕಾಣುವುದಿಲ್ಲ. ಆಫೀಸಿನ ಬಗ್ಗೆ ಏನಾದರೂ ಹೇಳಲಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳೋಣ. ಆದರೆ ಅವರ ಪ್ರೈವೇಟ್ ಲೈಫ್ ಬಗ್ಗೆ ಹೇಳುವುದು ಅಷ್ಟು ಉಚಿತವಲ್ಲ. ಅವರು ಕೆಲಸದ ವೇಳೆಯಲ್ಲಿ ಬಾರ್‌ಗೆ ಹೋದರೆ ಡೆರಿಲಿಕ್ಷನ್ ಆಫ್ ಡ್ಯೂಟಿ ಆಗುತ್ತದೆ. ಸ್ಪೆಸಿಫಿಕ್ ಉದಾಹರಣೆಗಳನ್ನು ಕೊಡಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಅವರ ಪ್ರೈವೇಟ್ ಲೈಫ್ ತೆಗೆದುಕೊಂಡು ಬಂದು ಇಲ್ಲಿ ಹೇಳಿ ಈ ಸಭೆಯ ಕಾಲ ಹೆಚ್ಚಿಗೆ ಉಪಯೋಗಿಸಿಕೊಂಡರೆ ಅದರಿಂದ ಪ್ರಯೋಜನವಾಗುವುದಿಲ್ಲ.

ಉಪಾಧ್ಯಕ್ಷರು.—ಡೆರ್‌ಲಿಕ್ಷನ್ ಆಫ್ ಡ್ಯೂಟಿ ಬಗ್ಗೆ ಏನೇನು ಸಮಾಚಾರ ಇದೆ ಅದನ್ನು ಮಂತ್ರಿಗಳಿಗೆ ಕೊಟ್ಟುಬಿಡಿರಿ. ಬಾಕಿ ಆಫೀಸರ ಪ್ರೈವೇಟ್ ಅಫೈರ್ ಬಗ್ಗೆ ಹೇಳುವುದು ಉಚಿತವಲ್ಲ That is why I would like to suggest the Hon. Member to please collect as many facts as possible, as much information as possible and send it to the hon. Minister.

ಶ್ರೀ ಸಿ. ಬೈರೇಗೌಡ.—ಮಂತ್ರಿಗಳಿಗೆ ಕಳಿಸಿದ್ದೇನೆ. ಅವರು ಕೂಡ ಮಾಡುತ್ತಾ ಇರತಕ್ಕದ್ದು ತಪ್ಪು ಎಂದು ಹೇಳಿದ್ದಾರೆ. ಅದರ ಜೊತೆಗೆ ಆಜ್ಞೆ ಕೂಡ ಮಾಡಿದ್ದಾರೆ. ಆದರೆ ಅವರ ಇಲಾಖೆಯಲ್ಲಿರತಕ್ಕ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರಿಗೆ ಅನೇಕ ಸಂದರ್ಭದಲ್ಲಿ ಫೋನ್ ಮಾಡಿ ಹೇಳಿದ್ದೇನೆ. ಒಬ್ಬ ಮಂತ್ರಿಯಾಗಿರತಕ್ಕವರು ಜವಾಬ್ದಾರಿಯಾಗಿ ಆಜ್ಞೆಯನ್ನು ಹೊರಡಿಸಿದರೆ ಅವರ ಕೈಕೆಳಗೆ ಇರತಕ್ಕ ಅಧಿಕಾರಿಗಳು ಆ ಆಜ್ಞೆಯನ್ನು ಕಾರ್ಯಗತ ಮಾಡುವುದಿಲ್ಲ.

Sri N. CHIKKE GOWDA.—On behalf of the Government, I would like to mention that, we have to go through certain procedures for taking any action. i. e., we have to inquire into the matter and after the preliminary inquiry, if he is found guilty, then, we will certainly take decision and action also. Whether it is Director or any Subordinate Officer, they are all Government Servants working under the democratic set up. We will certainly take action.

ಶ್ರೀ ಸಿ. ಬೈರೇಗೌಡ.—ಮಂತ್ರಿಗಳಿಗೆ ಈವತ್ತಿನ ದಿವಸ ಒಂದು ಸವಾಲು ಹಾಕುತ್ತೇನೆ. ಮಾನ್ಯ ಮಂತ್ರಿಗಳಾಗಿರತಕ್ಕವರು ರೈತರೇ. ಅವರು ಸ್ವತಃ ನಿಕ್ಕರ್ ಹಾಕಿಕೊಂಡು ಕೆಲಸ ಮಾಡಿದ್ದನ್ನು ನಾನು ನೋಡಿದ್ದೇನೆ. ಕೆಲವರು ಈವತ್ತಿಗೂ ವ್ಯವಸಾಯವನ್ನೇ ಮಾಡುತ್ತಾ ಇದ್ದಾರೆ. ಆದರೆ ಈವತ್ತಿನ ದಿವಸ ರೈತರ ಕಷ್ಟ ಹೇಳತೀರದಾಗಿದೆ. ಕೆಳದರ್ಜೆ ಅಧಿಕಾರಿಗಳು ರೈತರ ಕುತ್ತಿಗೆ ಹಿಸುಕುವುದಕ್ಕೆ ಹೊರಟಿದ್ದಾರೆ. ಅದನ್ನು ತಡೆಗಟ್ಟಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಹಾಗೂ ಪಶುಸಂಗೋಪನ ಮಂತ್ರಿಗಳು ಯಾವ ಬೇಡಿಕೆಗಳನ್ನು ಸದನದ ಮುಂದೆ ಇಟ್ಟಿದ್ದಾರೆ, ಅದನ್ನು ಸ್ವಾಗತಿಸುತ್ತ, ಕೆಲವು ಸೂಕ್ತ ಸಲಹೆಗಳನ್ನು ಕೊಡಬೇಕೆಂದಿದ್ದೇನೆ ವ್ಯವಸಾಯ ಅಂದರೆ ಮನೆ ಮಕ್ಕಳು ಸಾಯ ಎಂದು ಗಾದೆ ಇದೆ. ಇದುವರೆಗೆ ಮಾನ್ಯ ಮಿತ್ರರು

ಇದರ ಬಗ್ಗೆ ಹೆಚ್ಚಿನ ರೀತಿಯಲ್ಲಿ ಹೇಳಿದರು. ಒಂದು ಸಂತೋಷದ ಸಮಾಚಾರ ಎಂದರೆ, ಇಡೀ ಸಂಸ್ಥಾನದಲ್ಲಿ ಯಾವುದಾದರೂ ಹಳೇ ಇಲಾಖೆ ಇದೆಯೆಂದರೆ, ಅದು ವ್ಯವಸಾಯ ಇಲಾಖೆ. ಡೇವಿಡ್‌ಸನ್ ಕಾಲ ಇರಬಹುದು, ಸಿಂಸನ್ ಕಾಲ ಇರಬಹುದು, ಕೋಲ್‌ಮನ್ ಕಾಲ ಇರಬಹುದು. ಇದುವರೆಗೆ ಬೇಕಾದಷ್ಟು ಟ್ರೈನಿಂಗ್ ಮತ್ತು ಎಜುಕೇಷನಲ್ ಸ್ಕೀಮ್ಸ್ ಆಗುತ್ತಾ ಇವೆ. ಆದರೂ ಸಹ ಆಹಾರೋತ್ಪತ್ತಿ ನಾವು ಅಂದು ಕೊಂಡಷ್ಟು ಆಗಿಲ್ಲ. ಇದಕ್ಕೆ ಅಧಿಕಾರಿ ವರ್ಗದವರ ತಪ್ಪೆ, ಸಾರ್ವಜನಿಕರ ತಪ್ಪೆ, ಏನು ಕಾರಣ? ಮಾನ್ಯ ಮಿತ್ರರು ಹೇಳುತ್ತಿದ್ದರು, ವ್ಯವಸಾಯ ಮಾಡುವುದು ಬಹಳ ಕಷ್ಟ, ಅದು ವಾಟರ್ ಪ್ರೂಫ್, ವೆದರ್ ಪ್ರೂಫ್ ಫೈರ್ ಪ್ರೂಫ್ Body ಆಗಿರಬೇಕು. ಈಗಿನ ಪರಿಸ್ಥಿತಿಯಲ್ಲಿ ವ್ಯವಸಾಯದ ಬಗ್ಗೆ ಎಲ್ಲಿಯವರೆಗೆ ಹೆಚ್ಚು ಆಹಾರೋತ್ಪತ್ತಿಯಾಗುವುದಿಲ್ಲವೋ ಅಲ್ಲಿಯವರೆಗೆ, ಆಹಾರದ ಅಭಾವ, ಬೆಲೆ ಜಾಸ್ತಿಯಾಗುತ್ತಲೇ ಇರುತ್ತದೆ. ಆದುದರಿಂದ ಇದಕ್ಕೆ ಏನು ಮಾಡಬೇಕು? ಹಿಂದಿನ ದಿವಸ ಹೆಚ್ಚು ಜನ ವ್ಯವಸಾಯ ಮಾಡುತ್ತಾ ಇದ್ದರು, ಇಂದಿನದಿವಸ ಮಾಡುತ್ತಾ ಇಲ್ಲ. ಉದಾಹರಣೆಗೆಹೇಳಬೇಕಾದರೆ ಸಾಯಿಲ್ ಕನ್‌ಸರ್ವೇಷನ್ ವರ್ಕ್. ಇದನ್ನು ಎಲ್ಲೋ ಕೆಲವು ತಾಲ್ಲೂಕುಗಳಲ್ಲಿ, ಹೋಬಳಿಗಳಲ್ಲಿ ಮಾತ್ರ ಮಾಡಿದರೆ ಆಗುವುದಿಲ್ಲ. ನಮ್ಮ ರಾಜ್ಯದಲ್ಲಿ 176 ತಾಲ್ಲೂಕುಗಳಿವೆ. ಆ 176 ತಾಲ್ಲೂಕುಗಳಲ್ಲಿ ಸಾಯಿಲ್ ಕನ್‌ಸರ್ವೇಷನ್ ಆಗಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ, ಪ್ರತಿ ತಾಲ್ಲೂಕಿನಲ್ಲಿ ವ್ಯವಸಾಯ ಸ್ಕೂಲ್ ಆಗಬೇಕು, ಪ್ರತಿ ಹೋಬಳಿಯಲ್ಲಿ ಆದರೂ ತಪ್ಪಾಗಲಾರದು. ನೂರಕ್ಕೆ 80 ಜನ ಗ್ರಾಮಾಂತರ ಪ್ರದೇಶಗಳಲ್ಲಿ ಇದ್ದಾರೆ. ನಮ್ಮ ದೇಶದಲ್ಲಿ ಶೇಕಡ 60 ಜನ, 10 ಎಕರೆ, 3 ಎಕರೆ, 2 ಎಕರೆ ಇರುವವರು ಇದಾರೆ. ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಏನು ಇದೆ ಅದು ಪ್ರತಿ ಗ್ರಾಮದಲ್ಲಿ, ಹೋಬಳಿಯಲ್ಲಿ ಆಗಬೇಕು. ಸಾಯಿಲ್ ಕನ್‌ಶರ್ವೇಷನ್‌ನವರು ಕಂಟ್ಯೂರ್ ಬಂಡಿಂಗ್ ಹಾಕುತ್ತಾ ಇದ್ದಾರೆ ಅದು ಮಳೆಗಾಲದಲ್ಲಿ ಒಡೆದು ಹೋಗುತ್ತದೆ. ರೈತರಿಗೆ ತಪ್ಪು ತಿಳುವಳಿಕೆಯಿಂದ ಆ ಬಂಡ್‌ಗಳನ್ನು ಕಿತ್ತು ಹಾಕುತ್ತಾರೆ. ನೂರಾರು ತಾಲ್ಲೂಕುಗಳಲ್ಲಿ ಬಂಡಗಳು ಹಾಕಿದರೆ ನೀರು ನಿಲ್ಲುತ್ತದೆ. ವಾಟರ್ ಟೇಬಲ್ ಮೇಲೆ ಬರುತ್ತದೆ. ಆಗ ನೀರಿನ ಅಭಾವ ಕಮ್ಮಿಯಾಗುತ್ತದೆ ರಿಗ್ಸ್‌ಗೆ ಕೆಲಸ ಇರುತ್ತದೆ. ಕೆಲವು ಸಂದರ್ಭಗಳಲ್ಲಿ ರಿಗ್ಸ್ ಸರ್ಕಾರದವರು ತರುತ್ತಾರೆ. ನನಗನ್ನಿಸುತ್ತದೆ ಸ್ಪರ್ಧೆ ಮಾಡಿ ಪ್ರತಿ ತಾಲ್ಲೂಕಿನಲ್ಲಿ ರಿಗ್ಸ್ ಬೇಕು. ಒಂದೆ Agency ಯಾವಾಗಲು ಇರಬಾರದು, Competition ಇಟ್ಟಿರಬೇಕು. ಇಲ್ಲದಿದ್ದರೆ ಅಧಿಕಾರಿಗಳು ದುರಭ್ಯಾಸ ಹೆಚ್ಚಾಗುತ್ತದೆ. ಸಾರ್ವಜನಿಕರಜೀವನ ಹಾಳಾಗುತ್ತೆ. ಅಂತೂ ''Rigs'' ಗಳ ಪಾತ್ರ ಈಗ ಬಹು ಪ್ರಾಮುಖ್ಯವಾದದ್ದು. ನಮ್ಮಲ್ಲಿರತಕ್ಕ ಅಂಡರಗ್ರೌಂಡ್ ವಾಟರ್ ಏನಿದೆ, ಪ್ರತಿಯೊಂದು ಗ್ಯಾಲನನ್ನು ಸರಿಯಾಗಿ ಉಪಯೋಗಿಸಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಮೊಬೈಲ್ ಟೆಸ್ಟಿಂಗ್ ಲ್ಯಾಬೊರೇಟರಿ, ಸಾಯಿಲ್ ಕನ್ ಸರ್ವೇಷನ್ ಟೆಸ್ಟಿಂಗ್ ಲ್ಯಾಬೊರೇಟರಿ ಬಹಳ ಕಡಿಮೆ ಇದೆ. ಎಷ್ಟು ಉಪ್ಪು ಹಾಕಬೇಕು, ಎಷ್ಟು ನೈಟ್ರೋಜನ್ ಹಾಕಬೇಕು, ಯಾವ ಫರ್ಟಿಲೈಶರ್ ಎಷ್ಟು ಹಾಕಬೇಕು ಎಂದು ನೋಡಬೇಕು. ಹಿಂದಿನ ಕಾಲದಲ್ಲಿ ಫರ್ಟಿಲೈಸರ್‌ಗಳೆ ಇರಲಿಲ್ಲ. ಬೆಲ್‌ಬಾಟಂ, ನ್ಯಾರೋ ಪ್ಯಾಂಟ್ ಜಾಸ್ತಿಯಾಯಿತು. ನೇಗಿಲಯೋಗಿ, ಅನ್ನದಾತ ಬೆನ್ನುಮೂಳೆ ಎಂದು ಕವಿಗಳು ಬರೆದರೇ ಹೊರತು ಅನ್ನದಾತ ಯಾರೂ ಇಲ್ಲ. ಅವರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಬೇಕಾದರೆ ಮೊಬೈಲ್ ಟೆಸ್ಟಿಂಗ್ ಲ್ಯಾಬೊರೇಟರೀಸ್ ಹೆಚ್ಚಿನ ರೀತಿಯಲ್ಲಿ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ. ಕೆಲವು ಜಿಲ್ಲೆಗಳಿವೆ ; ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ, ತುಮಕೂರು ಜಿಲ್ಲೆ ಭಾಗ, ಚಿತ್ರದುರ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಡ್ರೈಲ್ಯಾಂಡ್ಸ್ ಹೆಚ್ಚಾಗಿವೆ. ಸಾಯಿಲ್ ಕನ್‌ಸರ್ವೇಷನ್ ವರ್ಕ್ಸ್‌ನ್ನು ಮೈದಾನ ಡೆವಲಪ್‌ಮೆಂಟ್ ಬೋರ್ಡ್ ತಮ್ಮ ಇಲಾಖೆಯಿಂದಲೆ ಮಾಡಿಸಿ, ಇಂಟೆನ್ಸಿವ್ ಪ್ರೋಗ್ರಾಂ ಹಾಕಿ, ಆ ಜಿಲ್ಲೆಗಳನ್ನು ಅಭಿವೃದ್ಧಿ ಮಾಡಬೇಕು. ಏತಕ್ಕೆಂದರೆ, ಡ್ರೈ ಫಾರ್ಮಿಂಗ್ ಏರಿಯಾನಲ್ಲಿ ಮಳೇ ಇಲ್ಲ. ಕೇವಲ 22 ಇಂಚು ಮಳೆ ಆಗುತ್ತೆ. ಶೇಕಡ 12 ಪರ್ಸೆಂಟ್ ಇರಿಗೇಷನ್ ಇದೆ. ಹೀಗಿರತಕ್ಕ ಕಾಲದಲ್ಲಿ ಈ ಜಿಲ್ಲೆಗಳಲ್ಲಿ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರೆಂದು ಕೇಳುತ್ತೇನೆ. ಇತ್ತೀಚೆಗೆ ಫರ್ಟಿಲೈಸರ್ಸ್ ಬಗ್ಗೆ ಬೇಕಾದಷ್ಟು ಭಾಷಣ ಆಗಿದೆ. ಮುಖ್ಯವಾದ ಕಾರಣ ಹೇಳುತ್ತೇನೆ ಹಿಂದೆ ರೈತರು ಹೆಚ್ಚಾಗಿ ಫರ್ಟಿಲೈಸರ್ ಉಪಯೋಗಿಸುತ್ತಾ ಇರಲಿಲ್ಲ. ಕಂಪೋಸ್ಟ್ ಮೆನ್ಯೂರನ್ನು ಗ್ರಾಮಾಂತರದಲ್ಲಿ ಮಾಡುತ್ತಾ ಇದ್ದರು ಈಗ ಪ್ರತಿಯೊಬ್ಬರೂ ಅಡ್ವರ್‌ಟೈಸ್‌ಮೆಂಟ್ ನೋಡಿ, ತೋಟಕ್ಕೆ, ಗದ್ದೆಗೆ ಗೊಬ್ಬರವನ್ನು ಹಾಕುವುದಕ್ಕೆ ಶುರು ಮಾಡಿದ್ದಾರೆ. ಕಾಂಪೋಸ್ಟ್ ಮೆನ್ಯೂರ್, ಗ್ರೀನ್ ಗೊಬ್ಬರ ರೂರಲ್ ಏರಿಯಾನಲ್ಲಿ ಹೆಚ್ಚಿಗೆತಯಾರಿಸಿ, ಹಾಕುವುದಕ್ಕೆ ಪ್ರಯತ್ನ ಮಾಡಬೇಕು. ಗೊಬ್ಬರ್ ಪ್ಲಾಂಟ್, ಕಾಂಪೋಸ್ಟ್ ಇಂಡಸ್ಟ್ರಿ ಮಾಡುವುದಕ್ಕೆ ಪ್ರಯತ್ನ ಮಾಡಿದರೆ ಗೊಬ್ಬರ ಕೇಳಿದಷ್ಟು, ಹೇಳಿದಷ್ಟು ರೈತರಿಗೆ ಸಿಗಲು ಸಹಾಯವಾಗುತ್ತದೆ. ಇದರಿಂದ ಫವರ್ ಮಾಡುವುದಕ್ಕಾಗುತ್ತದೆ, ಗೊಬ್ಬರ ಮಾಡುವುದಕ್ಕಾಗುತ್ತದೆ. ಅದನ್ನು

(ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು)

ಹೆಚ್ಚಿನ ರೀತಿಯಲ್ಲಿ ಮಾಡಬೇಕು ಎಂದು ಸಲಹೆ ಕೊಡುತ್ತೇನೆ. ಈಗ ರೈತರಿಗೆ ಸಾಯಂಕಾಲ 8 ಗಂಟೆ ಮೇಲೆ ತಿಳುವಳಿಕೆ ಕೊಡುತ್ತಿದ್ದಾರೆ, ಇದರಿಂದ ಏನು ಪ್ರಯೋಜನವಾಗುತ್ತದೆ? ಆದುದರಿಂದ ಇದನ್ನು ಬಿಟ್ಟು ಬೆಳಿಗ್ಗೆ ಕಾಲದಲ್ಲಿ ತಿಳುವಳಿಕೆ ಕೊಡಬೇಕೆಂದು ಸಲಹೆ ಕೊಡುತ್ತೇನೆ. ಇದರಿಂದ ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆಂದು ಅಂದುಕೊಂಡಿದ್ದೇನೆ. ಜೊತೆಗೆ ಕ್ರಾಪ್ ಇನ್‌ಷ್ಯೂರೆನ್ಸ್ ಸ್ಕೀಂ ಮಾಡಬೇಕು ಎಂದು ಅನೇಕ ಸಲ ಹೇಳಿದ್ದೇನೆ. ಸುಗ್ಗಿ ಕಾಲದಲ್ಲಿ ಬೆಳೆ ಕಡಿಮೆಯಾಗುತ್ತದೆ. ಇನ್ನೊಂದು ಕಾಲದಲ್ಲಿ ಬೆಳೆ ಜಾಸ್ತಿಯಾಗುತ್ತದೆ. ಕೇವಲ 3 ತಿಂಗಳ ಅವಧಿಯಲ್ಲಿ ಇಷ್ಟು ವ್ಯತ್ಯಾಸ ಮಾರ್ಕೆಟಿಂಗ್ ಸಿಸ್ಟಂ ಓವರ್ ಆಲ್ ಆಗಬೇಕು; ಸಪೋರ್ಟಿಂಗ್ ಪ್ರೈಸ್ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ರೈತರಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಸಾಲ ಸಿಗುತ್ತದೆ ಆದರೆ ಅವರು ಪ್ರೊಸೆಸ್ ಮಾಡುವುದರಲ್ಲಿ 6 ತಿಂಗಳಾಗುತ್ತದೆ. ಸಾಧ್ಯವಾದ ಮಟ್ಟಿಗೂ ಅನುಕೂಲವಾದ ರೀತಿಯಲ್ಲಿ ಜಾಗ್ರತೆ 1 ತಿಂಗಳು, 2 ತಿಂಗಳಲ್ಲಿ ಸಾಲ ಸಿಗುವಂತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಕಮರ್ಷಿಯಲ್ ಕ್ರಾಪ್ಸ್ ಏನಿವೆ? ಕಾಟನ್, ಶುಗರ್ ಮತ್ತು ಆಯಿಲ್ ಸೀಡ್ಸನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಯಾಗುವಂತೆ ಮಾಡಬೇಕು. ಆದರಲ್ಲೂ ನಮ್ಮಲ್ಲಿ ಬ್ಲಾಕ್ ಕಾಟನ್ ಸಾಯಿಲ್‌ನಲ್ಲಿ ''ವರಲಕ್ಷ್ಮಿ'' ಎಂಬ ಉತ್ತಮವಾದ ಕಾಟನನ್ನು ಬೆಳೆಯುತ್ತಾರೆ. 1906 ರಲ್ಲಿ ಗದಗ್ ಕಾಟನ್ ರೀಸರ್ಚ್ ಸ್ಟೇಷನ್ ಪ್ರಾರಂಭವಾಯಿತು. ಅದರ ಪ್ರಯೋಗವನ್ನು ಎಷ್ಟರ ಮಟ್ಟಿಗೆ ಉಪಯೋಗ ಮಾಡಿಕೊಂಡಿದ್ದಾರೆಂದು ನೋಡಬೇಕು. Egyptian ಕಾಟನ್‌ಗೆ ಸಮಾನವಾದ ಈ ವರಲಕ್ಷ್ಮಿ ಕಾಟನನ್ನು ಹೆಚ್ಚಿನ ರೀತಿಯಲ್ಲಿ ಬೆಳೆಯಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ. ಜೊತೆಗೆ ರೈತ ಬೆಳೆಯಬೇಕಾದರೆ ಒಳ್ಳೆಯ ಬೀಜಬೇಕು. ಯಾರೋ ಕೆಲವು ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಅವರಿಗೆ ಬೀಜಾವರಿ ಬೆಳೆಯಲು ಕೊಡುತ್ತಾ ಇದ್ದಾರೆ. ಒಳ್ಳೆಯ ಬೀಜ ಸಿಕ್ಕದೇ ಇರುವುದರಿಂದ ಇದನ್ನು ಸರ್ಕಾರ ಅಥವಾ ಯೂನಿವರ್ಸಿಟಿ ಮೂಲಕ ಕೊಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಕೊಡುತ್ತೇನೆ ಆಕಾಶ ನೋಡಿ ವ್ಯವಸಾಯ ಮಾಡುವ ಜನ ಹಾಕಿದ ಬೀಜ ಸರಿಯಾಗಿ ಬೆಳೆಯದೆ ಇದ್ದರೆ ಎಷ್ಟು ನಷ್ಟವಾಗುತ್ತದೆ ಎಂಬುದನ್ನು ತಾವೇ ಯೋಚಿಸಬೇಕು. ಆದುದರಿಂದ ಅಗ್ರಿಕಲ್ಚರ್ ಯೂನಿವರ್ಸಿಟಿ ಅಥವಾ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್ ಮೂಲಕ ಸರ್ಟಿಫೈಡ್ ಸೀಡ್ಸನ್ನು ಸಪ್ಲೈ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸಲಹೆ ಮಾಡುತ್ತೇನೆ. ಕ್ರಾಪ್ ಸಿಸ್ಟಂ ಅನ್ನು ಬದಲಾಯಿಸಬೇಕು, Multiple Crops system ನ್ನು ಹೆಚ್ಚಿನ ರೀತಿಯಲ್ಲಿ ಉತ್ತೇಜನ ಕೊಡಬೇಕು. ವೆಟರ್ನರಿ ಬಗ್ಗೆ ಹೇಳುವುದಾದರೆ, ಇಲಾಖೆಯವರು ಕ್ಯೂರೇಟೀವ್ ಅಂಡ್ ಪ್ರಿವೆಂಟೀವ್ ಮೆಥೆಡ್ ಇರುತ್ತದೆ. ಕಾಟನ್ ಡೆವಲಪ್‌ಮೆಂಟ್ ಸ್ಕೀಂ ಬರೀ ಪೇಪರಿನಲ್ಲಿ ಇದೆ, ಕಾರ್ಯರೂಪಕ್ಕೆ ಬಂದಿಲ್ಲ. ಮೈಸೂರು ಸಂಸ್ಥಾನದಲ್ಲಿ ಹಳ್ಳಿಕಾರ್ ಅಮೃತ್‌ಮಹಲ್ ಬ್ರೀಡ್ ಏನು ಇದೆ, ಅಲ್ಲಿ ಒಂದು ಕಾಲದಲ್ಲಿ 20,000 ದನಗಳು ಇದ್ದವು. ಈವತ್ತು 2000 ದನಗಳು ಮಾತ್ರ ಇದೆ. ಮೊನ್ನೆ ಆಕ್ಷನ್ ಮಾಡುವ ಕಾಲಕ್ಕೆ ಒಂದು ಜೊತೆ ಹೋರಿಗಳಿಗೆ ಸುಮಾರು 5000 ಆಗಿದೆ. ಒಂದು ಜೊತೆ ಎತ್ತು ರೈತನಿಗೆ ತೆಗೆದುಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ, ಅಮೇರಿಕ, ಇಂಗ್ಲೆಂಡ್‌ಗಳಲ್ಲಿ ಮಿಷಿನ್‌ನಲ್ಲಿ ಕೆಲಸ ಮಾಡುತ್ತಾ ಇದೆ. ಇಲ್ಲಿ ಪ್ಲೆಂಟಿ ಆಫ್ ಹ್ಯೂಮನ್ ರಿಸೋರ್ಸ್ಸ್ ಇದೆ ಜನಗಳಿಗೆ ಸಹಾಯವಾಗುವ ಎತ್ತು ಏನಿದೆ ಅದನ್ನು ಒಂದು ಜೊತೆ ತಗೆದುಕೊಳ್ಳುವುದಕ್ಕೆ ರೈತರಿಗೆ ಯೋಗ್ಯತೆ ಇಲ್ಲ. ಎಷ್ಟು ಜೊತೆ ಎತ್ತನ್ನು ರೈತರಿಗೆ ಸಪ್ಲೈ ಮಾಡಿದ್ದೀರಿ ಎಂದು ನಾನು ಕೇಳುತ್ತೇನೆ? ರಾಯನಕೆರೆ ಡೈರಿ ಫಾರ್ಮನ್ನು ತೆಗೆದುಕೊಂಡಿದ್ದೀರಿ. ಅದಕ್ಕೆ 14 ಲಕ್ಷ ಕೊಟ್ಟು ತೆಗೆದುಕೊಂಡಿದ್ದೀರಿ? ಅಲ್ಲಿ ಕ್ರಾಪ್ ಬ್ರೀಡಿಂಗ್ ಸೆಂಟರ್ ಮಾಡುತ್ತೇವೆ ಎಂದು ಹೇಳಿದ್ದೀರಿ, ಈಗ ಏನಿಲ್ಲಿ ಮಾಡಿದಿರಿ? ಅದೇ ಪ್ರಕಾರ ಫಾಡರ್ ಬ್ಯಾಂಕನ್ನು ಮಾಡಬೇಕು. ಬೆಂಗಳೂರು 15 ಮೈಲಿ ಸುತ್ತಮುತ್ತ, ಬೆಂಗಳೂರು ವಾಟರ್ ಮತ್ತು ಸ್ಯೂಯರೇಜ್‌ನ್ನು ಉಪಯೋಗಿಸಿ ಹೊಸದಾಗಿ ಹುಲ್ಲು ಬೆಳೆಸುತ್ತಾ ಇದ್ದಾರೆ ಹುಲ್ಲು ಬೆಳೆಸುವುದಕ್ಕೆ ನಮಗೆ ಈಗಿನ ಪರಿಸ್ಥಿತಿಯಲ್ಲಿ ಜಾಗ ಇಲ್ಲ. ನಮ್ಮಲ್ಲಿ ಜಾನುವಾರು ಕಡಿಮೆ ಗೋಮಾಳ ಜಾಸ್ತಿ ಎಂದು ಗಾದೆ ಇದೆ. ಆದುದರಿಂದ ಫ್ಯಾಡರ್ ಬ್ಯಾಂಕ್ ಹೆಚ್ಚಿನ ರೀತಿಯಲ್ಲಿ ಮಾಡಬೇಕು ಎಂದು ಹೇಳುತ್ತೇನೆ. ಇಲ್ಲದಿದ್ದರೆ ರೈತರು ತಮ್ಮ ದನಗಳನ್ನು ಮೇಯಿಸಲು ತಮ್ಮ ಬದುಗಳನ್ನೇ ಅವಲಂಬಿಸುವ ಕಾಲ ಬರುತ್ತದೆ. ಇದ್ದ ಹುಲ್ಲುಗಾವಲನೆಲ್ಲಾ ರೈತರಿಗೆ ಬೆಳೆ ಬೆಳೆಯಲು ಹಂಚಿದ್ದಾಯಿತು. ಗೋಮಾಳವನ್ನು ಸಹ ಹಂಚಿದ್ದಾಯಿತು. ದೇವಸ್ಥಾನದ ಜಮೀನನ್ನು ಹಂಚಿದ್ದಾಯಿತು. Land Reform ನಿಂದ ಇದ್ದ ಜಮೀನಿನ ಪ್ರಮಾಣ ಹಂಚಿಕೆಯಿಂದ ಕಡಿಮೆಯಾಯಿತು. ಈ ಕಾರಣಗಳನ್ನು ನೋಡಿದರೆ ''ಹುಲ್ಲು'' ಬೆಳೆಯಲು ಜಾಗ

ಎಲ್ಲಿದೆ ಎಂದು ಪ್ರಶ್ನಿಸುತ್ತೇನೆ. ದನಕ್ಕೆ ಮೈ ಎಲ್ಲಾ ಹೊಟ್ಟೆ. ಅದಕ್ಕೆ ಮುಖ್ಯವಾದ ಆಧಾರ ''ಹುಲ್ಲ''. ಇದರ ಬಗ್ಗೆ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಹಾಲಿನ ಬಗ್ಗೆ ಹೇಳುವುದಾದರೆ ವೈಟ್ ರೆವಲ್ಯೂಷನ್ ತರುತ್ತೇವೆ, 40 ಕೋಟಿ ರೂಪಾಯಿಯನ್ನು ವರ್ಲ್ಡ್ ಬ್ಯಾಂಕ್‌ನಿಂದ ತರುತ್ತೇವೆ ಎಂದು ಭಾಷಣ ಮಾಡುತ್ತೀರಿ, ಕಾರ್ಯರೂಪಕ್ಕೆ ಯಾವಾಗ ತರುತ್ತೀರಿ, ಯಾವಾಗ ಮಾಡುತ್ತೀರಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅನಿಮಲ್ ಫುಡ್ ಕಾರ್ಪೊರೇಷನ್ ಮಾಡಬೇಕು. ನಮ್ಮ ಬನ್ನೂರು ಕುರಿ ಬಹಳ ಉತ್ತಮವಾದ ಕುರಿ. Animal ಫುಡ್ ಕಾರ್ಪೊರೇಷನ್ ಅಸ್ತಿತ್ವಕ್ಕೆ ಯಾವಾಗ ಬರುತ್ತದೆ ಎಂದು ನಾನು ಹೇಳುತ್ತೇನೆ ಅಮೃತಮಹಲ್ ಬಗ್ಗೆ ಹೇಳುವುದಾದರೆ ಆಗ ರೈತರಿಗೆ ಹೆಚ್ಚು ಗೊಬ್ಬರ, ಹುಲ್ಲು ಸಿಕ್ಕುತ್ತಿತ್ತು. ಆದರೆ ಇವತ್ತಿನ ದಿವಸ ಅಲ್ಲಿ 67ಸಾವಿರ ಎಕರೆ ಮಾತ್ರ ಇದೆ. ಹಂಗಾಮಿಯಾಗಿ ಸಾಗುವಳಿ ಕೊಡುತ್ತಿದ್ದರು. Temporary Cultivation ನಮ್ಮದೇ ಜಮೀನು ಆಗಿತ್ತು ಆಗ ಸರ್ಕಾರಕ್ಕೆ ಲ್ಯಾಂಡ್ ರೆಮಿಸನ್ ಫುಲ್ ಆಗಿ ವಸೂಲು ಮಾಡುತ್ತಿದ್ದರು. ಆದರೆ ಇವತ್ತು ಅದು ಕಡಿಮೆಯಾಗಿದೆ. ನಾವೇ ಬೆಳೆದು ಬೇಕಾದಷ್ಟು ಹುರಳಿ ಸರ್ಕಾರಕ್ಕೆ ಕೊಡುತ್ತಿದ್ದೆವು. ಇವತ್ತಿನ ದಿವಸ ಅಮೃತಮಹಲ್ ಮತ್ತು ಹಳ್ಳಿಕಾರ್ Breeding Bull ''ತಳಿ'' ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ವರ್ಲ್ಡ್ ಬ್ಯಾಂಕ್‌ನ ಮೂಲಕ ಬ್ರಿಡಿಂಗ್ ಪೂರ್ಸ್ ಏನು ಇದೆ ಅದನ್ನು ಹೆಚ್ಚಿನ ರೀತಿಯಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಇಡಬೇಕೆಂದು ಹೇಳಬಯಸುತ್ತೇನೆ. Calf Breeding Scheme ಏನಾಯಿತು? ಈ ಎರಡು ಇಲಾಖೆಗಳು ರೈತನಿಗೆ ಬಹಳ ಮುಖ್ಯವಾದ ಇಲಾಖೆಗಳು, ಇವು ರೈತನಿಗೆ ನೇರವಾಗಿ ಸಹಾಯ ಮಾಡುವ ಇಲಾಖೆಗಳು, ಆದುದರಿಂದ ನೀವು ಕೇಳಿರತಕ್ಕ ಹಣ ಸಾಲದು ಇನ್ನು ಹೆಚ್ಚು ಕೇಳಿದ್ದರೆ ಚೆನ್ನಾಗಿತ್ತು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಹೆಚ್ ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಸಭಾಪತಿಗಳೇ, ಈ ದಿವಸ ಚರ್ಚಿಸುತ್ತಾ ಇರತಕ್ಕಂಥದ್ದು ವ್ಯವಸಾಯ ಮತ್ತು ಸಾಯಿಲ್ ಕನ್‌ಸರ್ವೇಷನ್ ಮತ್ತು ಅನಿಮಲ್ ಹಸ್ಬೆಂಡರಿ, ಡೈರಿ ಡೆವಲಪ್‌ಮೆಂಟ್ ವಿಷಯವಾಗಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ.

ಈಗಾಗಲೇ ಮಾತನಾಡಿರತಕ್ಕ ಅನೇಕ ಸ್ನೇಹಿತರುಗಳು ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಯನ್ನು ಸಲಹೆ ರೂಪದಲ್ಲಿ ಸಭೆಯ ಮುಂದೆ ಇಟ್ಟಿದ್ದಾರೆ. ಈಗ ನಮ್ಮ ದೇಶದಲ್ಲಿ ಯಾರು ಮಾತನಾಡಿದರೂ ನಾವು ಬೆಳೆಯುತ್ತಾ ಇರತಕ್ಕದರಿಂದ ಆಹಾರ ಸಾಕಾಗುವುದಿಲ್ಲ, ನಮ್ಮ ದೇಶದಲ್ಲಿ ಸಾಕಷ್ಟು ಆಹಾರವನ್ನು ಬೆಳೆದಿಲ್ಲ, ಹೊರಗಡೆಯಿಂದ ತರಿಸಬೇಕು ಎನ್ನತಕ್ಕಂಥ ರೀತಿಯಲ್ಲಿ ಮಾತನಾಡಿದ್ದಾರೆ. ಕಾರಣವಾದರೂ ಇಷ್ಟೆ. ಎಷ್ಟೋ ವರ್ಷಗಳ ಕಾಲ ಕಾರ್ಯಕ್ರಮವನ್ನು ಹಾಕಿಕೊಂಡು ವ್ಯವಸಾಯವನ್ನು ಮಾಡಿದರೂ ಕೂಡ ನಮಗೆ ಬೇಕಾದಷ್ಟು ಆಹಾರವನ್ನು ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಈಗ ನಾವು ರೈತನಿಗೆ ಆಕರ್ಷಣೀಯವಾದ ಬೆಲೆಯನ್ನು ಒದಗಿಸದೇ ಹೋದರೆ, ಆಹಾರವನ್ನು ಬೆಳೆಯುವ ಕಡೆ ತನ್ನ ಗಮನವನ್ನು ಹರಿಸುವುದಿಲ್ಲವೆಂದು ನಾನಾದರೂ ಹೇಳಬಯಸುತ್ತೇನೆ. ಈಗ ಕಬ್ಬು, ಕಡಲೇಕಾಯಿ, ಹತ್ತಿ ಇಂಥ ಕಮರ್ಷಿಯಲ್ ಕ್ರಾಪ್ಸ್ ಏನು ಇದೆ, ಅದರಿಂದ ಹೆಚ್ಚಿನ ಲಾಭ ಬರುತ್ತಿದೆ ಎನ್ನತಕ್ಕಂಥದ್ದನ್ನು ತಿಳಿದುಕೊಂಡು ರೈತ ಹೆಚ್ಚು ಹೆಚ್ಚಿನ ಮಟ್ಟದಲ್ಲಿ ಕಮರ್ಷಿಯಲ್ ಕ್ರಾಪ್ಸ್‌ನ್ನು ಬೆಳೆಯುವ ಕಡೆ ಗಮನವನ್ನು ಹರಿಸುತ್ತಿದ್ದಾರೆಯೇ ಹೊರತು ಆಹಾರ ಬೆಳೆಯುವ ಕಡೆ ಗಮನವನ್ನು ಹರಿಸುವುದಿಲ್ಲ. ಭತ್ತ, ರಾಗಿ ಬೆಳೆದಂಥವನು ವರ್ಷದ ಕೊನೆಯಲ್ಲಿ ಖರ್ಚು ಬರತಕ್ಕ ಉತ್ಪತ್ತಿಯನ್ನು ಲೆಕ್ಕ ಹಾಕಿದರೆ, ನಷ್ಟ ಕಂಡುಬರುತ್ತದೆಯೇ ಹೊರತು ಅದರಿಂದ ಆದಾಯ ಕಂಡುಬರುವುದಿಲ್ಲ. ಆದುದರಿಂದ ಅದಕ್ಕೆ ನಮ್ಮ ತಜ್ಞರ ಸಮಿತಿಮಾಡಿ, ಯಾವ ರೀತಿ ಸಲಹೆ ಮಾಡಬೇಕು, ಯಾವ ರೀತಿ ಪ್ರೋತ್ಸಾಹ ಕೊಡಬೇಕು ಎನ್ನುವ ಬಗ್ಗೆ ಸರ್ಕಾರದವರು ತೀರ್ಮಾನವನ್ನು ತೆಗೆದುಕೊಂಡು, ಆಹಾರಧಾನ್ಯಗಳನ್ನು ಕಮರ್ಷಿಯಲ್ ಬೆಳೆಗಿಂತ ಹೆಚ್ಚಿನ ಧಾರಣೆಯನ್ನು ಕಲ್ಪಿಸಿಕೊಡದೇ ಹೋದರೆ ಆಹಾರಧಾನ್ಯದ ಕೊರತೆಯನ್ನು ನೀಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ರೈತಬೆಳೆಯುತಕ್ಕ ಆಹಾರಧಾನ್ಯಗಳನ್ನು ಮಾರುಕಟ್ಟೆಯಲ್ಲಿ, ಸುಗ್ಗಿಯಲ್ಲಿ ಧಾರಣೆ ಕಡಿಮೆ ಇರುತ್ತದೆ, ಆಗ ವರ್ತಕರು ಆ ಕಾಲದಲ್ಲಿ ಕೊಂಡು ಇಟ್ಟು ಸೆಪ್ಟೆಂಬರ್, ಆಕ್ಟೋಬರ್ ತಿಂಗಳಲ್ಲಿ ಮಹಾನವಮಿ ತಿಂಗಳಲ್ಲಿ ಹೆಚ್ಚಿನ ಧಾರಣೆಗೆ ಆಹಾರಧಾನ್ಯವನ್ನು ಮಾರ್ಕೆಟ್ಟಿನಲ್ಲಿ ಬಿಟ್ಟು ಹೆಚ್ಚಿನ ಲಾಭವನ್ನು ಮಧ್ಯವರ್ತಿಗಳು ಪಡೆಯುತ್ತಾರೆ, ಇದು ಹೋಗಬೇಕು. ನಮ್ಮಲ್ಲಿರತಕ್ಕ ಕೋ ಆಪರೇಟಿವ್ ಸೊಸೈಟಿಗಳು ಮಾರ್ಟಗೇಜ್ ಮಾಡಿಕೊಂಡು ಧಾನ್ಯಗಳನ್ನು ಇಟ್ಟುಕೊಂಡು ಕೊಡುತ್ತೇವೆಂದು ಹೇಳುತ್ತಾರೆ, ಆದರೆ ಆ ಸೊಸೈಟಿಗಳೆಲ್ಲವೂ ಡಿಫಾಲ್ಟರ್ ಆಗಿದೆ. ಸೊಸೈಟಿಗಳಿಂದ ರೈತನಿಗೆ ಸಾಲದ ಹಣ ದೊರಕುತ್ತಾ ಇಲ್ಲ, ಅದು ಸಿಗಬೇಕು, ಆ ಕೆಲಸ ಆಗದೇ ಹೋದರೆ ನಿಜವಾಗಿಯೂ ರೈತ

(ಶ್ರೀ ಎಚ್. ಜಿ. ಚನ್ನಪ್ಪ)

ಆಹಾರಧಾನ್ಯವನ್ನು ಬೆಳೆಯುವುದನ್ನು ಬಿಟ್ಟು ಯಾವ ಬೆಳೆ ಹೆಚ್ಚಿನ ಮಟ್ಟದಲ್ಲಿ ಲಾಭ ಬರುತ್ತದೆ ಅಂಥ ಬೆಳೆಗಳನ್ನು ಅತ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ. ಬೇಸಾಯ ಪದ್ಧತಿ ಕೂಡ ನಮ್ಮ ತಾತ ಮುತ್ತಾತರವರ ಬೇಸಾಯ ಪದ್ಧತಿಯನ್ನು ಮಾಡಿಕೊಂಡು ಬರುತ್ತಿದ್ದರೋ ಅದೇ ಪದ್ಧತಿಯನ್ನು ಅನುಸರಿಸಿಕೊಂಡು ಹೋಗುತ್ತಿದ್ದೇವೆ, ಈ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ, ಹುಡುಗರಿಗೆ ಜ್ಞಾನಾರ್ಜನೆ ವ್ಯವಸಾಯದಲ್ಲಿ ಬರಬೇಕಾದರೆ ಪ್ರೈಮರಿ ಶಾಲೆಗಳಲ್ಲಿಯೇ ಅತನಿಗೆ ವ್ಯವಸಾಯದ ಬಗ್ಗೆ ಪಶುಸಂಗೋಪನೆಯ ಬಗ್ಗೆ ಒಂದು ತರಗತಿಯಲ್ಲಿ, ಒಂದು ಪಿರಿಯಡ್‌ನಲ್ಲಿ ಮೀಸಲಾಗಿಟ್ಟು ತರಪೇತಿ ಕೊಟ್ಟುಕೊಂಡು ಬರಬೇಕು. ಬೆಳೆಗೆ ಬರತಕ್ಕ ರೋಗರುಜಿನುಗಳು ಏನು ಇವೆ, ಚಿನ್ಹೆಗಳು ಏನು ಇವೆ, ಇಂಥ ಚಿನ್ಹೆಗಳಿಂದ ಇಂಥ ರೋಗ ಬರುತ್ತದೆ ಎಂಬುದನ್ನು ಕಂಡುಹಿಡಿಯತಕ್ಕಂಥ ಒಂದು ಐಚ್ಛಿಕವಾಗಿ ಶಿಕ್ಷಣವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಸಲಹೆ ಮಾಡುತ್ತೇನೆ. ಮತ್ತು ರೈತನು ಬರೀ ವ್ಯವಸಾಯದಿಂದ ತನ್ನ ಜೀವನವನ್ನು ಸುಧಾರಿಸಿ ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಜೊತೆಗೆ ಡೈರಿ, ಪೌಲ್ಟ್ರಿ ಉದ್ಯಮ ಮಾಡಿಕೊಂಡು ಹೋದರೆ ಅತನಿಗೆ ಆದ ಖರ್ಚನ್ನು ಸರಿತೂಗಿಸುವುದಕ್ಕೆ ಸಾಧ್ಯವಾಗುತ್ತದೆ; ಇಲ್ಲದೇ ಹೋದರೆ ಸಾಧ್ಯವಾಗುವುದಿಲ್ಲ. ಅದಕ್ಕೋಸ್ಕರ ಹೊಸ ಹೊಸ ತಳಿಗಳನ್ನು ನೀವು ತರಿಸುತ್ತೀರಿ, ಅವುಗಳಿಂದ ಆಗುವ ಉಪಯೋಗ ಜನತೆಗೆ ಗೊತ್ತಿಲ್ಲ. ಅತನಿಗೆ ಭಯ ಇರುವುದರಿಂದ, ಅದು ಹೋಗಬೇಕಾದರೆ ತರಪೇತಿಯನ್ನು ಸಕಾಲಕ್ಕೆ ಕೊಟ್ಟರೆ ಭಯ ಹೋಗುತ್ತದೆ. ಉತ್ತಮ ರಾಸುಗಳನ್ನು ಸಾಕಿ ತನ್ನ ವ್ಯವಸಾಯದ ಜೊತೆಗೆ ಡೈರಿ ಮತ್ತು ಹಾಲಿನಿಂದ ಮತ್ತು ಮೊಟ್ಟೆಯಿಂದ ಬರತಕ್ಕ ಹಣದಿಂದ ತನ್ನ ಖರ್ಚನ್ನು ಸರಿತೂಗಿಸುವುದಕ್ಕೆ ಸಹಾಯಕವಾಗುತ್ತದೆ. ಅನಿಮಲ್ ಹಸ್ಬೆಂಡರಿ ವಿಷಯದಲ್ಲೂ ಕೂಡ ವಿದ್ಯಾರ್ಥಿಗಳಿಗೆ ತರಗತಿಗಳು ಇಲ್ಲ, ಅದಕ್ಕಾಗಿ ಒಂದು ಪೀರಿಯಡ್ ಇಟ್ಟು ಅದನ್ನು ಕಂಪಲ್ ಸರಿಯಾಗಿ, ಹಾಗೂ ಯಾರು ಕಲಿಯಬೇಕೆಂದು ಮುಂದೆ ಬರುತ್ತಿದ್ದಾರೆ ಅವರಿಗೆ ಹೇಳಿಕೊಡಬೇಕು. ಮತ್ತು ಹಳ್ಳಿಯ ಮಕ್ಕಳಿಗೆ ಇದು ಬೇಕೇ ಬೇಕು ಎಲ್ಲಾ ಶಾಲೆಗಳಲ್ಲೂ ಕೂಡ ಈ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮತ್ತೆ ವ್ಯವಸಾಯದ ಅಹಾರಧಾನ್ಯಗಳ ಮೇಲೆ ದನಗಳ ಮೇಲೆ ತೆಗೆದುಕೊಂಡು ಬಂದಂಥ ಹಣ ಅಕಸ್ಮಾತ್ ಆಗಿ, ಮಳೆ ಬೆಳೆಯಾಗದೆ ಬೆಳೆಗೆ ಲುಕ್ಸಾನು ಆಗಿ ಅತನಿಗೆ ಕ್ರಾಪ್ಸ್ ಲಾಸ್ಟ್ ಆದರೆ ಕಾಂಪನ್‌ಸೇಷನ್ ಕೊಡತಕ್ಕಂಥ ಪರಿಸ್ಥಿತಿ ನಮ್ಮಲ್ಲಿ ಇರಬೇಕು. ಈ ಒಂದು ಪರಿಸ್ಥಿತಿಯನ್ನು ನಾವು ತರದೇ ಹೋದರೆ ಆಹಾರ ಧಾನ್ಯ ಬೆಳೆಯುವುದಕ್ಕೆ ಹೆಚ್ಚಿನ ಜನ ಮುಂದೆ ಬರುವುದಿಲ್ಲ. ಆದ ಅದರಲ್ಲೂ ನಮ್ಮ ಇಂಡಿಯಾ ದೇಶದಲ್ಲಿ ಮಳೆಗಾಲ ಅನಿಶ್ಚಿತ. ಒಂದು ದಿವಸ 8 ಇಂಚ್‌ವರೆಗೆ ಮಳೆ ಬಿದ್ದರೆ ಮತ್ತೊಂದು ವರ್ಷದಲ್ಲಿ ಮಳೆಯೇ ಆಗುವುದಿಲ್ಲ. ಇಂಥ ಒಂದು ಪರಿಸ್ಥಿತಿ ಇರುವಾಗ ರೈತನ ಕಷ್ಟಕ್ಕೆ ಪ್ರತಿಫಲವನ್ನು ದೊರಕಿಸತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡದೇ ಹೋದರೆ ನಮ್ಮ ವ್ಯವಸಾಯ ಇದೇ ರೀತಿಯಲ್ಲಿ ಕುಂಠಿತವಾಗುತ್ತದೆಯೇ ಹೊರತು ಯಾವ ಸಾಧನೆಯೂ ಆಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸಾಯಿಲ್ ಕನ್‌ಸರ್ವೇಷನ್ ವಿಷಯ. ಗುಡ್ಡ ಬೆಟ್ಟಗಳು ಜಾಸ್ತಿ ಇರುವ ತಾಲ್ಲೂಕ್ ಗಳನ್ನು ತೆಗೆದುಕೊಂಡು ಕಂಪಲ್‌ಸರಿಯಾಗಿ ಒಂದುಕಡೆಯಿಂದ ಸಾಯಿಲ್ ಕನ್‌ಸರ್ವೇಷನ್ ಕಾಂಟೂರ್ ಬಂಡಿಂಗ್ ಸ್ಕೀಮ್ ಜಾರಿಗೆ ಕೊಟ್ಟು ಮಾಡುವುದರಿಂದ ಹಾಕತಕ್ಕ ಗೊಬ್ಬರ, ಬೀಳ ತಕ್ಕ ಮಳೆಯಿಂದ ಕೊಚ್ಚಿ ಹೋಗಿ ಹಳ್ಳಕ್ಕೆ ಸೇರದೇ ಭೂಮಿಯಲ್ಲಿಯೇ ಇದ್ದು ಬೆಳೆ ಬೆಳೆಯುವು ದಕ್ಕೆ ಅನುಕೂಲವಾಗುತ್ತದೆ ಆ ಪದ್ಧತಿಯನ್ನು ಎಲ್ಲಾ ಕಡೆಗೂ ಜಾರಿಗೆ ತರಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳಬಯಸುತ್ತೇನೆ.

ಮತ್ತೆ ಬೆಂಗಳೂರಿನ ಸುತ್ತಮುತ್ತಲ 40 ಮೈಲಿ ಫಾಸಲಿಯಿಂದ ಡೈರಿಗೆ ಬರತಕ್ಕ ಹಾಲನ್ನು ಶೇಖರಣೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ಆದರೆ ಕೆಲವು ಸಂದರ್ಭದಲ್ಲಿ ನೀವು ವ್ಯಾನು ಗಳನ್ನು ಕಳುಹಿಸುವುದಿಲ್ಲ. ಕಾರಣ ಡೈರಿಯವರ ಅಭಿಪ್ರಾಯದಲ್ಲಿ ರಸ್ತೆಗಳು ಸರಿಯಾಗಿಲ್ಲ, ಅಲ್ಲಿಗೆ ಹೋಗುವುದಕ್ಕೆ ಆಗುವುದಿಲ್ಲ ಎನ್ನುವ ಈ ಕಾರಣಗಳನ್ನು ಹೇಳಿ, ಅಲ್ಲಗೆ ವ್ಯಾನುಗಳು ಹೋಗದೇ ಇರುವುದರಿಂದ ಹಾಲು ಶೇಖರಣೆ ಮಾಡಲಾಗದೇ ಅನೇಕ ಮಿಲ್ಕ್ ಸೊಸೈಟಿಗಳಿಗೆ ಹಾಲನ್ನು ಕೊಡುತ್ತಿದ್ದಾರೆ. ಈ ಎಲ್ಲಾ ಕಾರಣಗಳನ್ನೂ ಸುಧಾರಣೆ ಮಾಡಿದರೆ ಸಾಕು ಯಶಸ್ವಿ ಯಾಗುತ್ತದೆಂದು ಹೇಳಬಯಸುತ್ತೇನೆ.

ಮತ್ತೆ ಉತ್ತಮವಾದ ಹಸುಗಳನ್ನು ಹೊರಗಡೆಯಿಂದ ತರಿಸಬೇಕೆಂದು ಹೇಳುತ್ತೀರಿ. ಅದರ ಬದಲು ಹೋರಿಗಳನ್ನು ತರಿಸಿ ನಮ್ಮ ನಾಡು ಹಸುಗಳಿಗೆ ಇಂಜೆಕ್ಷನ್ ಕೊಟ್ಟು ಕರುಗಳನ್ನು ಉತ್ಪತ್ತಿ ಮಾಡಿ ಸಾಕುವುದರಿಂದ ರೋಗಗಳನ್ನು ತಡೆಗಟ್ಟತಕ್ಕಂಥ ಶಕ್ತಿ ಬರುತ್ತದೆ. ರಿಜಿಸ್ಟೆನ್ ಪವರ್ ಬರುತ್ತದೆ. ಈ ಒಂದು ಪದ್ಧತಿಯನ್ನು ಹೆಚ್ಚಿನ ಮಟ್ಟದಲ್ಲಿ ಮಾಡಬೇಕೇ ವಿನಹಃ ಹೊರಗಡೆ ದೇಶದಿಂದ ಹೆಣ್ಣು ಹಸುಗಳನ್ನು ತರಿಸಿಕೊಂಡು ಮಾಡಿದರೆ ಅಷ್ಟು ಪ್ರಯೋಜನವಾಗುವುದಿಲ್ಲವೆಂದು ನನಗನ್ನಿಸುತ್ತದೆ. ಈಗ ನಮ್ಮಲ್ಲಿ ಗೊಬ್ಬರ ಸಿಕ್ಕುವುದಿಲ್ಲ ಎನ್ನತಕ್ಕಂಥ ಮಾತನ್ನು ಕೇಳುತ್ತಿದ್ದೇವೆ. ಅದು ಸಹಜ. ಕಾರಣ. ಬೆಂಗಳೂರಿನಲ್ಲಿರತಕ್ಕ ಕಕ್ಕಸ್ ಗುಂಡಿಗಳನ್ನು ಮುಚ್ಚಿ ಸೈಟ್‌ಗಳನ್ನು ಮಾಡುವುದಕ್ಕಾಗಿ ಉಪಯೋಗಿಸುತ್ತಿದ್ದಾರೆ. ಅದರ ಬದಲು ಕಕ್ಕಸ್ಸು ಗುಂಡಿಯಲ್ಲಿ ಬೀಳತಕ್ಕದ್ದನ್ನು ಕಾರ್ಪೊರೇಷನ್ನಿನವರು ಅಥವಾ ಮುನಿಸಿಪಲ್‌ನವರು 10 ಮೈಲಿ ಆಚೆಗೆ ತೆಗೆದುಕೊಂಡು ಹೋಗಿ ಕಾಂಪೋಸ್ಟ್ ಗೊಬ್ಬರವನ್ನಾಗಿ ಮಾಡಿ ರೈತರಿಗೆ ಮಾರಾಟ ಮಾಡಿದರೆ ಅದರಿಂದ ಹೆಚ್ಚಿನ ಪ್ರಯೋಜನವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಈ ಗುಂಡಿಗಳನ್ನು ಮುಚ್ಚಿರುವುದರಿಂದ ಸೈಟು ತೆಗೆದುಕೊಳ್ಳತಕ್ಕಂಥವನಿಗೂ ಸುಖವಿಲ್ಲ ಮತ್ತು ಗೊಬ್ಬರವೂ ಕೂಡ ವೇಸ್ಟ್ ಆಗುತ್ತದೆ. ಅದರ ಬದಲು ಕಾಂಪೋಸ್ಟ್ ಮಾಡಿ ಅದನ್ನು ರೈತರಿಗೆ ಕೊಟ್ಟರೆ ಆದರಿಂದ ಆರ್ಟಿಫಿಷಿಯಲ್ ಗೊಬ್ಬರದ ಬೇಡಿಕೆಯೂ ಕಡಿಮೆಯಾಗುತ್ತದೆ ಎಂದು ಹೇಳುತ್ತೇನೆ. ಬೆಂಗಳೂರು ಸುತ್ತಮುತ್ತ ಇರುವ ಗೊಬ್ಬರವನ್ನು ಲಾರಿಗಳಲ್ಲಿ ತಂದು ಕಾಂಪೋಸ್ಟ್ ಮಾಡಿದರೆ ಅದರಿಂದ ಲಕ್ಷಾಂತರ ರೂಪಾಯಿ ಲಾಭ ಬರುತ್ತದೆ ಇಲ್ಲದೇ ಹೋದರೆ ಅದು ನಿಷ್ಪ್ರಯೋಜನವಾಗುತ್ತದೆ. ಈಗ ನಾವು ಅದರಿಂದ ಪ್ರಯೋಜನ ಪಡೆಯುತ್ತಾ ಇಲ್ಲ. ಆದುದರಿಂದ ಅದನ್ನು ಕಾಂಪೋಸ್ಟ್ ಮಾಡಿ ಅನುಕೂಲವಾದ ರೀತಿಯಲ್ಲಿ ಉಪಯೋಗವಾಗುವ ರೀತಿಯಲ್ಲಿ ಅನುಕೂಲ ಮಾಡಿಕೊಳ್ಳಬೇಕು ಎಂದು ಸಲಹೆ ಮಾಡಿ ಮಾನ್ಯ ಉಪಾಧ್ಯಕ್ಷರು ನನಗೆ ಮಾತನಾಡಲು ಈ ಒಂದು ಅಲ್ಪ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಎಂ. ನಂಜೇಗೌಡ (ಗಂಡಸಿ).—ಸನ್ಮಾನ್ಯ ಉಪಾಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯ ವ್ಯವಸಾಯ ಮಂತ್ರಿಗಳು ಮತ್ತು ಪಶುಸಂಗೋಪನಾ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗೆ ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತಾ ಆ ಬಗ್ಗೆ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ.

ಈಗ ದೇಶದಲ್ಲಿ ಮುಖ್ಯವಾಗಿ ಎಲ್ಲರ ಗಮನವನ್ನು ಸೆಳೆಯತಕ್ಕಂಥಾದ್ದು ಗೊಬ್ಬರ. ಈ ಬಗ್ಗೆ ನಾನಾದರೂ ಕೂಡ ಹೇಳುವುದು ಸರ್ಕಾರದವರು ಈ ಬಗ್ಗೆ ಹೆಚ್ಚು ಶ್ರದ್ಧೆ ವಹಿಸಿ ಈಗ ಬಂದಿರತಕ್ಕಂಥ ಕಷ್ಟದಿಂದ ಪಾರಾಗುವುದಕ್ಕೆ ಸರ್ಕಾರದವರು ಸೂಕ್ತವಾದ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಂಡಿದ್ದರೂ ಕೂಡ ಇನ್ನೂ ಜಾಗ್ರತೆಯಾಗಿ ಪರಿಶೀಲನೆ ಮಾಡಿ ದೇಶದ ಸ್ಥಿತಿಗತಿಗಳನ್ನು ವಿಚಾರ ಮಾಡಿದ್ದರೆ ಇನ್ನೂ ಉತ್ತಮವಾದ ರೀತಿಯಲ್ಲಿ ಈ ಗೊಬ್ಬರದ ಅಭಾವವನ್ನು ನೀಗಬಹುದಾಗಿತ್ತು ಎಂದು ಹೇಳುತ್ತೇನೆ. ಅದು ಹೇಗೆಂದರೆ ಸ್ವಾಮಿ, ಈ ದೇಶದಲ್ಲಿ ಬೆಳೆ ಮಾಡತಕ್ಕಂಥ ಕಾಲ ಪ್ರತಿ ಡಿಸ್ಟ್ರಿಕ್‌ನಿಂದ ಡಿಸ್ಟ್ರಿಕ್‌ಗೂ ಬದಲಾವಣೆ ಆಗುತ್ತಾ ಇರುತ್ತದೆ, ಒಂದು ಮಳೆಗಾಲದಲ್ಲಿ ಆಗತಕ್ಕಂಥ ಬೆಳೆಗಳಿಗೆ ಗೊಬ್ಬರ ಕೊಡುವುದು ಒಂದು ವಿಧಾನ ಇದೆ, ಮತ್ತೊಂದು ನೀರಾವರಿ ಆಗತಕ್ಕಂಥ ಬೆಳೆಗಳಿಗೆ ಗೊಬ್ಬರ ಕೊಡತಕ್ಕಂಥಾದ್ದು ಇನ್ನೊಂದು ವಿಧಾನ. ಈ ಬಗ್ಗೆ ನಮ್ಮ ಸಲಹೆ ಏನೆಂದರೆ ಇವೆರಡನ್ನೂ ಬೇರೆಬೇರೆಯಾಗಿ ಪರಿಗಣಿಸಬೇಕು ಆರೀತಿ ಮಾಡಿದರೆ ಎಲ್ಲರಿಗೂ ಗೊಬ್ಬರ ಕೊಡುವುದಕ್ಕೆ ಸಾಧ್ಯವಾಗುತ್ತದೆ, ಈಗ ಗೊಬ್ಬರ ತಯಾರು ಮಾಡತಕ್ಕಂಥ ಕಂಪನಿಯಿಂದ ಪ್ರತಿ ತಿಂಗಳೂ ಗೊಬ್ಬರ ಸಪ್ಲೈ ಆಗುತ್ತಾ ಇದೆ. ಇದರಿಂದ ಏನಾಗಿದೆ ಎಂದರೆ ನಮ್ಮ ದೇಶಕ್ಕೆ ಬೇಕಾಗಿರತಕ್ಕಂಥ ಪೂರ್ತಿ ಗೊಬ್ಬರ ವರ್ಷದ ಎಲ್ಲಾ ಭಾಗದಲ್ಲೂ ಬರುವುದಕ್ಕೆ ಅನುಕೂಲವಾಗಿದೆ. ಅದಕ್ಕೆ ನನ್ನ ಸಲಹೆ ಏನೆಂದರೆ ಋತುಮಾನದ ಪರಿಸ್ಥಿತಿಯನ್ನು ಅನುಸರಿಸಿ ಯಾವ ಯಾವ ಡಿಸ್ಟ್ರಿಕ್‌ನಲ್ಲಿ ಯಾವ ಯಾವ ಬೆಳೆ ಯಾವ ಯಾವ ಕಾಲದಲ್ಲಿ ಬರುತ್ತದೆ ಅನ್ನುವುದನ್ನು ಸರಿಯಾಗಿ ಲೆಕ್ಕಾಚಾರ ಹಾಕಿಕೊಂಡು ಅಧಿಕಾರಿಗಳು ಆಯಾಯಾ ಜಿಲ್ಲೆಗಳಿಗೆ ಒಂದೇ ಸಾರಿ ಗೊಬ್ಬರವನ್ನು ಒದಗಿಸುವಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬಹುದಾಗಿತ್ತು. ಆರೀತಿ ಇದುವರೆಗೆ ಮಾಡಿಲ್ಲ. ಆದುದರಿಂದ ಇನ್ನು ಮುಂದಾದರೂ ಕೂಡ ನಾನು ಮೊದಲೇ ಹೇಳಿದಂತೆ ಮಳೆಯಿಂದ ಬೆಳೆಯತಕ್ಕಂಥ ಬೆಳೆಗೆ ಅದಕ್ಕೆ ಆಗುವಷ್ಟು ಗೊಬ್ಬರವನ್ನು ಏಕ ಕಾಲದಲ್ಲಿ ಕೊಡುವಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಉತ್ತಮ ಎಂದು ನಾನಾದರೂ ಕೂಡ ಸಲಹೆ ಮಾಡುತ್ತೇನೆ.

(ಶ್ರೀ ಎಂ. ನಂಜೇಗೌಡ)

ಇನ್ನು ದೇಶದಲ್ಲಿ ಮಿಶ್ರಗೊಬ್ಬರವನ್ನು ತಯಾರು ಮಾಡುವುದಕ್ಕೆ 10-12 ಕಂಪನಿಗಳು ರಿಜಿಸ್ಟರ್ಡ್ ಆಗಿದೆ. ಅದರಿಂದ ಅನಾನುಕೂಲ ಜಾಸ್ತಿ ಆಗಿದೆಯೇ ಹೊರತು ಅನುಕೂಲ ಕಡಿಮೆ. ಈ ವಿಚಾರದಲ್ಲಿ ನಾನು ಒಂದು ಸಲಹೆ ಕೊಡುತ್ತೇನೆ. ಗೊಬ್ಬರವನ್ನು ಹಂಚುವಾಗ ಸರ್ಕಾರವೇ ನೇರವಾಗಿ ಇದನ್ನು ಏತಕ್ಕೆ ತಮ್ಮ ವಶಕ್ಕೆ ತೆಗೆದುಕೊಳ್ಳಬಾರದು ಎಂದು ಕೇಳುತ್ತೇನೆ. ಮತ್ತು ಕೆಲವು ಕಂಪನಿಯವರು ಹೇಳಿದರು ಸರ್ಕಾರಕ್ಕೆ ನಿಗದಿಯಾಗಿರುವ ಕೋಟಾವನ್ನು ಕೊಟ್ಟಮೇಲೆ ನಾವು ಹೆಚ್ಚು ಪ್ರೊಡಕ್ಷನ್ ಮಾಡಿ, ನಿಗದಿಯಾಗಿರುವ ಕೋಟಕ್ಕಿಂತ ಹೆಚ್ಚು ಗೊಬ್ಬರ ಇದ್ದರೆ ಅದನ್ನು ಮಾರುವುದಕ್ಕೆ ಏತಕ್ಕೆ ಅವಕಾಶ ಕೊಡಬಾರದು ಎಂದು ಕೇಳಿದರು. ಈ ಬಗ್ಗೆ ನಾನು ಹೇಳುವುದಾದರೆ ಹೆಚ್ಚು ಪ್ರೊಡಕ್ಷನ್ ಆದ ಗೊಬ್ಬರವನ್ನು ಹೆಚ್ಚು ಬೆಲೆಗೆ ಮಾರದಂತೆ ಬೇಕಾದರೆ ಒಂದು ಕಟ್ಟುನಿಟ್ಟಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಿ. ಸರ್ಕಾರಕ್ಕೆ ಯಾವ ಭಂಗವನ್ನೂ ಉಂಟು ಮಾಡದಂತೆ ಒಂದು ನೀತಿಯನ್ನು ಅನುಸರಿಸಿಕೊಂಡು ಅವರು ಹೆಚ್ಚು ಗೊಬ್ಬರವನ್ನು ಉತ್ಪತ್ತಿ ಮಾಡಿದುದನ್ನು ಅವರೇ ಮಾರುವುದಕ್ಕೆ ಇಚ್ಛೆಪಟ್ಟರೆ ಅವರಿಗೇನೇ ಕೊಡುವುದು ಸೂಕ್ತ ಎಂದು ಹೇಳುತ್ತೇನೆ. ಅಷ್ಟೇ ಅಲ್ಲದೆ ಯಾರಾದರೂ ಒಬ್ಬಿಬ್ಬರು ಮಿಶ್ರಗೊಬ್ಬರವನ್ನು ಮಾರಾಟ ಮಾಡುವದಕ್ಕೆ ಮುಂದೆ ಬಂದರೆ ಯಾವ ಯಾವ ಬೆಳೆಗಳಿಗೆ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಟೈಮಿನಲ್ಲಿ ಹಾಕಬೇಕು ಎಂದು ಇಲಾಖಾ ಅಧಿಕಾರಿಗಳು ಶಿಫಾರಸು ಮಾಡಿದರೆ ಆ ರೀತಿ ಗೊಬ್ಬರ ಹಂಚುವ ಒಂದು ವ್ಯವಸ್ಥೆಯನ್ನಾದರೂ ಮಾಡಿ. ಆರೀತಿಯಾಗಿ ಗೊಬ್ಬರ ಹಂಚುವಾಗ ಆ ಜಿಲ್ಲೆಯ ಹೆಸರನ್ನು ಆ ಚೀಲದ ಮೇಲೆ ಪ್ರಿಂಟ್ ಮಾಡಿ ಆ ಜಿಲ್ಲೆಯೊಳಗೆ ಅದನ್ನು ಉಪಯೋಗಿಸುವಂತೆ ಒಂದು ಮೇಲ್ವಿಚಾರಣೆಯಲ್ಲಿ ಈ ಗೊಬ್ಬರವನ್ನು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡಿದರೆ ರೈತರಿಗೆ ಈಗ ಇರತಕ್ಕಂಥ ಕಿರುಕುಳ ಮತ್ತು ರೈತರು ಈಗ ಗೊಬ್ಬರ ಸಾಕಾಗುವುದಿಲ್ಲ ಎಂದು ಏನು ಹೇಳುತ್ತಾರೆ ಅದು ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ಈ ದಿಶೆಯಲ್ಲಿ ಪ್ರಚಾರ ನಡೆದರೆ ಈಗ ರೈತರಿಗೆ ಇರತಕ್ಕಂಥ ಕಳವಳ ಕಡಿಮೆಯಾಗುತ್ತದೆ ಎಂದು ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಹೇಳಬಯಸುತ್ತೇನೆ.

ಇನ್ನು ಈ ವಿಷಯದಲ್ಲಿ ಒಂದು ವಿಚಾರ ಹೇಳುವುದಾದರೆ ಈ ಒಂದು ಕಷ್ಟ ಪರಿಸ್ಥಿತಿಯಲ್ಲಿ ರೈತರು ಬೆಳೆಯತಕ್ಕಂಥ ಬೆಳೆಗೆ ಈವೊತ್ತಿನ ದಿವಸ ನಿಗದಿಯಾಗಿರತಕ್ಕಂಥ ಒಂದು ಬೆಲೆ ಇಲ್ಲ. ಇದರಿಂದ ಏನಾಗಿದೆ ಎಂದರೆ ಈವೊತ್ತಿನ ದಿವಸ ರೈತನು ನಾನು ಬೆಳೆದಂಥ ಬೆಳೆಗೆ ಏನು ಒಂದು ಆಸೆಯನ್ನು ಇಟ್ಟುಕೊಂಡಿರುತ್ತಾನೋ ಅದನ್ನು ವರ್ಷದ ಕೊನೆಯಲ್ಲಿ ಲೆಕ್ಕ ಹಾಕಿ ನೋಡಿದಾಗ ಅವನಿಗೆ ಬಹಳ ಕಡಿಮೆ ಆದಾಯ ಬಂದಿರುತ್ತದೆ. ಆದುದರಿಂದ ಸರ್ಕಾರದವರು ಅವನು ಬೆಳೆದಂಥ ಬೆಳೆಗೆ ಪ್ರಾಶಸ್ತ್ಯ ಕೊಟ್ಟು ಒಂದು ಬೆಲೆ ನಿಗದಿ ಮಾಡಬೇಕು ಎಂದು ಹೇಳುತ್ತೇನೆ. ಹಾಗೆ ಮಾಡುವ ಕಾಲದಲ್ಲಿ ರೈತನ ಜಮೀನಿಗೆ ಅಗತ್ಯವಾಗಿ ಬೇಕಾಗಿರತಕ್ಕಂಥ ವಸ್ತುಗಳ ಮೇಲೆ ಅಂದರೆ ಮಾರ ಮುಟ್ಟುಗಳ ಮತ್ತು ದನಕರುಗಳ ಒಂದು ಪಾಲನೆ ಇವುಗಳ ಒಂದು ಖರ್ಚನ್ನು ಲೆಕ್ಕಹಾಕಿ ನೋಡಿದರೆ ಈವೊತ್ತಿನ ದಿವಸ ಚಾಲ್ತಿಯಲ್ಲಿರತಕ್ಕಂಥ ಧಾರಣೆ ಬಹಳ ಕಡಿಮೆ ಎಂದು ಕಂಡುಬರುತ್ತದೆ. ಆದುದರಿಂದ ಅವನು ಬೆಳೆದಂಥ ಬೆಳೆಗೆ ಒಳ್ಳೆಯ ಧಾರಣೆ ಸಿಗುವಂತೆ ಸರ್ಕಾರ ಯೋಚನೆ ಮಾಡಬೇಕು ಎಂದು ನಾನಾದರೂ ಕೂಡ ಸಲಹೆ ಮಾಡುತ್ತೇನೆ.

ಇನ್ನು ರೈತರು ಬೆಳೆಯತಕ್ಕಂಥ ಬೆಳೆಗೆ ಸಂರಕ್ಷಣಾರ್ಥವಾಗಿ ಕೊಡತಕ್ಕಂಥ ಔಷಧಿಗಳ ಬಗ್ಗೆ ಹೇಳಬೇಕಾದರೆ ಈಗ ಏನಾಗಿದೆ ಎಂದರೆ ಒಂದೇ ಗುಣ ಇರತಕ್ಕಂಥ ಔಷಧಿಗಳು ನೂರಾರು ಮಾರ್ಕೆಟ್‌ನಲ್ಲಿ ಇವೆ. ಇದರಿಂದ ಸಾಮಾನ್ಯವಾಗಿ ಜ್ಞಾನ ಇರತಕ್ಕಂಥ ರೈತನಿಗೆ ಗೊಂದಲ ಉಂಟಾಗುತ್ತದೆ. ಅಷ್ಟೇ ಅಲ್ಲ, ವ್ಯಾಪಾರಸ್ಥರೂ ಕೂಡ ನಾನಾ ರೀತಿಯಲ್ಲಿ ಇದನ್ನು ದುರುಪಯೋಗ ಮಾಡಿಕೊಳ್ಳುವುದಕ್ಕೆ ಅವಕಾಶ ಇದೆ. ಇದಕ್ಕೆ ಸರ್ಕಾರದವರು ಏತಕ್ಕೆ ಅವಕಾಶ ಕೊಡುತ್ತಾರೋ ನನಗೆ ಗೊತ್ತಾಗುವುದಿಲ್ಲ. ಆದುದರಿಂದ ನಾನು ಹೇಳುವುದು ಏನೆಂದರೆ ಒಳ್ಳೆಯ ಫಲಪ್ರದವಾದ ಕೆಲವು ಔಷಧಿಗಳು ಏನು ಇವೆ ಅದಕ್ಕೆ ಸೂಕ್ತವಾದ ರೀತಿಯಲ್ಲಿ ಒಂದು ಧಾರಣೆಯನ್ನು ನಿರ್ದಿಷ್ಟಪಡಿಸುವುದು ಸೂಕ್ತ ಎಂದು ನಾನಾದರೂ ಕೂಡ ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

ಇನ್ನು ಮಾನ್ಯ ಕೆ.ಆರ್.ಎಸ್. ನಾಯುಡುರವರು ಮಾತನಾಡುವಾಗ ಅಮೃತಮಹಲ್‌ನ ದನಗಳ ವಿಚಾರದಲ್ಲಿ ಹೇಳಿದರು. ಈ ದನಗಳ ಮೇವುಗಳ ಬೇಡಿಕೆಗಳನ್ನು ಗಮನಿಸಿದಾಗ ನಿಜವಾಗಲೂ ರೈತರು ದನಗಳನ್ನು ಎಷ್ಟರಮಟ್ಟಿಗೆ ಪ್ರೀತಿಸುತ್ತಾರೆ ಎನ್ನತಕ್ಕಂಥ ಮಾತನ್ನು ಹೇಳಿದರು. ಹಾಗೆಯೇ ನಾನೂ ಕೂಡ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಈಗ ಇರತಕ್ಕಂಥ

ಅಮೃತ್‌ಮಹಲ್ ದನಗಳನ್ನು ಹೆಚ್ಚು ಮಾಡಬೇಕು ಅಷ್ಟೇ ಅಲ್ಲ ಅಮೃತ್‌ಮಹಲ್‌ನಲ್ಲಿರತಕ್ಕಂಥ ಕ್ಯಾಟಲ್ ಬ್ರೀಡ್ ದನಗಳಿಗೆ ಯಾವುದಾದರೂ ರಕ್ಷಣೆ ಕೊಟ್ಟು ಅದನ್ನು ಅಭಿವೃದ್ಧಿ ಮಾಡುವ ಕಡೆಗೆ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ. ಇವರ ಬಗ್ಗೆ ಅವರು ಇಟ್ಟಿರತಕ್ಕಂಥ ಆಸಕ್ತಿ ಏನು ಇದೆ ಅದನ್ನು ನೋಡಿದರೆ ಸರ್ಕಾರದವರು ಈ ಉತ್ಕೃಷ್ಟವಾದ ತಳಿಗಳನ್ನು ಕಳೆಯಬಾರದು ಎಂದು ಹೇಳುತ್ತೇನೆ. ಈ ಮಾತನ್ನು ನಾನು ಕಳೆದ ಅಧಿವೇಶನದಲ್ಲೂ ಕೂಡ ಹೇಳಿದ್ದೆ. ಇವನ್ನು ಕಾಪಾಡುವುದಕ್ಕೆ ಅಲ್ಲಿ ಕಾವಲುಗಾರರೂ ಕೂಡ ಯಾವುದೇ ಒಂದು ರೀತಿಯ ಅನುಕೂಲಗಳೂ ಇಲ್ಲದೆ ಪುಕ್ಕಟೆಯಾಗಿ ದುಡಿಯುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ಒಂದು ನಿರ್ದಿಷ್ಟವಾದ ಕ್ರಮವನ್ನು ಗೊತ್ತುಪಡಿಸಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನೊಂದು ಪ್ರಮುಖ್ಯವಾದ ವಿಷಯ ಏನೆಂದರೆ ದನಗಳ ವ್ಯಾಪಾರದ ಮೇಲಿರುವ ಸೇಲ್ಸ್‌ಟ್ಯಾಕ್ಸ್ ವಿಷಯ. ಆವರೆ ನಮ್ಮ ಮೈಸೂರು ರಾಜ್ಯದಲ್ಲಿ ದನಗಳ ವ್ಯಾಪಾರದಿಂದ ಬರತಕ್ಕಂಥ ಸೇಲ್ಸ್‌ಟ್ಯಾಕ್ಸ್ ಬಹಳ ಕಡಿಮೆ. ಹಾಗೆಂದಮೇಲೆ ಈ ಅಮೃತಮಹಲ್‌ನಲ್ಲಿ ಬೆಳೆಸತಕ್ಕಂಥ ಕರುಗಳು ಮಾರ್ಕೆಟ್ ಬೆಲೆಗಿಂತಲೂ 5 6 ಸಾವಿರ ರೂಪಾಯಿಗಿಂತ ಮೀರಿದಲ್ಲಿ ಆ ಒಂದು ಕಡೆ ಮಾತ್ರ ಸೇಲ್ಸ್‌ಟ್ಯಾಕ್ಸನ್ನು ವಸೂಲು ಮಾಡತಕ್ಕಂಥ ಪದ್ಧತಿ ಇರುತ್ತದೆ. ಈ ಬಗ್ಗೆ ಇರುವ ಸೇಲ್ಸ್‌ಟ್ಯಾಕ್ಸನ್ನು ವಜಾ ಮಾಡಬೇಕೆಂದು ಅನೇಕ ದಿವಸಗಳಿಂದಲೂ ಅರ್ಜಿಗಳನ್ನು ಕೊಟ್ಟು ಕೇಳುತ್ತಾ ಬಂದಿದ್ದೇವೆ. ಮತ್ತು ಈ ಬಗ್ಗೆ ಗಲಾಟೆಯೂ ನಡೆದಿವೆ. ಆದುದರಿಂದ ನಾನಾದರೂ ಕೂಡ ಈ ಬಗ್ಗೆ ಹೇಳುವುದು ಏನೆಂದರೆ ಸರ್ಕಾರಕ್ಕೆ ಕಡಮೆ ವರಮಾನ ಬರತಕ್ಕಂಥ ಸೇಲ್ಸ್ ಟ್ಯಾಕ್ಸನ್ನು ಮತ್ತು ರೈತರು ಬಹಳ ಆಸಕ್ತಿಯಿಂದ ಪೋಷಣೆ ಮಾಡಿ ಬೆಳೆಸುವಂಥ ದನಕರುಗಳ ಮೇಲೆ ಇರುವ ಸೇಲ್ಸ್‌ಟ್ಯಾಕ್ಸನ್ನು ಸರ್ಕಾರದವರು ಕೂಡಲೇ ವಜಾ ಮಾಡಬೇಕೆಂದು ಸರ್ಕಾರವನ್ನು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಇಲಾಖೆಯ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಪಶುಸಂಗೋಪನಾ ವಿಚಾರದಲ್ಲಿ ಬಹಳ ಆಸಕ್ತಿ ವಹಿಸಿ ಕೆಲಸ ಮಾಡುತ್ತಾ ಬಂದಿದ್ದಾರೆ. ಅವರಿಗೂ ಮತ್ತು ಇಲಾಖೆಯ ಅಧಿಕಾರಿಗಳಿಗೂ ನನ್ನ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ (ಬಿಳಿಗೆರೆ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವ್ಯವಸಾಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ವಿರೋಧಿಸಿ ನಾನು ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಈಗ ನಮ್ಮ ಮುಂದೆ, ಅನೇಕ ಸಮಸ್ಯೆಗಳು ಇವೆ, ಅದರಲ್ಲಿ ಆಹಾರದ ಸಮಸ್ಯೆ ಬೃಹದಾಕಾರವಾಗಿ ಬೆಳೆದು, ನಮ್ಮ ಪ್ರಜಾಪ್ರಭುತ್ವವನ್ನೇ ಅಲುಗಾಡಿಸುವ ಸ್ಥಿತಿ ಬಂದಿದೆ. ಇದಕ್ಕೆ ಕಾರಣ ಏನೆಂದರೆ, ನಮ್ಮ ರೈತರನ್ನು ವ್ಯವಸಾಯದ ಇಲಾಖೆಯವರು ಉದಾಸೀನ ಕಂಡಿರುವುದೇ ಕಾರಣ ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಿ ನೋಡಿದರೂ ಅಶಾಂತಿ, ಅತೃಪ್ತಿ, ನಿರುದ್ಯೋಗ, ಇದಕ್ಕೆಲ್ಲಾ ಕಾರಣ ಏನೆಂದರೆ, ವ್ಯವಸಾಯಕ್ಕೆ ಸರ್ಕಾರದವರು ಗಮನಕೊಡದೆ ಇರುವುದು. ಇವತ್ತಿನ ದಿವಸ ಆಹಾರದ ಸಮಸ್ಯೆ ಬೃಹದಾಕಾರವಾಗಿ ಬೆಳೆದಿದೆ. ಇದರಿಂದ ದೊಡ್ಡ ಚಳುವಳಿ, ಗಲಭೆಗಳು ನಡೆದಿವೆ. ಇದಕ್ಕೆ ಸರ್ಕಾರದವರು ಯಾವ ಮಾಸ್ಟರ್ ಪ್ಲಾನ್ ಅನ್ನು ಹಾಕಿಕೊಂಡಿದ್ದೀರಿ ? ಹೇಗೆ ಆಹಾರ ಸಮಸ್ಯೆಯನ್ನು ಪರಿಹಾರ ಮಾಡಬೇಕು, ಸರ್ಕಾರದವರು ಇದರ ಬಗ್ಗೆ ಉದಾಸೀನ ಮಾಡುತ್ತಿದ್ದಾರೆಯೇ, ಅಥವಾ ರೈತರು ಸೋಮಾರಿಗಳಾಗಿದ್ದಾರೆಯೇ, ಅಥವಾ ಜಮೀನು ಏನಾದರೂ ಬರಡಾಗಿದೆಯೇ, ರೈತರು ಬೆಳೆಯುವುದಕ್ಕೆ ಸಾಧ್ಯವಾಗಿಲ್ಲವೇ ಇದಕ್ಕೆ ಏನು ಕಾರಣ ಎನ್ನುವುದನ್ನು ಕಂಡುಹಿಡಿಯಬೇಕು. ವ್ಯವಸಾಯಕ್ಕೆ ಏನೇನು ಬೇಕು, ಅದನ್ನೆಲ್ಲಾ ಕೊಡುವುದಕ್ಕೆ ಸರ್ಕಾರ ವಿಫಲವಾಗಿದೆ. ಇವತ್ತು ಬೀಜ, ಇಲ್ಲ, ಗೊಬ್ಬರ ಇಲ್ಲ, ಸಿಮೆಂಟ್ ಇಲ್ಲ, ಕಬ್ಬಿಣ ಇಲ್ಲ. ಸೀಮೆ ಎಣ್ಣೆ ಇಲ್ಲ, ಎಲ್ಲದಕ್ಕೂ ಅಭಾವ ಬಂದಿದೆ. ಹೀಗಾದರೆ ಅಭಾವ ಇಲ್ಲದ ವಸ್ತು ಯಾವುದು ಎಂದು ನಾನು ಸರ್ಕಾರವನ್ನು ಕೇಳಬೇಕಾಗಿದೆ. ಬೀಜ ಕೊಡಿ ಎಂದು ಕೇಳಿದರೆ, ಕೆಟ್ಟ ಬೀಜ ಕೊಡುತ್ತಾರೆ, ಗೊಬ್ಬರ ಕೇಳಿದರೆ ಕೈ ಅಲ್ಲಾಡಿಸುತ್ತಾರೆ, ಹಣ ಕೇಳಿದರೆ, ಮೊದಲೇ ಇಲ್ಲ. ಹೀಗಾದರೆ ಇವರು ಕೊಡುವ ಸವಲತ್ತು ಏನು ? ಚುನಾವಣೆಯ ಸಮಯದಲ್ಲಿ ಬೇಕಾದಷ್ಟನ್ನು ಹೇಳಿಬಿಟ್ಟರು. ಬ್ಯಾಂಕ್ ರಾಷ್ಟ್ರೀಕರಣ ಮಾಡಿದ್ದೇವೆ, ರೈತರೆಲ್ಲಾ ಶ್ರೀಮಂತರಾಗುತ್ತಾರೆ ಎಂದು ಹೇಳಿದರು. ಯಾವ ಊರಿನಲ್ಲಿ ರೈತರಿಗೆ ನೀವು ಎಷ್ಟು ಹಣವನ್ನು ಕೊಟ್ಟಿದ್ದೀರಿ ? ಎಷ್ಟು ರೈತರ ಸಮಸ್ಯೆಗಳನ್ನು ನೀವು ಇವತ್ತು ಬಗೆಹರಿಸಿದ್ದೀರಿ ಎಂದು ನಾನು ಮಂತ್ರಿಗಳನ್ನು ಕೇಳಬೇಕಾಗಿದೆ. ಮಂತ್ರಿಗಳು ಅನೇಕ ಸಾರಿ ಟೂರ್ ಹೋಗುತ್ತಾರೆ. ಹೀಗೆ ಹೋದಾಗ ಇವರು ಎಷ್ಟು ಜನ ರೈತರ ಜೊತೆಗೆ ನೇರವಾದ ಸಂಪರ್ಕ ಇಟ್ಟುಕೊಂಡು ಅವರ ಕಷ್ಟ ಸುಖ ಏನಾದರೂ ಕೇಳಿದ್ದೀರಾ ? ನನ ಕ್ಷೇತ್ರಕ್ಕೆ ಮಂತ್ರಿಗಳು ಒಂದು ಸಾರಿಯೂ ಬಂದಿಲ್ಲ. ನಿಮಗೆ ರೈತರೊಂದಿಗೆ ಮಾತನಾಡುವುದಕ್ಕೆ ಭಯವೇ, ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ?

ಶ್ರೀ ಎನ್. ಚಿಕ್ಕೇಗೌಡ.—ನಿಮ್ಮ ತಾಲ್ಲೂಕಿನಲ್ಲಿ ಎಲ್ಲಾ ನೋಡಿಕೊಂಡು ಬಂದಿದ್ದೇನೆ. ರೈತರನ್ನು ನೋಡುವುದಕ್ಕೆ ಭಯವಿಲ್ಲ, ಆದರೆ ಅವರ ಬಗ್ಗೆ ಅನುಕಂಪ ಇದೆ.

ಶ್ರೀ ಎನ್. ಎಸ್. ಗುರುಸಿದ್ದಪ್ಪ.—ತಾವು ಹೊಸದಾಗಿ ಪೋರ್ಟ್‌ಫೋಲಿಯೋ ತೆಗೆದು ಕೊಂಡಿದ್ದೀರಿ, ಇನ್ನು ಸ್ವಲ್ಪ ದಿವಸ ಕಾದು ನೋಡಬೇಕಾಗಿದೆ.

ಇನ್ನು ಪದಾರ್ಥಗಳ ಬಗ್ಗೆ ಹೇಳಬೇಕಾಗಿದೆ, ಬೆಲೆ ಏರುತ್ತಿದೆ ಎಂದು ಹೇಳುತ್ತಿದ್ದಾರೆ. ಇದರಿಂದ ರೈತರಿಗೆ ಹುಮ್ಮಸ್ಸು ಬರುತ್ತದೆ. ಯಾವಾಗ ಪದಾರ್ಥಗಳ ಬೆಲೆ ಏರುತ್ತದೆಯೋ ಆಗ, ರೈತರಿಗೆ ಹುಮ್ಮಸ್ಸು ಬಂದು ಜಾಸ್ತಿ ಬೆಳೆಯನ್ನು ಬೆಳೆಯುವುದಕ್ಕೆ ಏರ್ಪಾಡು ಮಾಡುತ್ತಾರೆ, ಆಗ ಆಟೋಮ್ಯಾಟಿಕ್ಕಾಗಿ ಪದಾರ್ಥಗಳ ಬೆಲೆ ಕುಸಿಯುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಈಗ ಮುಖ್ಯವಾಗಿ ಸರ್ಕಾರದವರು ಗಮನಕೊಡಬೇಕಾಗಿರತಕ್ಕದ್ದು, ಈ ಬೀಜದ ವಿಷಯದಲ್ಲಿ. ನಮ್ಮ ಕಡೆ ಈ ಹೈಬ್ರಿಡ್ ಬೀಜಗಳನ್ನು ಬಿತ್ತಿದ್ದಾರೆ, ಮೊಳಕೆಯೇ ಬಂದಿಲ್ಲ. ಈ ಬಗ್ಗೆ ವ್ಯವಸಾಯದ ಇಲಾಖೆಯವರನ್ನು ರೈತರು ಕೇಳಿದರೆ, ಆಳವಾಗಿ ಬಿತ್ತಿದ್ದಾರೆ, ತೇವ ಇಲ್ಲ, ಎಂದು ರೈತರ ಮೇಲೆಯೇ ತಪ್ಪನ್ನು ಹಾಕಿಬಿಡುತ್ತಾರೆ ಆದ್ದರಿಂದ ಇಂಥ ಕಂಪ್ಲೇಂಟ್ ಬಂದಾಗ ಸರ್ಕಾರದವರು ಇದನ್ನು ವಿಮರ್ಶೆ ಮಾಡಿ ಯಾರು ಬೀಜವನ್ನು ತಯಾರು ಮಾಡುತ್ತಾರೆಯೋ ಅವರ ಮೇಲೆ ಉಗ್ರಕ್ರಮ ತೆಗೆದುಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ. ರಸ ಗೊಬ್ಬರವನ್ನು, ಗೊಬ್ಬರದ ಏಜೆಂಟರುಗಳು ಹೆಚ್ಚು ಮಣ್ಣು ಮರಳು ಮುಂತಾದ್ದನ್ನು ಮಿಕ್ಸ್ ಮಾಡಿ ಕೊಡುತ್ತಾರೆ. ಸರ್ಕಾರದವರು ಇದನ್ನು ತೀವ್ರವಾಗಿ ಪರಿಶೀಲಿಸಿ, ಅಂಥಾದ್ದು ಏನಾದರೂ ಕಂಪ್ಲೇಂಟ್ ಬಂದರೆ, ಅವರನ್ನು ಶಿಕ್ಷಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಸರ್ಕಾರದವರು ತಮ್ಮ ಒಂದು ರಿಪೋರ್ಟಿನಲ್ಲಿ ಈ ಗೊಬ್ಬರ ಖುಷ್ಕಿ ಜಮೀನಿಗೆ ಹಚ್ಚಾಗಿ ಬೇಕು ಎಂದು ಬರೆದಿದ್ದಾರೆ. ಇದನ್ನು ತಪ್ಪಿಸಿ, ವೆಟ್‌ಲ್ಯಾಂಡ್ಸ್‌ಗೆ ರಸ ಗೊಬ್ಬರವನ್ನು ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಇನ್ನು ಅಗ್ರಿಕಲ್ಚರಲ್ ಇಂಜಿನಿಯರಿಂಗ್ ವಿಷಯವಾಗಿ ಹೇಳಬೇಕಾದರೆ, ರೈತರು ಬುಲ್ಡೋಜರ್ಸ್, ಟ್ರ್ಯಾಕ್ಟರ್ಸ್, ಮತ್ತು ಬೋರ್‌ವೆಲ್ಸ್ ಮೆಷಿನ್ಸ್ ಮುಂತಾದುವುಗಳನ್ನು ಯಾವಾಗ ಕೇಳಿದರೂ ಸಹ ರಿಪೇರಿ ಮಾಡುತ್ತಿದ್ದೇವೆಂದು ಹೇಳುತ್ತಿರುತ್ತಾರೆ. ಈ ಮೆಷಿನ್‌ಗಳನ್ನು ರೈತರಿಗೆ ಬೇಕಿಲ್ಲದ ಸಮಯದಲ್ಲಿ ರಿಪೇರಿ ಮಾಡಿಸಿ, ವ ಳೆಗಾಲದಲ್ಲಿ ಉಪಯೋಗವಾಗುವ ಹಾಗೆ ಇವರು ಮಾಡುವುದಿಲ್ಲ. ಸುಮ್ಮನೆ ಕೆಟ್ಟಿದೆ ಎಂದು ಹೇಳುತ್ತಾರೆ ಸರ್ಕಾರದವರು ಇದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ರೈತನಿಗೆ ಇದು ಉಪಯೋಗಕ್ಕೆ ಬಾರದಿದ್ದರೆ, ಏನು ಪ್ರಯೋಜನ ? ಇಂಥ ಕಂಪ್ಲೇಂಟ್‌ಗಳ ಕಡೆ ಸರ್ಕಾರದವರು ಗಮನ ಕೊಡಬೇಕು.

ಇವುಗಳ ಎಲ್ಲಾ ಮಾಹಿತಿಯ ಬಗ್ಗೆ ರೈತರಿಗೆ ಒಂದು ಪ್ರದರ್ಶನವನ್ನು ಸರ್ಕಾರದವರು ಏರ್ಪಾಡು ಮಾಡಬೇಕು. ರೈತರು ಯಾವ ಬೆಳೆಯನ್ನು ಎಲ್ಲಿ ಬೆಳೆಯಬೇಕು, ಯಾವ ತರಹ ಔಷಧಿಯನ್ನು ಹಾಕಬೇಕು, ಎನ್ನುವುದನ್ನು ಅವರಿಗೆ ತಿಳಿಸಬೇಕು. ಅಲ್ಲದೆ ಮಾದರಿಯಾದ ಫಾರಂಗಳು ಇದ್ದರೆ, ಅವುಗಳಿಗೆ ವಿಸಿಟ್ಸ್ ಕೊಡುವ ಅವಕಾಶವನ್ನು ಮಾಡಿಕೊಡಬೇಕು ಈ ರೀತಿಯ ಅನುಕೂಲಗಳನ್ನು ಕಲ್ಪಿಸುವುದರಿಂದ, ರೈತರಿಗೆ ಹೆಚ್ಚು ಬೆಳೆಯಬೇಕೆನ್ನುವ ಅಭಿರುಚಿಂಟಾಗಿ, ಅವರಿಗೆ ಹುಮ್ಮಸ್ಸೂ ಬರುತ್ತದೆ. ಇಂಥ ಒಂದು ಏರ್ಪಾಟನ್ನು ಮಾಡಬೇಕು ಎಂದು ಸರ್ಕಾರದವರನ್ನು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಸೇವಕರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಗ್ರಾಮ ಸೇವಕರು ಐ.ಎ.ಎಸ್. ಆಫೀಸರ್ಸ್ ಆಗಿಬಿಟ್ಟಿದ್ದಾರೆ. ಟೈಟ್ ಪ್ಯಾಂಟ್ ಹಾಕಿಕೊಂಡು, ಆವಾರ ಡ್ರೆಸ್ ಹಾಕಿಕೊಂಡು, ಇವರು ಹಳ್ಳಿಗಳಲ್ಲಿರುವ ಫಾರಂಗಳನ್ನು ವಿಸಿಟ್ ಮಾಡುವುದಿಲ್ಲ. ಈ ಫರ್ಟಿಲೈಸರ್ ಅಭಾವ ಬಂದಮೇಲೆ ಇವರನ್ನು ಮಾತನಾಡಿಸುವುದೇ ಕಷ್ಟವಾಗಿದೆ. ನಿಜವಾದ ಗ್ರಾಮಸೇವಕನಿಗೆ ಪ್ರೋತ್ಸಾಹ ಕೊಟ್ಟು ಕೆಟ್ಟ ಗ್ರಾಮಸೇವಕರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಸಾಯಿಲ್ ಟೆಸ್ಟಿಂಗ್ ಲ್ಯಾಬೊರೇಟರಿಯ ಬಗ್ಗೆ, ನಮ್ಮ ರೈತರಿಗೆ ಸಾಯಿಲ್ ಟೆಸ್ಟ್ ಮಾಡಿಸುವ ಅನುಭವ ಇಲ್ಲ. ಇದರ ಬಗ್ಗೆ ಅಧಿಕಾರಿಗಳು ಹೋಗಿ ರೈತರಿಗೆ ಪ್ರೋತ್ಸಾಹ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಜಾನುವಾರುಗಳ ಒಳ್ಳೆಯ ತಳಿಗಳನ್ನು ಹಳ್ಳಿಗಳಲ್ಲಿ ಹಂಚಬೇಕು. ಹಿಂದೆ ಹಳ್ಳಿಗಳಲ್ಲಿ ಯಾವ ತರಹದ ಎತ್ತುಗಳು ಇದ್ದವೋ, ಅದೇ ತರಹದ ಎತ್ತುಗಳು ಇವತ್ತು ಇವೆ. ಕ್ಯಾಟಲ್ ಡೆವಲಪ್‌ಮೆಂಟ್ ಹಳ್ಳಿಗಳಲ್ಲಿ ಹೆಚ್ಚಾಗಿ ಆಗಬೇಕಾಗಿದೆ. ಟ್ರ್ಯಾಕ್ಟರ್ಸ್ ತೆಗದುಕೊಳ್ಳುವುದಕ್ಕೆ 30 40 ಸಾವಿರ ರೂಪಾಯಿಗಳ ಸಹಾಯವನ್ನು ಸರ್ಕಾರದವರು ಕೊಡುತ್ತಾ ಇರುವಾಗ, ಹಳ್ಳಿಗಳ ರೈತರು ಎತ್ತುಗಳನ್ನು ಮತ್ತು ಗಾಡಿಗಳನ್ನು ತೆಗೆದುಕೊಳ್ಳುವುದಕ್ಕೂ ಸಹಾಯ ಮಾಡಬೇಕು ಎಂದು ನಾನು ಹೇಳುತ್ತೇನೆ.

ಸಾಯಿಲ್ ಕನ್ಸರ್ವೇಷನ್ ಬಗ್ಗೆ ಮಾತನಾಡುವುದಾದರೇ, ನಿಜವಾಗಿಯೂ ನಾವು ರಸ್ತೆಗಳ ಪಕ್ಕದಲ್ಲಿಯೇ ಜಾಸ್ತಿ ಬಂಡ್ಸನ್ನು ನೋಡುತ್ತಿದ್ದೇವೆ. ಎಲ್ಲಿ ಮಣ್ಣು ಸವೆಯುತ್ತದೆಯೋ ಅಂಥಕಡೆ, ಬಂಡ್ಸ್ ಹಾಕಿದರೆ, ಒಳ್ಳೆಯದು ಎಂದು ನನ್ನ ಅಭಿಪ್ರಾಯ.

ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನಲ್ಲಿ ಒಂಬತ್ತು ಹಿಂದು ಅಧಿಕಾರಿಗಳು ಇದ್ದಾರೆ. ಅವರಿಂದ ಸಾಕಷ್ಟು ಉಪಯೋಗ ಆಗುತ್ತಾ ಇಲ್ಲ. ಕೇವಲ 20 ವರ್ಷಗಳ ಕೆಳಗೆ ಮುಂಗಾರು ಮಳೆ ಬಂದು ಜೋಳ, ಗೋಧಿ ಮುಂತಾದ ಬೆಳೆಗಳು ರೋಗ ಬಂದು ಹೇಗೆ ಹಾಳಾಗಿ ಹೋಗುತ್ತಿದ್ದವೋ, ಹಾಗೆಯೇ ಈಗಲೂ ಕೂಡ ಬೆಳೆಗಳು ಕೈಗೆ ಸಿಗುತ್ತಿಲ್ಲ. ಇದಕ್ಕೆ ಏನು ಕಾರಣ ಎಂದು ಅಧಿಕಾರಿಗಳನ್ನು ಕೇಳಿದರೆ, ಯಾವ ಪ್ರೋತ್ಸಾಹದ ಉತ್ತರವೂ ಅವರಿಂದ ಸಿಕ್ಕುತ್ತಿಲ್ಲ. ನಮ್ಮ ಕಡೆ ಖುಷ್ಕಿ ಜಮೀನು ವಿಪರೀತ ಇದೆ. ಅಲ್ಲದೆ ಜೋಳದ ಬೆಳೆ ನಮ್ಮ ಕಡೆ ಪ್ರಾಮುಖ್ಯವಾಗಿದೆ. ಪಂಪ್ ಸೆಟ್ಸ್ ಇರತಕ್ಕವರು, ಒಂದು ತಿಂಗಳು ಮುಂಗಾರು ಮಳೆಗಿಂತ ಹಿಂದೆ ಹೈಬ್ರಿಡ್ ಜೋಳವನ್ನು ಹಾಕುತ್ತಾರೆ. ಕಟಾವು ಮುಂಚಿತವಾಗಿ ಬಂದು ಬಾಕಿಯವರಿಗೆ ತೊಂದರೆಯಾಗಿ, ಸಾವಿರಾರು ಜನ, ಬೆಳೆಯನ್ನು ಕಳೆದುಕೊಂಡಿದ್ದಾರೆ. ಇದಕ್ಕೆ ಏನು ಕಾರಣ, ಪರಿಹಾರ ಏನು ಕಂಡುಹಿಡಿದಿದ್ದಾರೆ ಎಂದು ಹೇಳಿದರೆ, ಅಧಿಕಾರಿಗಳು ವಿಫಲರಾಗಿದ್ದಾರೆ. ಈ ಜೋಳದ ಬೆಳೆಗೆ ಮರೋಡೆ ಎನ್ನುವ ರೋಗ ಬರುತ್ತದೆ. ಇದನ್ನು ತಪ್ಪಿಸುವುದಕ್ಕೆ, ಡಿಪಾರ್ಟ್‌ಮೆಂಟಿನವರು ಕ್ರಮ ತೆಗೆದುಕೊಂಡು ಇದು ಯಾವಾಗ ಬರುತ್ತದೆ, ಹೇಗೆ ಬರುತ್ತದೆ ಎನ್ನುವುದರ ಬಗ್ಗೆ ನಿಗಾ ಇಡಬೇಕು ; ಎಂದು ಕೇಳಿಕೊಳ್ಳುತ್ತೇನೆ. ಇಷ್ಟು ಮಾತನಾಡುವುದಕ್ಕೆ ಉಪಾಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

5-00 P.M.

†ಶ್ರೀ ಹಂಜಿ ಶಿವಣ್ಣ (ತರೀಕೆರೆ).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ನಮ್ಮ ವ್ಯವಸಾಯ ಇಲಾಖೆಗೆ ಸಂಬಂಧಪಟ್ಟ ಮಂತ್ರಿಯವರು ಮಂಡಿಸಿರತಕ್ಕ ಡಿಮ್ಯಾಂಡನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿ ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ರೈತರಿಗೆ ಅಧಿಕಾರಿಗಳಿಂದ ತೊಂದರೆಯಾಗುತ್ತಾ ಇದೆ. ಅದನ್ನು ಮೊದಲು ತಪ್ಪಿಸಬೇಕು ಎಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡುತ್ತೇನೆ. ಯಾವ ದಾಕ್ಷಿಣ್ಯವನ್ನೂ ಇಟ್ಟುಕೊಳ್ಳದೆ ಅಧಿಕಾರಿಗಳಿಂದ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕು. ಇನ್ನೂ ಕೆಲವು ವಿಷಯಗಳನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಗ್ರಾಮ ಸೇವಕರು, ವಿಲೇಜ್ ಅಕೌಂಟೆಂಟ್ಸ್ ಎಂದು ಹೊಸದಾಗಿ ನೇಮಕ ಮಾಡಿದ್ದೀರಿ. ಅವರಿಗೆ ಕೆಲವು ಅಧಿಕಾರಗಳನ್ನು ಕೊಟ್ಟಿದ್ದೀರಿ. ಕೃತಕ ಗೊಬ್ಬರ ಹಂಚುವ ಕೆಲಸವನ್ನು ಅವರಿಗೆ ಕೊಟ್ಟಿರುವುದು ನೋಟನ್ನು ಪ್ರಿಂಟ್ ಮಾಡುವ ಮೆಷಿನ್‌ನನ್ನು ಅವರ ಕೈಗೆ ಕೊಟ್ಟಹಾಗೆ ಆಗಿದೆ ಎಂದು ಹೇಳುತ್ತೇನೆ. ಸರ್ಕಾರದವರು ಬೇಕಾದಷ್ಟು ಗೊಬ್ಬರ ತಂದು ಕೊಡುತ್ತಾ ಇದ್ದಾರೆ. ಆದರೆ ಈ ಗೊಬ್ಬರ ರೈತರಿಗೆ ಮುಟ್ಟಿಲ್ಲ. ಕನಿಷ್ಟಪಕ್ಷ ನಮ್ಮ ತಾಲ್ಲೂಕಿನಲ್ಲಿ 10-12 ಸಾವಿರ ಏಕರೆ ಬೇಸಿಗೆ ಬೆಳೆ ಬೆಳೆಯತಕ್ಕ ನೀರಾವರಿ ಪ್ರದೇಶ ಇದೆ. ಅಲ್ಲಿಗೆ ಸರ್ಕಾರದವರು 680 ಟನ್ ಗೊಬ್ಬರವನ್ನು ಕೊಟ್ಟಿದ್ದಾರೆ. ರೈತರಿಗೆ ಅದು ಮುಟ್ಟಿಲ್ಲ. ಬಹುತೇಕ ನನ್ನ ಅಂದಾಜು ಮುಕ್ಕಾಲು ಪಾಲು ಬ್ಲಾಕ್ ಮಾರ್ಕೆಟ್ಟಿಗೆ ಹೋಗಿದೆ. ಇದರಿಂದ ಅವರು ಹೆಚ್ಚಿನ ಹಣ ಸಂಪಾದನೆ ಮಾಡಿಕೊಂಡಿದ್ದಾರೆ. ಈ ವಿಚಾರದಲ್ಲಿ ನಮ್ಮ ತಾಲ್ಲೂಕಿನ ಬಗ್ಗೆ ವೆರಿಫೈ ಮಾಡಿಸಲೇ ಬೇಕೆಂದು ಕಡ್ಡಾಯವಾಗಿ ಹೇಳುತ್ತೇನೆ. ಜನರಿಗೆ ತೊಂದರೆ ಮಾಡುವ ಅಧಿಕಾರಿಯ ಮೇಲೆ ಕನಿಕರ ತೋರಿಸದೆ ತಕ್ಷಣ ಅವರ ಮೇಲೆ ಕ್ರಮ ತಗೆದುಕೊಂಡು ಇನ್ನುಮೇಲೆ ರೈತರಿಗೆ ದೇಶದಲ್ಲಿ ಆಗುತ್ತಿರುವಂತಹ ತೊಂದರೆಯನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಹಿಂದೆ ನಮ್ಮ ಹಳ್ಳಿಯಲ್ಲಿ ಗೊಬ್ಬರ ದುರುಪಯೋಗ ಆದ ಬಗ್ಗೆ ಹೇಳಿದ್ದೆ. ಈಗ ಕೂಡ 2-3 ಲೋಡು ಗೊಬ್ಬರ ದುರುಪಯೋಗ ಆಗಿದೆ. ಆಫೀಸರ್‌ಗಳಲ್ಲಿ ಅವರವರಲ್ಲೇ ಲಿಂಕ್ ಇದೆ. ಒಬ್ಬರನ್ನೊಬ್ಬರು ಬಿಟ್ಟುಕೊಡುವುದಿಲ್ಲ. ಇದನ್ನು ತಾವು ಗಮನಕ್ಕೆ ತೆಗೆದುಕೊಳ್ಳಬೇಕು ಮತ್ತು ಎನ್‌ಕ್ವೈರಿ ಮಾಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕು,

(ಶ್ರೀ ಹಂಜಿ ಶಿವಣ್ಣ)

ಇನ್ನು ಪಶುಪಾಲನೆ ವಿಷಯದಲ್ಲಿ ಒಂದು ಮಾತು ಹೇಳುತ್ತೇನೆ. ಪಶುಪಾಲನೆ ಕುಗ್ಗುತ್ತಿದೆ. ಮೇವು ಇದ್ದಂತಹ ಕಾಡಿನಲ್ಲಿ ವ್ಯವಸಾಯ ಮಾಡುವುದಕ್ಕೆ ಶುರು ಮಾಡಿದ್ದಾರೆ. ಅಲ್ಪಸ್ವಲ್ಪ ಗೋಮಾಳವನ್ನು ಸರ್ಕಾರ ಏನು ನಿಗದಿ ಮಾಡಿದ್ದಾರೆ., ಅದನ್ನೂ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳು ಅರ್ಧ ಭಾಗ ಹಂಚಿಬಿಟ್ಟು ದುಡ್ಡು ವಸೂಲು ಮಾಡಿದ್ದಾರೆ. ಅದರ ಬಗ್ಗೆ ಗಮನಕ್ಕೆ ತೆಗೆದುಕೊಂಡು ಗೋಮಾಳವನ್ನು ಉಳಿಸಲಿಕ್ಕೆ ತಮ್ಮ ಕಾಲದಲ್ಲಿ ಪ್ರಯತ್ನ ಪಡಬೇಕಾಗಿ ಕೇಳಿಕೊಳ್ಳುತ್ತೇನೆ. ಅಮೃತಮಹಲ್ ಕಾವಲಿನ ವಿಷಯದಲ್ಲಿ ಹೇಳಬೇಕಾದರೆ, ಅಮೃತಮಹಲ್ ಕಾವಲನ್ನು ಕಾಯುವುದಕ್ಕೆ ಜನರನ್ನು ಇಟ್ಟಿದ್ದೀರಿ. ಈ ಕಾವಲುಗಾರರ ಬಗ್ಗೆ ದೂರು ಬಂದರೆ ಅದನ್ನು ತಕ್ಷಣ ಸರಿಪಡಿಸಬೇಕು. ಸರ್ಕಾರಿ ದನಗಳಿಗಿಂತ ಕಾವಲು ಕಾಯುವ ಕಾವಲುಗಾರರ ದನಗಳೇ ಉನ್ನತ ಮಟ್ಟದಲ್ಲಿವೆ. ನಮ್ಮ ಊರು ಹೊಸಳ್ಳಿಯಲ್ಲಿ ಕಾವಲುಗಾರರು ಮಾಡುತ್ತಾ ಇರತಕ್ಕ ಸಂಪಾದನೆ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಅದನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಆಕ್ಷನ್ ತೆಗೆದುಕೊಂಡು ದುರ್ನಡತೆಗೆ ಅವಕಾಶ ಇಲ್ಲದಂತೆ ವ್ಯವಸ್ಥೆ ಮಾಡಬೇಕು ಎಂದು ಹೇಳಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಚಿಕ್ಕೇಗೌಡ (ವ್ಯವಸಾಯ ಮತ್ತು ಪಶು ಸಂಗೋಪನ ಶಾಖೆಗಳ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ವ್ಯವಸಾಯ ಮತ್ತು ಪಶುಪಾಲನೆ ಹಾಗೂ ಹೈನುಗಾರಿಕೆ ಬಗ್ಗೆ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಹಾಗೂ ರಾಜ್ಯದಲ್ಲಿರತಕ್ಕ ಕೆಲವು ನ್ಯೂನತೆಗಳ ಬಗ್ಗೆ ಅದರಲ್ಲೂ ಮುಖ್ಯವಾಗಿ ಗ್ರಾಮ ಸೇವಕರ ಬಗ್ಗೆ ಹೇಳಿದ್ದಾರೆ. ಅವರ ಬಗ್ಗೆ ಸ್ಪಷ್ಟವಾದಂಥ ಹಾಗೂ ನಿರ್ದಿಷ್ಟವಾದಂತಹ ದೂರುಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅವರ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳತಕ್ಕದ್ದರಲ್ಲಿ ಸರ್ಕಾರ ಹಿಂದು ಮುಂದೆ ನೋಡುವುದಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸದನ ಹಾಗೂ ಮೇಲ್ಮನೆಯ ಸದಸ್ಯರು ಕೊಟ್ಟಂತಹ ದೂರ ಗಳ ಬಗ್ಗೆ ಹಾಗೂ ಸಾರ್ವಜನಿಕರಿಂದ ಬಂದಂತಹ ದೂರುಗಳ ಬಗ್ಗೆ ವಿಚಾರಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಂಡಿದ್ದೇವೆ. ಅನೇಕ ಅಧಿಕಾರಿಗಳ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡು ಅವರನ್ನು ಸಸ್ಪೆಂಡ್ ಮಾಡಿ ವಿಚಾರಣೆ ಮುಂದುವರಿಸುತ್ತಿದ್ದೇವೆ. ಮುಖ್ಯವಾಗಿ ಮಾನ್ಯ ಸದಸ್ಯರು ವ್ಯವಸಾಯ ಇಲಾಖೆಯ ಬಗ್ಗೆ ಹೇಳಿದಂತಹ ಅನೇಕ ವಿಚಾರಗಳನ್ನು ನಾನು ಕುತೂಹಲದಿಂದ ಕೇಳಿದ್ದೇನೆ. ಸರ್ಕಾರ ಖಂಡಿತವಾಗಿ ಇರತಕ್ಕ ಅವಕಾಶದಲ್ಲಿ ಹಣದ ವಿಚಾರವನ್ನು ಗಮನದಲ್ಲಿಟ್ಟುಕೊಂಡು ರೈತರು ಆಹಾರೋತ್ಪಾದನೆ ಮಾಡುವ ಬಗ್ಗೆ ಏನೇನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆಂದು ಸರ್ಕಾರದ ಪರವಾಗಿ ಭರವಸೆ ಕೊಡಲು ಇಚ್ಛೆಪಡುತ್ತೇನೆ. ಮುಖ್ಯವಾಗಿ ಕೃಷಿಕಾರ್ಮಿಕರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತಹ ವಿಚಾರದ ಬಗ್ಗೆ ಅನುಕಂಪವನ್ನು ವ್ಯಕ್ತಪಡಿಸುತ್ತಾ ಈ ಕೃಷಿ ಕಾರ್ಮಿಕರಿಗೆ ಏನು ಸೌಲಭ್ಯಗಳನ್ನು ಒದಗಿಸಬೇಕು. ಕನಿಷ್ಟ ಏನು ಒಂದು ದಿನಗೂಲಿಯನ್ನು ಕೊಡಬೇಕು, ಅದರ ಬಗ್ಗೆ ಮಿನಿಮಂ ವೇಜಸ್ ಆಕ್ಟ ಜಾರಿಗೆ ತರಬೇಕಾಗಿದೆ. ಸರ್ಕಾರ ಈ ದಿಸೆಯಲ್ಲಿ ಕಾರ್ಯಕ್ರಮ ತೆಗೆದುಕೊಂಡಿದೆ. ಬಹುಬೇಗ ಇದರ ಬಗ್ಗೆ ಸರ್ಕಾರದ ಕಾನೂನನ್ನು ತಂದು ಜಾರಿಗೆ ತರಬೇಕೆಂದಿದ್ದೇವೆ. ಇಲಾಖೆಯಲ್ಲಿ ಏನು ಸಾಧನೆ ಆಗಿದೆ ಅದನ್ನು ಹೇಳುವುದಕ್ಕೆ ಮುಂಚೆ ಈ ಒಂದು ಗೊಬ್ಬರದ ವಿಚಾರದಲ್ಲಿ ಒಂದು ವಿಷಯ ಸ್ಪಷ್ಟಪಡಿಸಬೇಕಾಗಿದೆ. ಕೃತಕ ಗೊಬ್ಬರದ ಕೊರತೆ ಏನಿದೆ ಅದರಿಂದ ನಮ್ಮಲ್ಲಿ ಬಹಳ ಅನಾಹುತವಾಗಿದೆ ಎನ್ನತಕ್ಕದ್ದು ಮತ್ತು ಉತ್ಪಾದನೆ ಕಮ್ಮಿಯಾಗಿದೆ ಎನ್ನುವ ವಿಚಾರವನ್ನು ನಾನಾದರೂ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ. ಸ್ವಲ್ಪ ಮಟ್ಟಿಗೆ ಆಹಾರೋತ್ಪಾದನೆ ಕುಂಠಿತವಾಗಿರಬಹುದು. ಕಳೆದ 2-3 ವರ್ಷಗಳಲ್ಲಿನ ಆಹಾರೋತ್ಪಾದನೆಯನ್ನು ನೋಡಿದರೆ ಕಳೆದ ವರ್ಷದಲ್ಲಿ 60 ಲಕ್ಷ ಟನ್ ಆಹಾರ ಉತ್ಪಾದನೆ ಮಾಡಿದ್ದೇವೆ. ಮುಂದಿನ ವರ್ಷ 74 75ರಲ್ಲಿ 65 ರಿಂದ 70 ಲಕ್ಷ ಟನ್ ಉತ್ಪಾದನೆ ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ. ಅದನ್ನು ಮುಟ್ಟತಕ್ಕ ಭರವಸೆ ಉಳ್ಳವನಾಗಿದ್ದೇನೆ. ಮೈಸೂರು ಮತ್ತು ಧಾರವಾಡ ಜಿಲ್ಲೆಯ ಭಾಗದಲ್ಲಿ ಮಳೆ ಪ್ರಾರಂಭವಾಗಿದೆ. ಅಲ್ಲಿ ಸಂಕೀರ್ಣ ಜಾತಿಯ ಜೋಳದ ಬಿತ್ತನೆ ನಡೆಯುತ್ತಿದೆ. ವ್ಯವಸಾಯ ಮತ್ತು ಪಶುಪಾಲನೆಗೆ ಸಂಬಂಧಪಟ್ಟ ಡಿಮ್ಯಾಂಡ್ ಬಗ್ಗೆ ಚರ್ಚೆ ಮಾಡುವಾಗ ಬೆಳಿಗ್ಗೆಯಿಂದ ಮೋಡ ಕವಿದಂತಹ ವಾತಾವರಣ ಇರುವುದು ಒಂದು ಶುಭ ಸೂಚನೆಯಾಗಿದೆ.

ಆದ್ದರಿಂದ ಈ ವರ್ಷ ನಮ್ಮ ರಾಜ್ಯದಲ್ಲಿ ಒಳ್ಳೆಯ ಆಶಾದಾಯಕವಾದ ಸುಗ್ಗಿ ಕಾಲ ಬಂದು ಆಹಾರಧಾನ್ಯಗಳ ಉತ್ಪಾದನೆ ಹೆಚ್ಚಾಗಬಹುದೆಂಬ ಸೂಚನೆ ಕಂಡುಬಂದಿದೆ. ಮುಖ್ಯವಾಗಿ ಇಂದು

ನಮ್ಮ ರಾಜ್ಯದಲ್ಲಿರುವ ಕೃತಕ ಗೊಬ್ಬರದ ಕೊರತೆಯ ಬಗ್ಗೆ ನಾನು ಈ ಸದನದಲ್ಲಿ ಅನೇಕ ಸಲ ಹೇಳಿದ್ದೇನೆ. ಈ ಗೊಬ್ಬರದ ಕೊರತೆ ನಮ್ಮ ರಾಜ್ಯದಲ್ಲಿ ಮಾತ್ರವಲ್ಲ, ಎಲ್ಲ ರಾಜ್ಯಗಳಲ್ಲಿಯೂ ಇದೆ. ಜೊತೆಗೆ ಇವೊತ್ತಿನದಿವಸ ಎಣ್ಣೆ ಮತ್ತು ನಾಫ್ತಾದ ಬೆಲೆ ವಿಪರೀತ ಹೆಚ್ಚಿರುವುದರಿಂದ ಈ ಕೃತಕ ಗೊಬ್ಬರದ ಕೊರತೆ ಇಡೀ ಪ್ರಪಂಚದಲ್ಲಿಯೇ ಕಂಡುಬಂದಿದೆ. ಈ ವಿಚಾರ ಮಾನ್ಯ ಸದಸ್ಯರಿಗೆ ಮತ್ತು ಇಡೀ ದೇಶಕ್ಕೆ ಗೊತ್ತಿದೆ. ಈಗ ನಾವು ಕೃತಕ ಗೊಬ್ಬರವನ್ನು ರೈತರಿಗೆ ಸರಿಯಾಗಿ ಹಂಚುವ ವ್ಯವಸ್ಥೆ ಮಾಡಿದ್ದೇವೆ. ಆದರೂ ಸಹ ಕೆಲವು ಕಡೆ ಅವ್ಯವಹಾರಗಳು ನಡೆಯುಬಹುದು; ಮತ್ತು ಗೊಬ್ಬರದ ಪರ್ಮಿಟ್‌ಗಳನ್ನು ಕೆಲವರು ದುರುಪಯೋಗ ಮಾಡಿಕೊಂಡ ಬಗ್ಗೆ ಕೆಲವು ಕಡೆಗಳಿಂದ ದೂರುಗಳು ಸಹ ಬಂದಿವೆ. ಅವುಗಳ ಬಗ್ಗೆ ತೀವ್ರವಾದಂಥ ಕ್ರಮ ಕೈಕೊಳ್ಳುತ್ತೇವೆ. ಈ ವಿಚಾರದಲ್ಲಿ ನಿರ್ದಿಷ್ಟವಾದ ದೂರುಗಳು ಏನಾದರು ಇದ್ದರೆ, ಅವುಗಳನ್ನು ಮಾನ್ಯ ಸದಸ್ಯರಾಗಲೀ ಅಥವಾ ಸಾರ್ವಜನಿಕರಾಗಲೀ ಸರ್ಕಾರಕ್ಕೆ ತಿಳಿಸಿದರೆ ಸಂಬಂಧಪಟ್ಟವರ ಮೇಲೆ ಸೂಕ್ತ ಕಾರ್ಯಕ್ರಮ ಕೈಕೊಳ್ಳುತ್ತೇವೆ. ಮುಖ್ಯವಾಗಿ ಇಂತಹಂಥ ಗೊಬ್ಬರವನ್ನು ಸಕಾಲದಲ್ಲಿ ರೈತರಿಗೆ ಹಂಚುವ ಬಗ್ಗೆ ಸರ್ಕಾರ ಸೂಕ್ತ ವ್ಯವಸ್ಥೆ ಮಾಡುತ್ತದೆ ಎಂಬುದನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಕಳೆದವರ್ಷ ಅಂದರೆ 1973-74ರಲ್ಲಿ ಒಂದು ಲಕ್ಷದ 7 ಸಾವಿರ ಟನ್ ನೈಟ್ರೋಜನ್ 48 ಸಾವಿರದ 298 ಟನ್ ರಂಜಕ, 39,500 ಟನ್ ಪೊಟ್ಯಾಸ್‌ನ್ನು ಮುಂಗಾರು ಮತ್ತು ಹಿಂಗಾರು ಬೆಳೆಗಳಿಗೆ ಒದಗಿಸಲಾಯಿತು. ಈ ವರ್ಷದಲ್ಲಿ ನಾವು ಸುಮಾರು ಒಂದು ಲಕ್ಷದ 80 ಸಾವಿರ ಟನ್ ನೈಟ್ರೋಜನ್ ಕೊಡಬೇಕೆಂದು ಕೇಂದ್ರ ಸರ್ಕಾರದವರನ್ನು ಕೇಳಿದ್ದೇವೆ. ಮತ್ತು 64242 ಟನ್ ಸಾರಜನಕ. 28 ಸಾವಿರದ 0 5 ಟನ್ ರಂಜಕ, 22 ಸಾವಿರ ಟನ್ ಪೊಟ್ಯಾಸ್ ಕೊಡಬೇಕೆಂದು ತಿಳಿಸಿದ್ದೇವೆ. ಅದರ ಪ್ರಕಾರ ನಮ್ಮ ರಾಜ್ಯಕ್ಕೆ ಇಲ್ಲಿಯುವರೆಗೆ 12 ಸಾವಿರ ಟನ್ ಸಾರಜನಕ, 6 ಸಾವಿರ ಟನ್ ರಂಜಕ ಮತ್ತು 4 ಸಾವಿರ ಟನ್ ಪೊಟ್ಯಾಸ್‌ನ್ನು ಕೊಟ್ಟಿದ್ದಾರೆ. ಇದನ್ನು ಕಳೆದ ವರ್ಷಕ್ಕೆ ಹೋಲಿಸಿ ನೋಡಿದರೆ ಸ್ವಲ್ಪಮಟ್ಟಿಗೆ ಸುಧಾರಿಸಿದೆ ಎಂದು ಹೇಳಬಹುದು. ಕಳೆದ ವರ್ಷ ಕೇಂದ್ರ ಸರ್ಕಾರದವರು ನಮ್ಮ ರಾಜ್ಯಕ್ಕೆ ಅಲಾಟ್ ಮಾಡಿದ ಗೊಬ್ಬರದ ಪೈಕಿ ಪೂಲ್ ಫರ್ಟಿಲೈಜರ್ 30 ಪರ್ಸೆಂಟ್ ಮತ್ತು ನಾನ್-ಪೂಲ್ ಫರ್ಟಿಲೈಜರ್ 70 ಪರ್ಸೆಂಟ್ ಮಾತ್ರ ಮುಟ್ಟಿತು. ಆದರೆ ಈ ವರ್ಷ ಕಳೆದವರ್ಷಕ್ಕಿಂತ ಹೆಚ್ಚಿಗೆ ಬರುವುದಕ್ಕೆ ಪ್ರಾರಂಭವಾಗಿದೆ. ಇದನ್ನು ಸಕಾಲದಲ್ಲಿ ರೈತರಿಗೆ ಒದಗಿಸತಕ್ಕದ್ದು ಮುಖ್ಯವಾದ ವಿಚಾರವಾಗಿದೆ. ಮುಂದಿನ ಮೇ ಒಂದನೇ ತಾರೀಖಿನಿಂದ ಕಾರ್ಡ್‌ಗಳ ಮೂಲಕ ರೈತರಿಗೆ ಹಂಚಬೇಕೆಂದು ಈ ಮೊದಲು ತೀರ್ಮಾನವಾಗಿತ್ತು. ಈ ಬಗ್ಗೆ ಸರ್ಕಾರದ ನಿಲುವನ್ನು ನಾನು ಸಾರ್ವಜನಿಕವಾಗಿ ತಿಳಿಸಿದ್ದೆ. ಆದರೆ ಈ ಬಗ್ಗೆ ಅಮೂಲಾಗ್ರವಾಗಿ ಪ್ರಸ್ತಾಪ ಮಾಡಿದಾಗ, ಅದನ್ನು ಮುಂದಿನ ಮೇ ಒಂದನೇ ತಾರೀಖಿನಿಂದ ಜಾರಿಗೆ ತರುವುದು ಕಷ್ಟವಾಗುತ್ತದೆ. ಇದಕ್ಕೆ ಕಾರಣವೇನೆಂದರೆ ಒಳ್ಳೆಯ ಕಾಗದದ ಕೊರತೆ ಇರುವುದು; ಜೊತೆಗೆ ಇದನ್ನು ಜಾರಿಗೆ ತರುವಾಗ ಸೆಕ್ಯೂರಿಟಿಯನ್ನು ಗಮನದಲ್ಲಿಡಬೇಕಾಗುತ್ತದೆ. ಇಲ್ಲದಿದ್ದರೆ ಬೋಗಸ್ ಕಾರ್ಡ್‌ಗಳು ಹುಟ್ಟಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದಕಾರಣ ಸೆಕ್ಯೂರಿಟಿ ಮೆಥೆಡ್‌ನ್ನು ಇನ್‌ಟ್ರೊಡ್ಯೂಸ್ ಮಾಡಿ ಕಾರ್ಡ್‌ಗಳನ್ನು ಮುದ್ರಿಸಬೇಕಾಗುತ್ತದೆ. ಈ ರೀತಿ ಒಟ್ಟು 28 ಲಕ್ಷ ಕಾರ್ಡ್‌ಗಳನ್ನು ಅಚ್ಚು ಹಾಕಿಸಬೇಕಾಗಿದೆ. ಈ ರೀತಿ ಅಚ್ಚು ಹಾಕಿಸಿ ರೈತರಿಗೆ ವಿತರಣೆ ಮಾಡುವಾಗ ಅದರಲ್ಲಿ ಸಂಬಂಧಪಟ್ಟ ರೈತರಿಗೆ ಜಮೀನು ಎಷ್ಟಿದೆ, ಅವರಿಗೆ ಗೊಬ್ಬರ ಎಷ್ಟು ಬೇಕಾಗುತ್ತದೆ, ಬೀಜ ಎಷ್ಟು ಬೇಕಾಗುತ್ತವೆ. ಕ್ರಿಮಿನಾಶಕ ಔಷಧಿ ಎಷ್ಟು ಬೇಕಾಗುತ್ತದೆ ಎಂಬ ಬಗ್ಗೆ ಮಾಹಿತಿ ಪಡೆದುಕೊಂಡು, ನಂತರ ಅದರಲ್ಲಿ ನಮೂದು ಮಾಡಿ ಹಂಚಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ. ಈ ಕಾರಣದಿಂದ ಜೂನ್ 15 ರಿಂದ ಈ ಕಾರ್ಡ್ ಸಿಸ್ಟಮ್‌ನ್ನು ಜಾರಿಗೆ ತರಬೇಕೆಂದಿದ್ದೇವೆ. ಈ ರೀತಿ ತಡವಾಗಿದ್ದಕ್ಕೆ ವಿಷಾದ ಪಡುತ್ತೇನೆ. ಮತ್ತು ಈ ಕಾರ್ಡ್‌ಗಳ ವಿತರಣೆಯಲ್ಲಿ ಸಾರ್ವಜನಿಕರ ಮತ್ತು ಈ ಸದನದ ಮಾನ್ಯ ಸದಸ್ಯರ ಸಹಕಾರವನ್ನು ಕೋರುತ್ತೇನೆ. ಈಗಾಗಲೇ ಕಾರ್ಡ್ ಸಿಸ್ಟಮ್ ಇರುವ ಶಿವಮೊಗ್ಗ ಜಿಲ್ಲೆಯಲ್ಲಿ ಅದೇ ಪದ್ಧತಿಯನ್ನು ಮುಂದುವರೆಸುತ್ತೇವೆ; ಮತ್ತು ಇನ್ನಿತರ ಕಡೆಗಳಲ್ಲಿ ಈಗ ಪರ್ಮಿಟ್ ಸಿಸ್ಟಮ್ ಏನಿದೆ, ಅದನ್ನು ಸ್ವಲ್ಪ ಕಾಲದವರೆಗೆ ಮುಂದುವರೆಸಬೇಕಾದ ಪರಿಸ್ಥಿತಿ ಬಂದಿದೆ.

ಶ್ರೀ ಎಸ್. ಬಂಗಾರಪ್ಪ.—ಜೂನ್ 15ರೊಳಗೆ ನಮ್ಮ ಮಲೆನಾಡು ಭಾಗದಲ್ಲ ಬಿತ್ತನೆ ಕಾರ್ಯ ಮುಗಿದು ಹೋಗಿರುತ್ತದೆ ; ಆದಕಾರಣ ಆ ಸಮಯದಲ್ಲಿ ಕಾರ್ಡ್ ಕೊಡುವುದರಿಂದ ರೈತರಿಗೆ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಎನ್. ಚಿಕ್ಕೇಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ ಈಗ ಕಾರ್ಡ್ ಸಿಸ್ಟಮ್ ಜಾರಿಯಲ್ಲಿದೆ. ಅವುಗಳನ್ನು ಈಗ ಅನ್—ಅಫೆಷಿಯಲ್ ಆಗಿ ಕೊಟ್ಟಿದ್ದೇವೆ. ಹೊಸ ಕಾರ್ಡ್‌ಗಳನ್ನು ಜೂನ್-15 ರಿಂದ ಕೊಡುವಾಗ ಹಳೆಯ ಕಾರ್ಡ್‌ಗಳನ್ನು ಬದಲಾವಣೆ ಮಾಡಬೇಕಾಗುತ್ತದೆಯೇ ಹೊರತು

(ಶ್ರೀ ಎನ್. ಚಿಕ್ಕೇಗೌಡ)

ಬೇರೆ ಯಾವ ರೀತಿಯಿಂದಲೂ ತೊಂದರೆಯಾಗುವುದಿಲ್ಲ; ಮತ್ತು ಬೇರೆ ಕಡೆಗಳಲ್ಲಿ ಈಗ ಪರ್ಮಿಟ್ ಸಿಸ್ಟಮ್ ಮೂಲಕ ಏನು ಹಂಚುತ್ತಿದ್ದೇವೆ, ಅದನ್ನೇ ಮುಂದುವರಿಸುತ್ತೇವೆ. ಅದೇ ರೀತಿ ಈಗ ಕೃತಕ ಗೊಬ್ಬರದ ಕೊರತೆ ಇರುವ ಕಾರಣದಿಂದ ನಾವು ಹೆಚ್ಚು ಹೆಚ್ಚಾಗಿ ಹಸಿರೆಲೆ ಗೊಬ್ಬರವನ್ನು ಮತ್ತು ಯಾಂತ್ರೀಕೃತ ಕಾಂಪೋಸ್ಟ್ ಗೊಬ್ಬರವನ್ನು ತಯಾರು ಮಾಡತಕ್ಕದ್ದು ಅಗತ್ಯವಿದೆ. ಈಗ ಬೆಂಗಳೂರು, ಮಂಗಳೂರು, ಧಾರವಾಡ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿ ಬೀಳ ತಕ್ಕಂಥ ಕಸಕಡ್ಡಿಗಳನ್ನು ಉಪಯೋಗಿಸಿಕೊಂಡು, ಮೆಕನೈಸ್ಡ್ ಕಾಂಪೋಸ್ಟ್ ಪ್ಲಾಂಟ್ ಮೂಲಕ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಿ ರೈತರಿಗೆ ಹಂಚಬೇಕೆಂದು ತೀರ್ಮಾನ ಮಾಡಿದ್ದೇವೆ. ಇಂತಹ ಒಂದು ಪ್ಲಾಂಟ್‌ನ್ನು ಈ ವರ್ಷದಲ್ಲಿ ನಾವು ಬೆಂಗಳೂರು ನಗರದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಮತ್ತು ನಗರದ ಕಾರ್ಪೊರೇಷನ್ ಮೂಲಕ ಪ್ರಾರಂಭ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಇದಕ್ಕೆ 33 ಪರ್ಸೆಂಟ್ ಸಬ್ಸಿಡಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತೇವೆಂದು ಸಹ ಹೇಳಿದ್ದಾರೆ. ಆದ್ದರಿಂದ ಈ ಮೂಲಕ ನಾವು ಗೊಬ್ಬರ ತಯಾರಿಸಿ ರೈತರಿಗೆ ಬೇಕಾದ ಗೊಬ್ಬರವನ್ನು ಹಂಚಿ, ಗೊಬ್ಬರದ ಕೊರತೆಯನ್ನು ನಿವಾರಿಸುವುದಕ್ಕೆ ಕ್ರಮ ಕೈಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಇದರ ಜೊತೆಗೆ ಗೋಬರ್‌ಗ್ಯಾಸ್ ಪ್ಲಾಂಟ್‌ನ್ನು ನಮ್ಮ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಯಾರು ಮಾಡುವುದಕ್ಕೆ ಅವಕಾಶವಿದೆ. ಈಗ ಸಗಣಿಯನ್ನು ತಟ್ಟಿ ನಂತರ ಅದನ್ನು ಉಪಯೋಗಿಸುವ ಪದ್ಧತಿ ಏನಿದೆ ಅದನ್ನು ಹೋಗಲಾಡಿಸಿ ಅದರ ಬದಲು ಗೋಬರಗ್ಯಾಸ್ ಪ್ಲಾಂಟ್‌ನ್ನು ತಯಾರು ಮಾಡಿದರೆ, ಅದರಿಂದ ವಿದ್ಯುಚ್ಛಕ್ತಿಯನ್ನು ಮತ್ತು ಗೊಬ್ಬರವನ್ನು ಪಡೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಹೇಳಿದ್ದಾರೆ. ಈ ಪದ್ಧತಿ ಈಗ ದೇಶದ ಅನೇಕ ಕಡೆಗಳಲ್ಲಿ ಜಾರಿಯಲ್ಲಿದೆ. ಅದೇ ರೀತಿ ನಮ್ಮ ಕರ್ನಾಟಕ ರಾಜ್ಯದಲ್ಲಿಯೂ ಸಹ ಸುಮಾರು 2 ಸಾವಿರ ಪ್ಲಾಂಟ್ ಹಾಕಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಆದರೆ ಇದಕ್ಕೆ ಸ್ಟೀಲ್ ಮತ್ತು ಸಿಮೆಂಟ್ ಸಿಗುವುದು ಕಷ್ಟವಾಗಿದೆ. ಆದರೂ ಇದಕ್ಕೆ ಪ್ರೈಯಾರಿಟಿ ಕೊಡುವುದರ ಮೂಲಕ ಇವುಗಳನ್ನು ಸ್ಥಾಪಿಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ.

ಇನ್ನು ನಮ್ಮ ರಾಜ್ಯದಲ್ಲಿ ನಾವು ಜಮೀನುಗಳಿಗೆ ಒಡ್ಡು ಹಾಕುವ ಕೆಲಸವನ್ನು ಮಾಡಿದ್ದೇವೆ. 1972-73ರಲ್ಲಿ 3.4 ಲಕ್ಷ ಹೆಕ್ಟೇರ್‌ಗಳಲ್ಲಿ ಕಾಂಟೂರ್ ಬಂಡಿಂಗ್ ಮಾಡಿದ್ದೇವೆ. ಮತ್ತು 1973-74ರಲ್ಲಿ ನಾವು ಇಟ್ಟುಕೊಂಡಿದ್ದ ಗುರಿಗಿಂತ ಜಾಸ್ತಿ ಕೆಲಸ ಮಾಡಿದ್ದೇವೆ. ಅಂದರೆ ನಾವು ಒಂದು ಲಕ್ಷ ಹೆಕ್ಟೇರ್‌ನಷ್ಟು ಹೆಚ್ಚಿಗೆ ಜಮೀನಿನಲ್ಲಿ ಒಡ್ಡುಗಳನ್ನು ಹಾಕತಕ್ಕ ಕೆಲಸ ಮಾಡಿದ್ದೇವೆ. ಒಟ್ಟು 3.48 ಲಕ್ಷ ಹೆಕ್ಟೇರ್‌ನಲ್ಲಿ ಒಡ್ಡುಗಳನ್ನು ಹಾಕತಕ್ಕದ್ದನ್ನು ಮಾಡಿದ್ದೇವೆ. ಜೊತೆಗೆ ವೇಸ್ಟ್ ವೇರ್ ಕಾರ್ಯವನ್ನು ಸಹ ಮುಂದುವರೆಸಿದ್ದೇವೆ. ಈ ರೀತಿ ಒಡ್ಡುಗಳನ್ನು ಹಾಕಿರುವುದರಿಂದ ಯಾವ ಯಾವ ಭಾಗಗಳಲ್ಲಿ ಅದರ ಒಂದು ಉಪಯೋಗ 15 ರಿಂದ 20 ಇಂಚುಗಳವರೆಗೆ ಮಳೆ ಬೀಳುತ್ತದೋ ಅಂತಹ ಕಡೆಗಳಲ್ಲಿ ಆಗುತ್ತದೆ. ಬೇರೆ ಕಡೆಗಳಿಂದಲೂ ಸಹ ತಮ್ಮ ಜಮೀನುಗಳಿಗೆ ಒಡ್ಡುಗಳನ್ನು ಹಾಕಿಸಿಕೊಡಬೇಕೆಂದು ರೈತರಿಂದ ಮನವಿಗಳು ಬರುತ್ತಿವೆ. ಅವುಗಳ ಬಗ್ಗೆಯೂ ಸಹ ತೀವ್ರವಾದ ಕ್ರಮ ಕೈಕೊಂಡಿದ್ದೇವೆ. ಇದರ ಜೊತೆಗೆ ಸುಮಾರು 5350 ಹೆಕ್ಟೇರ್‌ಗಳಷ್ಟು ಜಮೀನಿನಲ್ಲಿ ಇಲ್ಲಿಯವರೆಗೆ ಲ್ಯಾಂಡ್ ರಿಕ್ಲಮೇಷನ್ ಕೆಲಸ ಮಾಡಿದ್ದೇವೆ. 1974—75ರಲ್ಲಿ ಸುಮಾರು 8 ಸಾವಿರ ಹೆಕ್ಟೇರ್‌ಗಳಷ್ಟು ಜಮೀನಿನಲ್ಲಿ ಈ ಕೆಲಸ ಮಾಡಬೇಕೆಂದು ಈ ಇಲಾಖೆಯ ಮೂಲಕ ಒಂದು ಯೋಜನೆಯನ್ನು ಹಾಕಿಕೊಂಡಿದ್ದೇವೆ.

ಅದೇ ರೀತಿ ನಮ್ಮ ಈ ಒಂದು ಆಯಕಟ್ಟು ಪ್ರದೇಶದಲ್ಲಿ 48,305 ಹೆಕ್ಟೇರನ್ನು ಮೇಜರ್ ಪ್ರಾಜೆಕ್ಟ್ ಪ್ರದೇಶದಲ್ಲಿ ಮಾಡಿದ್ದೇವೆ. 1974—75ನೇ ಸಾಲಿನಲ್ಲಿ 52 ಸಾವಿರ ಹೆಕ್ಟೇರಿನಲ್ಲಿ ಲ್ಯಾಂಡ್ ರೆಕ್ಲಮೇಷನ್ ಮಾಡಬೇಕು ಎಂದು ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಈ ಒಂದು ಪ್ರದೇಶದಲ್ಲಿ ಗೊಬ್ಬರದ ಕೊರತೆ ಬರುವುದಿಲ್ಲ. ನಮ್ಮ ರಾಜ್ಯದಲ್ಲಿ ಭೂಮಿಯ ಮಣ್ಣನ್ನು ಪರೀಕ್ಷೆ ಮಾಡಿ ರೈತರಿಗೆ ಮಾಹಿತಿಯನ್ನು ಒದಗಿಸತಕ್ಕ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಯಾವ ಯಾವ ಭೂಮಿಗೆ ಯಾವ ಯಾವ ಗೊಬ್ಬರವನ್ನು ಹಾಕಬೇಕು, ಎಷ್ಟು ಪ್ರಮಾಣದಲ್ಲಿ ಯಾವ ಯಾವ ಗೊಬ್ಬರವನ್ನು ಭೂಮಿಗೆ ಹಾಕಬೇಕು ಎನ್ನುವುದನ್ನು ತಿಳಿಯಬೇಕಾದರೆ ರೈತರು ಜಮೀನಿನಲ್ಲಿ ಇರತಕ್ಕ ಮಣ್ಣನ್ನು ಪರೀಕ್ಷೆ ಮಾಡಿಸಬೇಕಾದ್ದು ಬಹಳ ಮುಖ್ಯವಾದದ್ದು ಎಂದು ತಿಳಿದು ಅದಕ್ಕೋಸ್ಕರ ನಮ್ಮ ರಾಜ್ಯದ 19 ಜಿಲ್ಲೆಗಳಲ್ಲಿಯೂ ಮಣ್ಣನ್ನು ಪರೀಕ್ಷೆ ಮಾಡತಕ್ಕ ಕೇಂದ್ರಗಳನ್ನೂ ಎರಡು ಸಂಚಾರಿ ಪರೀಕ್ಷಾ ಕೇಂದ್ರಗಳನ್ನು ಮಾಡಿದ್ದೇವೆ. ರೈತರು ಕಳಹಿಸಿರ

ತಕ್ಕ ಶಾಂಪಲ್ ಮಣ್ಣನ್ನು ಪರೀಕ್ಷೆ ಮಾಡಿ ಅದರ ಮಾಹಿತಿಯನ್ನು ಅವರಿಗೆ ಒದಗಿಸುವ ಒಂದು ವ್ಯವಸ್ಥೆ ಮಾಡಿದ್ದೇವೆ. ಕಳೆದ ವರ್ಷ ಸುಮಾರು 1 ಲಕ್ಷ ಮಣ್ಣಿನ ಶಾಂಪಲ್‌ಗಳನ್ನು ಪರೀಕ್ಷೆ ಮಾಡಿ ಅದರಲ್ಲಿ ಇದ್ದಂತಹ ಮಾಹಿತಿಯನ್ನು ಸಂಬಂಧಪಟ್ಟ ರೈತರಿಗೆ ತಿಳಿಸಿದ್ದೇವೆ.

ವ್ಯವಸಾಯ ಇಲಾಖೆಯ ಮೂಲಕ ಭೂಮಿಯಲ್ಲಿ ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕಾಗಿ ಸಾಂದ್ರಬೇಸಾಯದ ಮುಖಾಂತರ ಮಾಡುತ್ತಿದ್ದೇವೆ. ಅದಕ್ಕೆ ರೈತರಿಗೆ ಬೇಕಾದಂತಹ ಎಲ್ಲಾ ಮಾಹಿತಿಯನ್ನೂ ಒದಗಿಸುತ್ತಿದ್ದೇವೆ. ರೈತರಿಗೆ ಆ ಬೇಸಾಯಕ್ಕೆ ಬೇಕಾದಂತಹ ಬೀಜ, ಗೊಬ್ಬರ ಮತ್ತು ಕ್ರಿಮಿನಾಶಕ ವಸ್ತುಗಳು ಇತ್ಯಾದಿಗಳನ್ನು ಸಕಾಲದಲ್ಲಿ ಒದಗಿಸುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ವಾಮಿ ತಮ್ಮ ಇಲಾಖೆಯವರು ಮತ್ತು ಅಗ್ರಿಕಲ್‌ಚರಲ್ ಯೂನಿವರ್ಸಿಟಿ ಏನಿದೆ ಅಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಇಂಗ್ಲೀಷಿನಲ್ಲಿ ಬರೆದು ರೈತರಿಗೆ ಕೊಡುತ್ತಾರೆ. ಇಂಗ್ಲೀಷಿನಲ್ಲಿ ಬೆಳೆ ಬೆಳೆಸುತ್ತಾರೆ. ಅವು ಕನ್ನಡದಲ್ಲಿ ಇಲ್ಲದೇ ಇರುವುದರಿಂದ ಅವರು ಕೊಡತಕ್ಕ ಪುಸ್ತಕಗಳಿಂದ ಮತ್ತು ಪ್ರಕಟಣೆಗಳಿಂದ ರೈತರಿಗೆ ಏನೂ ಗೊತ್ತಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಕೃಷಿ ವಿಶ್ವವಿದ್ಯಾನಿಲಯದವರು ಮಾಡತಕ್ಕ ಹಸ್ತ ಪ್ರಕಟಣೆಗಳನ್ನು ಇಂಗ್ಲೀಷಿನಲ್ಲಿರುವುದನ್ನು ಕನ್ನಡಕ್ಕೆ ಭಾಷಾಂತರ ಮಾಡಿ ಅದನ್ನು ಅಚ್ಚು ಹಾಕಿಸಿ ರೈತರಿಗೆ ಕೊಟ್ಟಿದ್ದೇವೆ. ಏಕಕಾಲದಲ್ಲಿ ಹೆಚ್ಚು ಬೆಳೆಯನ್ನು ಬೆಳೆಯತಕ್ಕ ಮಲ್ಟಿಪಲ್ ಕ್ರಾಪಿಂಗ್ ಪ್ರೋಗ್ರಾಮನ್ನು ಕರ್ನಾಟಕ ರಾಜ್ಯದಲ್ಲಿ ಹೆಚ್ಚುಹೆಚ್ಚಾಗಿ ಜಾರಿಗೆ ತರಬೇಕೆಂದು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ಮತ್ತು ಸಿಂಧನೂರು ಈ ಪ್ರದೇಶಗಳಲ್ಲಿ ಮಾದರಿ ಪ್ರಯೋಗಗಳನ್ನು ನಡೆಸಿ ರೈತರು ಎಷ್ಟು ಏಕಕಾಲದಲ್ಲಿ 2—3 ಬೆಳೆಗಳನ್ನು ಬೆಳೆಯತಕ್ಕ ಒಂದು ಕಾರ್ಯಕ್ರಮವನ್ನು ಜಾರಿಗೆ ತಂದಿದ್ದೇವೆ. ಆ ರೀತಿ ಯಾವ ಯಾವ ಬೆಳೆಗಳನ್ನು ಯಾವ ಯಾವ ಕಾಲದಲ್ಲಿ ಯಾವರೀತಿ ಬೆಳೆಯಬೇಕೆಂಬ ಮಾಹಿತಿಯನ್ನು ರೈತರಿಗೆ ಒದಗಿಸಿದ್ದೇವೆ. ಆ ರೀತಿ ಬೆಳೆಯತಕ್ಕ ಪ್ರಯೋಗಗಳನ್ನೂ ಸಹ ಅಲ್ಲಲ್ಲೇ ಏರ್ಪಡಿಸಿದ್ದೇವೆ. ಕಳೆದ ವರ್ಷ ನಡೆದಂತಹ ಕಾರ್ಯಕ್ರಮದ ಪ್ರಕಾರ 1,68,587 ವಿದ್ಯುಚ್ಚಾಲಿತ ಪಂಪುಸೆಟ್ಟುಗಳನ್ನು ರೈತರಿಗೆ ಕೊಟ್ಟು ಆ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೇವೆ. ಇದರಿಂದ ರೈತರು ಹೆಚ್ಚು ಉತ್ಪಾದನೆ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಕೊರತೆ ಇದ್ದರೂ ಕೂಡ ವ್ಯವಸಾಯದ ಕೆಲಸಕ್ಕೆ ರೈತರು ಎಷ್ಟು ವಿದ್ಯುಚ್ಛಕ್ತಿಯನ್ನು ಬೇಕಾದರೂ ಉಪಯೋಗಿಸಬಹುದು ಎಂದು ಅವರಿಗೆ ವಿಶೇಷ ಸೌಲಭ್ಯವನ್ನು ಒದಗಿಸಿದ್ದೇವೆ.

ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ರೈತರಿಗೆ ಬೇಕಾದ ಒಳ್ಳೆಯ ಬಿತ್ತನೆ ಬೀಜವನ್ನು ಒದಗಿಸುವ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಿ ಸಕಾಲದಲ್ಲಿ ರೈತರಿಗೆ ಬೇಕಾದ ಬಿತ್ತನೆ ಬೀಜವನ್ನು ಒದಗಿಸಬೇಕು ಎಂದು ಮಾನ್ಯ ಸದಸ್ಯರನೇಕರು ಕೊಟ್ಟಂತಹ ಸಲಹೆಗಳನ್ನು ಸರ್ಕಾರದವರು ತೀವ್ರವಾದ ಗಮನಕ್ಕೆ ತೆಗೆದುಕೊಂಡು ವ್ಯವಸಾಯ ಇಲಾಖೆ ಮತ್ತು ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ ರೈತರಿಗೆ ಬೇಕಾದಂತಹ ಬಿತ್ತನೆ ಬೀಜವನ್ನು ಒದಗಿಸಿದ್ದೇವೆ. ಮತ್ತು ರೈತರಿಗೆ ಬೇಕಾದ ಫೌಂಡೇಷನ್ ಸೀಡ್ಸ್ ಅನ್ನು ಬೆಳೆಯುವುದಕ್ಕೆ ಬೇರೆಯವರಿಗೆ ವಹಿಸಿ ಅವರ ಮೂಲಕವೂ ರೈತರಿಗೆ ಬೀಜವನ್ನು ಹಂಚುವ ವ್ಯವಸ್ಥೆಯನ್ನು ಮಾಡಿದ್ದೇವೆ. ಬೀಜದಲ್ಲಿ ಕಲಬೆರಕೆ ಆಗುವುದನ್ನು ತಪ್ಪಿಸುವ ಬಗ್ಗೆ ಕೂಡ ಸಾಕಷ್ಟು ಕ್ರಮವನ್ನು ತೆಗೆದುಕೊಂಡಿದ್ದೇವೆ. ಮತ್ತು ರೈತರಿಗೆ ಹೆಚ್ಚು ಇಳುವರಿಯನ್ನು ಕೊಡತಕ್ಕ ಹೈಬ್ರಿಡ್ ಜವಾರ್, ಹೈಬ್ರಿಡ್ ಮೈಜ್ ಮತ್ತು ಹೈಬ್ರಿಡ್ ಕಾಟನ್ ಸೀಡ್ಸ್‌ಗಳನ್ನು ಒದಗಿಸಿದ್ದೇವೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ರಾಯಚೂರು, ಧಾರವಾಡ ಮತ್ತು ಬಳ್ಳಾರಿ ಡಿಸ್ಟ್ರಿಕ್ಟ್‌ಗಳಿಗೆ ಹೋಗಿ ಹತ್ತಿ ಬೆಳೆಯನ್ನು ನೋಡಬೇಕು. ರಾಯಚೂರಿನಲ್ಲಿ ವರಲಕ್ಷ್ಮಿ ಹತ್ತಿಯನ್ನು ಬೆಳೆದಿದ್ದಾರೆ. ಅದನ್ನು ನೋಡುವುದಕ್ಕೆ ಬಹಳ ಸಂತೋಷವಾಗುತ್ತದೆ. ನಾನು ವ್ಯವಸಾಯದ ಮಂತ್ರಿಯಾಗಿ ಅಲ್ಲಿಗೆ ಹೋಗಿ ನೋಡಿದ್ದೇನೆ. ಈ ವರಲಕ್ಷ್ಮಿ ಹತ್ತಿ ಗಿಡ 8—10 ಅಡಿ ಎತ್ತರ ಬೆಳೆದಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಅಲ್ಲಿ ನಡೆದಿರತಕ್ಕ ಅವ್ಯವಹಾರವನ್ನು ಮಾತ್ರ ಎತ್ತಿ ತೋರಿಸುತ್ತಾರೆ. ಆದರೆ ಅಲ್ಲಿ ನಡೆದಿರತಕ್ಕ ಪ್ರಗತಿಯನ್ನು ಹೇಳುವುದಿಲ್ಲ. 8—10 ಅಡಿ ಬೂರಗದ ಮರ ಕೂಡ ಇಲ್ಲ. ಆದರೆ ವರಲಕ್ಷ್ಮಿ ಹತ್ತಿ ಗಿಡ ಬೆಳೆದಿದೆ. ಈ ವರಲಕ್ಷ್ಮಿ ಹತ್ತಿ ಬೆಳೆ ರಾಯಚೂರು, ಧಾರವಾಡ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಒಂದು ವರಪ್ರಸಾದವಾಗಿದೆ. ಆ ಕಡೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ತಮ್ಮ ದೃಷ್ಟಿಕೋಣವನ್ನು ಹರಿಸಬೇಕು.

(ಶ್ರೀ ಎನ್. ಚಿಕ್ಕೇಗೌಡ)

ಈ ವರಲಕ್ಷ್ಮಿ ಹತ್ತಿ ಬೀಜವನ್ನು ಡಾಕ್ಟರ್ ಕತರ್ಕಿ ಎನ್ನುವವರು ಸಂಶೋಧನೆ ಮಾಡಿ ಕಂಡುಹಿಡಿದಿದ್ದಾರೆ. ಗುಜರಾತಿನಲ್ಲಿ ಎಚ್. 4 ಹತ್ತಿ ಬೀಜವನ್ನು ಕಂಡುಹಿಡಿದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿರತಕ್ಕ ತಜ್ಞರು ಕಂಡುಹಿಡಿದಿರತಕ್ಕ ವರಲಕ್ಷ್ಮಿ ಕಾಟನ್ ಸೀಡ್ಸ್ ಏನಿದೆ ಇದು ಅದಕ್ಕಿಂತಲೂ ಹೆಚ್ಚು ಬೆಳೆ ಬೆಳೆಯುತ್ತದೆ. ಒಂದು ಕ್ವಿಂಟಾಲ್ ಹತ್ತಿಗೆ 960 ರೂಪಾಯಿಗಳು ಸಿಕ್ಕುತ್ತದೆ. ಈ ವರಲಕ್ಷ್ಮಿ ಹತ್ತಿ ಬೀಜದಿಂದ ಒಂದು ಎಕರೆ ಭೂಮಿಯಲ್ಲಿ 8—10, 15 ಕ್ವಿಂಟಾಲ್ ಹತ್ತಿಯನ್ನು ಬೆಳೆಯಬಹುದು. ಇದರಿಂದ ರೈತರಿಗೆ ಒಂದು ಎಕರೆಯಲ್ಲಿ ಹತ್ತಿಯನ್ನು ಬೆಳೆದರೆ ಸುಮಾರು 15 ಸಾವಿರ ರೂಪಾಯಿಗಳು ಸಿಕ್ಕುತ್ತದೆ. 1.2 ಇಂಚು ಸ್ಟೇಪಲ್ ಲೆಂಗ್ತ್ ಇರತಕ್ಕ ಹತ್ತಿ ಬೀಜವನ್ನು ಸೂಡಾನ್ ಮತ್ತು ಈಜಿಪ್ಟ್ ದೇಶಗಳಿಂದ ಹಿಂದೆ ನಮ್ಮ ರಾಜ್ಯಕ್ಕೆ ತರಿಸಲಾಗುತ್ತಿತ್ತು.

ಶ್ರೀ ಕೆ. ಎಚ್. ಹನುಮೇಗೌಡ.—ಸ್ವಾಮಿ ರಾಯಚೂರಿನಲ್ಲಿ ಬಾಪುರಾವ್ ಎನ್ನುವವರು ವರಲಕ್ಷ್ಮಿ ಹತ್ತಿಬೀಜಕ್ಕಿಂತ ಉತ್ತಮವಾದ ಹತ್ತಿಬೀಜವನ್ನು ಹಾಕಿ ಬಹಳ ಸೊಗಸಾಗಿ ಹತ್ತಿಯನ್ನು ಬೆಳೆದಿದ್ದಾರೆ. ಆದರೆ ವ್ಯವಸಾಯ ಇಲಾಖೆಯವರು ಇಂಥಾ ಬೆಳೆಯನ್ನು ಏತಕ್ಕೆ ಬೆಳೆದಿದ್ದೀಯಾ ಎಂದು ಶ್ರೀಮಾನ್ ಬಾಪುರಾವ್ ಅವರಿಗೆ ನೋಟೀಸ್ ಕೊಟ್ಟಿದ್ದಾರೆ. ಇಂಥಾ ಅಧಿಕಾರಿಗಳ ಬಗ್ಗೆ ಯಾವ ಪದವನ್ನು ಉಪಯೋಗಿಸಬೇಕೋ ಗೊತ್ತಿಲ್ಲ. ಯಾರಾದರೂ ಒಳ್ಳೆಯದನ್ನು ಮಾಡಿದರೆ ಏತಕ್ಕೆ ಒಳ್ಳೆಯದು ಎಂದು ಹೇಳಬಾರದು ? ಸಾವಿರಾರು ರೂಪಾಯಿಗಳ ಸಂಬಳವನ್ನು ತೆಗೆದುಕೊಳ್ಳತಕ್ಕ ಅಧಿಕಾರಿಗಳು ಈ ರೀತಿ ನೋಟೀಸ್ ಕೊಟ್ಟಿರುವುದನ್ನು ಮಾನ್ಯ ಮಂತ್ರಿಗಳು ತರಿಸಿಕೊಂಡುನೋಡಿ ಆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಅವರಿಗೆ ಏನು ನೋಟೀಸ್ ಕೊಟ್ಟಿದ್ದಾರೆಯೋ ಅದು ನನಗೆ ಗೊತ್ತಿಲ್ಲ. ನಿರ್ದಿಷ್ಟವಾದ ನಿದರ್ಶನಗಳಿದ್ದರೆ ಅಂಥಾದ್ದನ್ನು ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಎಚ್. ಹನುಮೆಗೌಡರು ನನಗೆ ಕಳುಹಿಸಿಕೊಟ್ಟರೆ ಯಾರಾದರೂ ಆರೀತಿ ಮಾಡಿದ್ದರೆ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ರೈತರು ಹೆಚ್ಚು ರೊಕ್ಕದ ಬೆಳೆಗಳನ್ನು ಬೆಳೆಯುವುದಕ್ಕೆ ಹೆಚ್ಚು ಉತ್ಪಾದನೆ ಮಾಡುವುದಕ್ಕೆ ರೈತರಿಗೆ ಒಳ್ಳೆಯ ತಳಿ ಬೀಜಗಳನ್ನು ಹೈಬ್ರಿಡ್ ಬೀಜಗಳನ್ನು ಒದಗಿಸಿದ್ದೇವೆ. ಈ ಬಗ್ಗೆ ಕೆಲವು ಅಂಕಿ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಹೈ ಈಲ್ಡ್ ವೆರೈಟಿ ಬೀಜಗಳನ್ನು ರೈತರಿಗೆ ಕೊಟ್ಟು ಹೆಚ್ಚು ಇಳುವರಿ ಬರುವಂತೆ ಮಾಡಿ ದೇಶದಲ್ಲಿ ಹೆಚ್ಚು ಉತ್ಪಾದನೆ ಮಾಡುವ ದೃಷ್ಟಿಯಿಂದ 1973—74ನೇ ಸಾಲಿನಲ್ಲಿ ರೈತರಿಗೆ ಹೈಬ್ರಿಡ್ ಜವಾರ್ ಬತ್ತನೆ ಬೀಜವನ್ನು 1330 ಟನ್ ಕೊಟ್ಟಿದ್ದೇವೆ. ಮೈಜ್ 1865 ಟನ್ ಕೊಟ್ಟಿದ್ದೇವೆ. ಬಾಜ್ರ 216 ಟನ್ ಕೊಟ್ಟಿದ್ದೇವೆ. ಬತ್ತ 10523 ಟನ್ ಕೊಟ್ಟಿದ್ದೇವೆ. ಮೆಕ್ಸಿಕನ್ ವೀಟ್ 648 ಟನ್ ಕೊಟ್ಟಿದ್ದೇವೆ. 1974-75ನೇ ಸಾಲಿನಲ್ಲಿ 3070 ಟನ್‌ಗಳಷ್ಟು ಒಂದು ಜಾತಿಯ ಜೋಳವನ್ನು ಹಂಚಬೇಕು 1300 ಟನ್‌ಗಳಷ್ಟು ಹೈಬ್ರಿಡ್ ಮೇಜ್, ಹೈಬ್ರಿಡ್ ಬಾಜ್ರಾ ಇನ್ನೂ ಬೇಕಾಗಿದೆ. 15 ಸಾವಿರ ಟನ್‌ಗಳಷ್ಟು ಹೈಬ್ರಿಡ್ ವೆರೈಟೀಸ್ ಇನ್ನೂ ಹೆಚ್ಚಿಗೆ ಹಂಚಬೇಕೆಂಬ ಪ್ರೋಗ್ರಾಂ ಕೂಡ ಇದೆ. 3.15 ಲಕ್ಷ ಟನ್‌ಗಳಷ್ಟು ಆಹಾರ ಪದಾರ್ಥಗಳನ್ನು ಹೆಚ್ಚಿಗೆ ಹಂಚಬೇಕೆಂದು ಯೋಚನೆ ಮಾಡಿದ್ದೇವೆ. 1974—75ನೇ ಸಾಲಿನಲ್ಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೃಷಿ ಇಲಾಖೆಯ ಫಾರಂಗಳನ್ನು ಹೆಚ್ಚಿಗೆ ಮಾಡಿ ಹೈಬ್ರಿಡ್ ಬಾಜ್ರಾ ಕಾಬೆರಿಕೆ ಮಾಡುವುದನ್ನು ತಪ್ಪಿಸುವುದಕ್ಕೆ ಬೇಕಾದಂಥ ಮುಖ್ಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ಸರ್ಕಾರದವರು ಇತ್ತೀಚೆಗೆ ತೆಗೆದುಕೊಂಡಿದ್ದಾರೆ.

5-30 P.M.

ಇನ್ನು ಸೀಡ್ ಕನ್‌ಸರ್‌ವೇಷನ್ ಪ್ರೋಗ್ರಾಂ ಬಗ್ಗೆ ಹೇಳುವುದಾದರೆ, ಈ ಸಾಲಿನಲ್ಲಿ ಸೀಡ್ ಕನ್‌ಸರ್‌ವೇಷನ್ ಯೂನಿಟ್ ಎಂದು ಮಾಡಿ ಕಲಬೆರಕೆ ಮಾಡತಕ್ಕ ಬೀಜ ಹಾಗೂ ಗೊಬ್ಬರವನ್ನು ಕಂಡುಹಿಡಿದು ಅವರ ಬಗ್ಗೆ ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಆವಕೆಕ ಈಗ ವ್ಯವಸಾಯ ಇಲಾಖೆಯವರು ಸೀಡ್ ಕನ್‌ಸರ್‌ವೇಷನ್ ಯೂನಿಟ್ಟನ್ನು ಬೇರ್ಪಡಿಸಿ ಅದನ್ನು ಪ್ರತ್ಯೇಕ ಯೂನಿಟ್ ಆಗಿ ಮಾಡಬೇಕೆಂದು ಅದರ ಮೂಲಕ ಹೆಚ್ಚುವರಿ ಕೊಡುವ ಬೀಜ, ಅಗ್ರಿಕಲ್ಚರಲ್ ಗೊಬ್ಬರವನ್ನು ಟೆಸ್ಟ್ ಮಾಡುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇನ್ನು ನಮ್ಮ ರಾಜ್ಯದಲ್ಲಿ ಈ ಇಲಾಖೆಯ ಆಶ್ರಯದಲ್ಲಿರತಕ್ಕ 63 ಸೀಡ್ ಫಾರಂಗಳು ಆದರೆ, ಕೃಷಿ ವಿಶ್ವವಿದ್ಯಾನಿಲಯದಲ್ಲಿರತಕ್ಕ ಸುಮಾರು 3075 ಫಾರಂಗಳು ಇವೆ. ಇಲ್ಲಿ ಫೌಂಡೇಷನ್ ಪ್ರೊಡಕ್ಷನ್ ಸ್ಕೀಂ ಎಂಬುದಾಗಿ ಮಾಡಿಕೊಂಡಿದ್ದಾರೆ. ಇವತ್ತಿನ ದಿವಸ ಕೃಷಿ ಇಲಾಖೆಯಲ್ಲಿ

ಪ್ಲಾಂಟ್ ಪ್ರೊಡಕ್ಷನ್ ಕಾರ್ಯಕ್ರಮಗಳು ಬಹಳ ಚೆನ್ನಾಗಿ ನಡೆಯುತ್ತಿವೆ. ಅಲ್ಲಿ ಕ್ರಿಮಿನಾಶಕ ಔಷಧಿಗಳನ್ನು ಸ್ಟಾಕ್ ಮಾಡಿ ಬೆಳೆಗಳಿಗೆ ರೋಗರುಜಿನ ಬಾರದೇ ಇರುವ ಹಾಗೆ ತಡೆಗಟ್ಟಲು ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಅದೂ ಅಲ್ಲವೆ ಗ್ರಾಮಾಂತರ ಪ್ರದೇಶಗಳಲ್ಲಿ ಕ್ರಿಮಿನಾಶಕ ವಸ್ತುಗಳನ್ನು ಹಂಚುವ ಏರ್ಪಾಡು ಇದೆ. ಅವುಗಳು ಈಗ ಸಿಗುವುದು ಬಹಳ ಕಷ್ಟವಾಗಿರುವುದರಿಂದ ಅದನ್ನು ಹಂಚುವಾಗ ತುಂಬಾ ಎಚ್ಚರಿಕೆ ವಹಿಸಬೇಕೆಂದು ಸೂಚನೆ ಕೊಡಲಾಗಿದೆ. ಏಕೆಂದರೆ ಈಗ ವಿಶೇಷವಾಗಿ ಕ್ರಿಮಿನಾಶಕ ಔಷಧಿಗಳ ಅಭಾವ ಹೆಚ್ಚಾಗಿದೆ. ಆದ್ದರಿಂದ ಅಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ನವರು ಕ್ರಿಮಿನಾಶಕ ವಸ್ತುಗಳನ್ನು ಸೀಲ್ ಮಾಡಿ ಅದನ್ನು ಸಾಕಷ್ಟು ಪ್ರಮಾಣದಲ್ಲಿ ಸ್ಟಾಕ್ ಮಾಡಿ ಬೆಳೆಗಳಿಗೆ ರೋಗರುಜಿನ ಬರುವುದಕ್ಕೆ ಮುಂಚಿತವಾಗಿಯೇ ಗ್ರಾಮಾಂತರ ಜನರಿಗೆ ಹಂಚುವ ವ್ಯವಸ್ಥೆ ಮಾಡಬೇಕು. ಈಗ ಎಲ್ಲಾ ಜಿಲ್ಲೆಗಳಿಗೂ ಅವನ್ನು ಸೂತ್ರವಾಗಿ ಹಂಚುವ ಹಾಗೆ ಮಾಡಲಾಗಿದೆ. ಅವು ರೈತರಿಗೆ ನೇರವಾಗಿ ತಲುಪುವಂತೆಯೂ ತಕ್ಕ ವ್ಯವಸ್ಥೆ ಮಾಡಲಾಗಿದೆ.

ಇನ್ನು ಕಾಟನ್ ಬೆಳೆಯ ಬಗ್ಗೆ ಹೇಳುವುದಾದರೆ, 1973-74 ಸಾಲಿನಲ್ಲಿ ಸುಮಾರು 5 ಲಕ್ಷ 50 ಸಾವಿರ ಬೇಲ್ಸನ್ನು ಉತ್ಪಾದನೆ ಮಾಡಿದ್ದೇವೆ. 1974-75 ನೇ ಸಾಲಿನಲ್ಲಿ 7 ಲಕ್ಷ 20 ಸಾವಿರ ಬೇಲ್ಸನ್ನು ಉತ್ಪಾದನೆ ಮಾಡಿದ್ದೇವೆ. ಇದರ ಜೊತೆಗೆ ಸೀ ಐಲೆಂಡ್ ಕಾಟನ್ ಬೆಳೆಯನ್ನು ಸಹ ಮಾಡಬೇಕೆಂದು ಸರ್ಕಾರದವರು ಒಂದು ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಚಾಲ್ತಿ ವರ್ಷದಲ್ಲಿ ಒಂದು ಲಕ್ಷ 15 ಸಾವಿರ ಟನ್‌ಗಳಷ್ಟು ಇದನ್ನು ಉತ್ಪಾದನೆ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಎಣ್ಣೆಯ ಬೀಜಗಳನ್ನು 1973—74ನೇ ಸಾಲಿನಲ್ಲಿ 8 ಲಕ್ಷ 20 ಸಾವಿರ ಟನ್‌ಗಳಷ್ಟು ಉತ್ಪಾದನೆ ಮಾಡಿದ್ದೇವೆ. ಈ ವರ್ಷದಲ್ಲಿ 10 ಲಕ್ಷ 50 ಸಾವಿರ ಟನ್‌ಗಳಷ್ಟು ಉತ್ಪಾದನೆ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಕಳೆದ ವರ್ಷದಲ್ಲಿ ಹೊಗೆಸೊಪ್ಪನ್ನು 17 ಸಾವಿರ ಟನ್‌ಗಳಷ್ಟು ಉತ್ಪಾದನೆ ಮಾಡಿದ್ದೇವೆ. ಈ ವರ್ಷದಲ್ಲಿ 24 ಲಕ್ಷ 900 ಟನ್‌ಗಳಷ್ಟು ಉತ್ಪಾದನೆ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಸನ್‌ಫ್ಲವರ್ ಅಂದರೆ ಸೂರ್ಯ ಕಾಂತಿಯನ್ನು ಮಳೆ ಕಡಿಮೆ ಬೀಳುವ ಪ್ರದೇಶದಲ್ಲಿ ಬೆಳೆಯಬೇಕೆಂಬ ಗುರಿಯನ್ನು ಇಟ್ಟುಕೊಂಡಿರುವುದರಿಂದ, ಮತ್ತು ಅದಕ್ಕೆ ಹೆಚ್ಚಿನ ಬೆಲೆಯೂ ಬರುವುದರಿಂದ, ನಮ್ಮ ರೈತರು ಇದನ್ನು ಹೆಚ್ಚಿಗೆ ಬೆಳೆಯುವುದಕ್ಕೆ ಸಾಧ್ಯವಿರುತ್ತದೆ. ಮತ್ತು ಹೆಚ್ಚಿಗೆ ಆಸಕ್ತಿಯೂ ಸಹ ಇರುತ್ತದೆ. ಇನ್ನು ನಾನು ಮೊದಲೇ ಹೇಳಿದ ಹಾಗೆ ವರಲಕ್ಷ್ಮಿ ಕಾಟನ್ ಎಚ್ 4ನ್ನು ಒಂದು ಸಾವಿರ ಎಕರೆಯಲ್ಲಿ ಬೆಳೆಯಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಒಂದು ಬೀಜವನ್ನು ಹೆಚ್ಚಿಗೆ ಉತ್ಪಾದನೆ ಮಾಡಿ ನಮ್ಮ ಪಕ್ಕದ ಪ್ರಾಂತಗಳಾದ ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲಿ ಇದರ ಒಂದು ಬೇಡಿಕೆ ಹೆಚ್ಚಾಗಿರುವುದರಿಂದ ಅದನ್ನು ಅಲ್ಲಿನ ರೈತರಿಗೂ ಒದಗಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ನಮ್ಮಲ್ಲಿ ಹೆಚ್ಚು ಇದನ್ನು ಉತ್ಪಾದನೆ ಮಾಡಿ ಪಕ್ಕದ ರಾಜ್ಯಗಳಿಗೂ ಒದಗಿಸುವ ಸಾಧ್ಯವಿದೆ. ಸಣ್ಣ ರೈತರ ಹಾಗೂ ಮಧ್ಯಮ ವರ್ಗದ ರೈತರ ಅಭಿವೃದ್ಧಿ ಯೋಜನೆಯ ಅಂಗವಾಗಿ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಅನೇಕ ಸಣ್ಣಪುಟ್ಟ ಯೋಜನೆಗಳನ್ನು ಈಗಾಗಲೇ ಸರ್ಕಾರದವರು ಕೈಗೊಂಡಿದ್ದಾರೆ. ಸಣ್ಣ ರೈತರ ಅಭಿವೃದ್ಧಿ ಯೋಜನೆಗಾಗಿ ಮೈಸೂರು, ಬಿದರ್ ನಾರ್ತ್ ಕೆನರಾ, ಬೆಂಗಳೂರು ಈ ಕ್ಷೇತ್ರಗಳಲ್ಲಿಯೂ ಮತ್ತು ಹಾಸನ, ಗುಲ್ಬರ್ಗಾ ಜಿಲ್ಲೆಗಳಲ್ಲಿಯೂ ಹೆಚ್ಚಿಗೆ ಅಂತಹ ಯೋಜನೆಗಳನ್ನು ಈಗಾಗಲೇ ಕೈಗೊಳ್ಳಬೇಕೆಂದು ಸರ್ಕಾರದವರು ತೀರ್ಮಾನ ಮಾಡಿದ್ದಾರೆ. ಇದು ಮಂತ್ರಿಮಂಡಲದಲ್ಲಿಯೂ ಇನ್ನೂ ತೀರ್ಮಾನವಾಗಬೇಕಾಗಿದೆ. ಹಾಸನ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಇದರಿಂದ ಹೆಚ್ಚಿಗೆ ಅನುಕೂಲವಾಗುತ್ತದೆ. ಈ ವರ್ಷದಲ್ಲಿ ಆ ಎರಡು ಜಿಲ್ಲೆಗಳಿಗೂ ಅಂತಹ ಯೋಜನೆಗಳನ್ನು ಜಾರಿಗೆ ಕೊಡಬೇಕೆಂದು ತೀರ್ಮಾನವನ್ನು ಸರ್ಕಾರದವರು ಮಾಡಿದ್ದಾರೆ. ಇಂತಹ ಯೋಜನೆಗಳಿಂದ 73ನೇ ಸಾಲಿನವರೆಗೆ 77,196 ಜನರಿಗೆ ಅನುಕೂಲವಾಗಿದೆ. ಈ ವರ್ಷದಲ್ಲಿ ಸಣ್ಣ ರೈತರ ಡೆವಲಪ್‌ಮೆಂಟ್ ಏಜೆನ್ಸಿ ನಾನು ಮೊದಲೇ ಹೇಳಿದಂಥ ಜಿಲ್ಲೆಗಳಲ್ಲಿ ಚೆನ್ನಾಗಿ ಕೆಲಸ ಮಾಡಿರುವುದರಿಂದ, ಅಲ್ಲಿನ ರೈತರು ಹೆಚ್ಚಿಗೆ ಅನುಕೂಲಗಳನ್ನು ಪಡೆದಿದ್ದಾರೆ. ಎಸ್. ಎಫ್. ಡಿ. ಎ. ನಿಂದ ಅಲ್ಲಿ ಸಾಲವನ್ನು ಹಂಚಿರುವುದು 803.76 ಲಕ್ಷ ರೂಪಾಯಿಗಳು. ಅಲ್ಲಿ ಬಾವಿಗಳನ್ನು ನಿರ್ಮಾಣ ಮಾಡಿರುವುದು 4990, ಪಂಪ್‌ಸೆಟ್ಟುಗಳನ್ನು ಒದಗಿಸಿರುವುದು—2525 ಮತ್ತು ದನಗಳನ್ನು ಹಂಚಿರುವುದು—26[illegible]1. ಈ ಒಂದು ಏಜೆನ್ಸಿಯಿಂದ ಅನುಕೂಲ ಪಡೆದಿರತಕ್ಕ ರೈತರ ಸಂಖ್ಯೆ—29,842. ಈಗ ಅಲ್ಲಿ ಸಾಲ ಕೊಟ್ಟಿರುವುದು—185.77 ಲಕ್ಷ ರೂಪಾಯಿಗಳು ಇದೂ ಅಲ್ಲದೆ ಅಲ್ಲ ಬಾವಿಗಳನ್ನು ತೋಡಿರುವುದು—2280, ಪಂಪ್‌ಸೆಟ್ಟುಗಳನ್ನು ಕೊಟ್ಟಿರುವುದು—14[illegible]6, ಮಿಲ್ಚ್ ಕ್ಯಾಟಲ್ ಡಿಸ್ಟ್ರಿಬ್ಯೂಟ್ ಮಾಡಿರುವುದು—2129. ಇನ್ನು 15 ಪೌಲ್ಟ್ರಿ, 1039 ಕುರಿಗಳು ಮತ್ತು 18 ಪಿಗರಿ ಯೂನಿಟುಗಳನ್ನು ಹಂಚಲಾಗಿದೆ.

ಶ್ರೀ ಸಿ. ಬೈರೇಗೌಡ.—ಏನು ಫಲಿತಾಂಶ ಬಂದಿದೆ ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಇರುವ ಕ್ಷೇತ್ರದ ವಿಷಯವಾಗಿ ಹೇಳುವುದಾದರೆ ಅವರ ಕಡೆ ಬಾವಿಗಳನ್ನು ತೋಡಿಸಿಕೊಂಡು ಹೆಚ್ಚಿಗೆ ನೀರು ಪಡೆಯುವುದಕ್ಕೆ ಯಾವ ಒಂದು ವ್ಯವಸ್ಥೆಯನ್ನೂ ಅವರು ಮಾಡುತ್ತಿಲ್ಲ. ಆದರೆ ಮಲೆನಾಡಿನ ಜನರು ಹೆಚ್ಚಿಗೆ ನೀರನ್ನು ಉಪಯೋಗಿಸುವುದರಿಂದ ಅವರು ನೀರಿಗೋಸ್ಕರ ಹೆಚ್ಚಿಗೆ ಕಣ್ಣು ತೆರೆಯುತ್ತಾರೆ. ಇವರು ಆ ರೀತಿಯಾಗಿಲ್ಲ. ಇವರು ಅದಕ್ಕಾಗಿ ಹೊರಗಡೆ ಬಂದು ಕಷ್ಟಪಡುವುದೇ ಇಲ್ಲ. ಅಲ್ಲಿಯೂ ಬಾವಿ ತೆಗೆದರೆ ನೀರು ಹೆಚ್ಚಿಗೆ ಬರುತ್ತದೆ. ಆ ನೀರಿನ ಪೊಟೆನ್ಸಿಯಾಲಿಟಿಯಿಂದ ಒಂದು ಎಕರೆ, ಎರಡು ಎಕರೆ, ಜಪಾನಿನಲ್ಲಿಯೂ ಎರಡು ಮೂರು ಬೆಳೆಯನ್ನು ತೆಗೆಯಬಹುದು. ನಮ್ಮ ಹಳೆಯ ಮೈಸೂರಿನಲ್ಲಿ ಕೇವಲ ಒಂದೆರಡು ಎಕರೆಗಳಲ್ಲಿ 3—4 ಬೆಳೆಗಳನ್ನು ತೆಗೆಯಬಹುದು.

ಶ್ರೀ ಸಿ. ಬೈರೇಗೌಡ.—ನಾವು ಬೇಕಾದರೆ 4 ಬೆಳೆಯನ್ನು ತೆಗೆಯುತ್ತೇವೆ.

ಶ್ರೀ ಎನ್. ಚಿಕ್ಕೇಗೌಡ.—ಅವರು ವ್ಯವಸಾಯ ಮಾಡುವುದೇ ಇಲ್ಲ. ಅವರ ಕ್ಷೇತ್ರದಲ್ಲಿ ಅವರಿಗೆ ಸೇರಿದ ವ್ಯವಸಾಯ ಭೂಮಿ ಬಹಳ ಇದೆ. ಅವರು ದೊಡ್ಡ ಜಮೀನ್ದಾರರು. ನಿಮಗಿಂತ 10 ಪಟ್ಟು ಎಕರೆ ಜಮೀನು ಇದೆ.

ಶ್ರೀ ಸಿ. ಬೈರೇಗೌಡ.—ಅಲ್ಲಿಗೆ ನಿಮಗೆ 500 ಎಕರೆ ಇದೆಯೆಂದಾಯಿತು.

ಶ್ರೀ ಎನ್. ಚಿಕ್ಕೇಗೌಡ.—ಒಟ್ಟಿನಲ್ಲಿ ಇವತ್ತಿನ ದಿವಸ ರೈತರಿಗೆ ಸಣ್ಣ ಮತ್ತು ಮಧ್ಯಮ ವರ್ಗದ ಜನರಿಗೆ ಹೆಚ್ಚಿಗೆ ಅನುಕೂಲವಾಗಬೇಕು. ಹಾಸನ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಎಂ. ಎಫ್. ಎ. ಎಲ್. ಮತ್ತು ಎಸ್. ಎಫ್.ಡಿ.ಎ ಸ್ಕೀಮ್‍ಗಳಿಂದ ಮಾಡತಕ್ಕ ಪರಿಶೋಧನೆಯ ಫಲ ರೈತರಿಗೆ ಈಗಾಗಲೇ ಮುಟ್ಟಿದೆ. ಇನ್ನು ಗ್ರಾಮ ಸೇವಕರುಗಳ ಬಗ್ಗೆ ಕೆಲವಾರು ದೂರುಗಳಿವೆ. ಕೆಳಮಟ್ಟದ ಅಧಿಕಾರಿಗಳು ಕೇಂದ್ರಗಳಲ್ಲಿರುವುದಿಲ್ಲ, ಅವರು ಎಲ್ಲೋ ಹೆಡ್‍ಕ್ವಾರ್ಟರ್ಸ್ ಬಿಟ್ಟು ಹೋಗುತ್ತಾರೆಂದು ಕೆಲವು ಮಾನ್ಯ ಸದಸ್ಯರೂ ಸಹ ಹೇಳಿದರು. ಕಳೆದ ಕೆಲವು ತಿಂಗಳಿನಲ್ಲಿಯೇ ನಾನು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಿದ್ದೇನೆ. ಯಾವ ಗ್ರಾಮಸೇವಕನಾಗಲೀ ಗ್ರಾಮಗಳಲ್ಲಿರುವುದಿಲ್ಲವೋ, ಅಲ್ಲಿರುವುದಕ್ಕೆ ಅವನಿಗೆ ವಸತಿ ಸೌಕರ್ಯ ಸಿಗುವುದಿಲ್ಲವೋ ಅಂತಹವರು ಮೊದಲೇ ಸ್ಪಷ್ಟವಾಗಿ ಮೇಲ್ಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು. ಆ ರೀತಿ ಮಾಡದೇ ಇದ್ದರೆ ಅಂತಹವರು ಯಾವ ಅಲೋಯನ್ಸ್‍ಗೂ ಅರ್ಹರಲ್ಲ, ಮತ್ತು ಅವರಿಗೆ ಕೊಡತಕ್ಕ ಟಿ. ಎ. ಮುಂತಾದ ಅಲೋಯನ್ಸ್‍ನ್ನು ನಿಲ್ಲಿಸಬೇಕೆಂದೂ ಮತ್ತು ಅವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದೂ ಸ್ಪಷ್ಟವಾಗಿ ಸೂಚನೆಯನ್ನು ಕೊಟ್ಟಿದ್ದೇನೆ. ಒಂದು ವೇಳೆ ಅವರು ಕೇಂದ್ರಗಳಲ್ಲಿ ಉಳಿಯದೇ ಹೋದರೆ ಅಂತಹವರ ಮೇಲೆ ಕ್ರಮ ತೆಗೆದುಕೊಂಡು ಸಸ್‍ಪೆಂಡ್ ಮಾಡಬೇಕೆಂದೂ ಹೇಳಿದ್ದೇವೆ.

ಇನ್ನು ನಾನು ಡೈರಿ ಮತ್ತು ಪಶುಪಾಲನೆಯ ಬಗ್ಗೆ ಕೆಲವು ವಿಷಯಗಳನ್ನು ಸಭೆಗೆ ತಿಳಿಸಬೇಕಾಗಿದೆ.

ಆದರೆ ಇಲ್ಲಿ ಕೆಲವು ಮಾನ್ಯ ಸದಸ್ಯರು ನಮ್ಮ ದೇಶದಲ್ಲಿ ನೂರಕ್ಕೆ 80 ಜನರೇನಿದ್ದಾರೆ ಅವರು ಎಲ್ಲರೂ ರೈತಾಪಿ ಜನರು—ಮೂಗುಪ್ರಾಣಿಗಳಂತೆ ಜನರೆಂದೂ ಅವರಲ್ಲಿ ಇನ್ನೂ ಸಂಘಟನೆ ಉಂಟಾಗಲಿಲ್ಲವೆಂದು ಹೇಳಿದ್ದಾರೆ. ಆದರೆ ನಾನು ಆ ಮಾತುಗಳನ್ನು ಪೂರ್ತಿಯಾಗಿ ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ದಿವಸ ದೇಶದಲ್ಲಿ ಈ ಕೃಷಿರಂಗದಲ್ಲಿ ಅನೇಕ ಸಂಶೋಧನೆಗಳು ನಡೆದು ರೈತನ ಉತ್ಪನ್ನವನ್ನು ದ್ವಿಗುಣ ಅಥವಾ ತ್ರಿಗುಣಗೊಳಿಸಿವೆ. ಇದರಿಂದ ರೈತರಲ್ಲಿ ಒಂದು ನವ ಚೈತನ್ಯ ಉಂಟಾಗಿದೆ. ವ್ಯವಸಾಯದ ಕಡೆಗೆ ಹೆಚ್ಚು ಜನರು ಆಕರ್ಷಣೆಯಾಗುತ್ತಿದ್ದಾರೆ. ಆದರೆ ಅವರಲ್ಲಿ ಸಂಘಟನೆ ಉಂಟಾಗುವುದಕ್ಕೆ ಏನು ಅಗತ್ಯವೋ ಅದನ್ನು ಮಾಡಬೇಕಾದ್ದು ಸಾರ್ವಜನಿಕ ಮುಖಂಡರುಗಳ ಕರ್ತವ್ಯ ; ಮತ್ತು ಅದನ್ನು ಈ ಸಭೆಯ ಸದಸ್ಯರೂ ಕೂಡ ಮಾಡಬಹುದು. ಈ ದಿವಸ ಎಲ್ಲ ವರ್ಗದಲ್ಲೂ ಸಂಘಟನೆ ಉಂಟಾಗಿದೆ. ಲಾಯರುಗಳು—ವರ್ತಕರು ಎಲ್ಲ ವರ್ಗಗಳಲ್ಲೂ ಸಂಘಟನೆ ಉಂಟಾಗಿದೆ. ಈ ಪ್ರಜಾಪ್ರಭುತ್ವಯುಗದಲ್ಲಿ ಸಂಘಟನೆ ಇಲ್ಲದೆ ಯಾವ ಕೆಲಸಗಳೂ ಸುಸೂತ್ರವಾಗಿ ನಡೆಯುವುದಿಲ್ಲ. ಆದುದರಿಂದ ರೈತರಲ್ಲೂ ಸಂಘಟನೆ ಆಗಬೇಕು—ಅದರ ಬಗ್ಗೆ ಸರ್ಕಾರಕ್ಕೆ ಯಾವ ಭಿನ್ನಾಭಿಪ್ರಾಯವೂ ಇಲ್ಲ.

ಇನ್ನು ಕ್ರಾಪ್ ಇನ್‍ಷೂರೆನ್ಸ್ ಬಗ್ಗೆ ಹೇಳುವುದಾದರೆ - ನಮ್ಮ ಸರ್ಕಾರ ಈಗಾಗಲೆ ಕೇಂದ್ರ ಸರ್ಕಾರದ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಪ್ರಸ್ತಾಪ ಮಾಡಿ, ಎಲ್. ಐ. ಸಿ. ನವರಲ್ಲೂ ವಿಚಾರ

ವಿನಿಮಯ ಮಾಡಿ ಇದನ್ನು ಜಾರಿಗೆ ಕೊಡುವುದಕ್ಕೆ ಏನೇನು ಮಾಡಬೇಕೋ ಆ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದೇವೆ. ಆದಷ್ಟು ಬೇಗ ಕೇಂದ್ರ ಸರ್ಕಾರದವರು ಇದನ್ನು ಜಾರಿಗೆ ಕೊಡಬೇಕೆಂದು ನಾವು ಒತ್ತಾಯ ಮಾಡಿದ್ದೇವೆ.

ಇನ್ನು ನಾನು ಕೃಷಿ ವಿಶ್ವವಿದ್ಯಾನಿಲಯ—ಮತ್ತು ಅಗ್ರಿಕಲ್ಚರ್ ಯೂನಿವರ್ಸಿಟಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ. ಈ ಕೃಷಿ ವಿಶ್ವವಿದ್ಯಾನಿಲಯಗಳವರು ಏನೇನು ನೂತನ ಸಂಶೋಧನೆಗಳನ್ನು ಬಿತ್ತನೆ ಬೀಜದ ವಿಚಾರಗಳಲ್ಲಿ ಆಗಲಿ ಕ್ರಿಮಿನಾಶಕದ ವಿಚಾರದಲ್ಲೇ ಆಗಲಿ ಕಂಡುಹಿಡಿಯುತ್ತಾರೋ ಅದರ ಪ್ರಯೋಜನ ತಕ್ಷಣದಲ್ಲೇ ರೈತರ ಹೊಲಕ್ಕೆ ಅದು ಮುಟ್ಟಬೇಕೆಂದು ಸರ್ಕಾರದವರು ಈ ಎಲ್ಲ ಎಕ್ಸ್‌ಟೆನ್‌ಷನ್ ಆಫೀಸರುಗಳಿಗೂ ತಾಕೀತ್ ಮಾಡಿದ್ದಾರೆ ಈ ವಿಚಾರದಲ್ಲಿ ಸರ್ಕಾರದವರ ಮನೋಭಿಪ್ರಾಯವೇನು ಎಂಬುದನ್ನು ಈ ಎಕ್ಸ್‌ಟೆನ್‌ಷನ್ ಅಧಿಕಾರಿಗಳು ಚೆನ್ನಾಗಿ ಅರಿತವರಾಗಿರುವುದರಿಂದ ಅವರು ತಮ್ಮ ಸಂಶೋಧನೆಯ ಫಲಗಳನ್ನು ಬಹುಬೇಗ ರೈತರ ಮನೆಯ ಬಾಗಿಲಿಗೆ ಹೋಗಿ ಅವರಿಗೆ ಅವನ್ನು ಮುಟ್ಟಿಸುತ್ತಿದ್ದಾರೆ. ಆದರೆ ನಾನೀಗ ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಮಾನ್ಯ ಆಹಾರ ಸಚಿವರಾಗಿರತಕ್ಕವರು ಧಾರ್ವಾಡದಲ್ಲಿ ಒಂದು ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸತಕ್ಕ ಬಗ್ಗೆ ತಿಳಿಸಿದರು. ಈಗ ಆ ವಿಷಯ ಬಿಲ್ಲಿನ ರೂಪದಲ್ಲಿ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಚರ್ಚೆಯಾಗುತ್ತಿದೆ. ಅಲ್ಲಿ ಅವರ ಒಂದು ವರದಿ ಸಿಕ್ಕಿದ ಕೂಡಲೆ ಅದನ್ನು ಈ ಮಾನ್ಯ ಸಭೆಯ ಮುಂದೆ ಮಂಡಿಸಿ ಅದಕ್ಕೆ ತಮ್ಮೆಲ್ಲರ ಅನುಮತಿಯನ್ನು ಪಡೆದು ಅದನ್ನು ಕಾರ್ಯಗತ ಮಾಡಲಾಗುತ್ತದೆ, ಅಂತೂ ನಮ್ಮ ರಾಜ್ಯದಲ್ಲಿ ಎರಡು ಕೃಷಿ ವಿಶ್ವವಿದ್ಯಾನಿಲಯಗಳನ್ನು ಮಾಡಬೇಕೆಂದು ತೀರ್ಮಾನವಾಗಿದೆ.

ಇನ್ನು ನಾನು ಪಶುಪಾಲನೆ ಮತ್ತು ಹೈನುಗಾರಿಕೆಯ ಬಗ್ಗೆ ಕೆಲವು ವಿಷಯಗಳನ್ನು ಹೇಳಬೇಕಾಗಿದೆ. ನಾನು ಕಳೆದ 2 ವರ್ಷಗಳಿಂದ ಆಗಾಗ್ಗೆ ಪತ್ರಿಕಾವರದಿಗಳ ಮೂಲಕ ದೇಶದಲ್ಲಿ ಉತ್ತಮ ತಳಿಯ ಹಸುಗಳನ್ನು ಬೆಳೆಸುವುದು ಮತ್ತು ಹೆಚ್ಚು ಹಾಲನ್ನು ಉತ್ಪತ್ತಿ ಮಾಡತಕ್ಕ ಬಗ್ಗೆ ಜನರಿಗೆ ತಿಳುವಳಿಕೆಗಳನ್ನು ಕೊಟ್ಟಿದ್ದೇನೆ. ಕೃಷಿಗಾರಿಕೆಯಲ್ಲಿರತಕ್ಕವರ ಉತ್ಪತ್ತಿಯನ್ನು ಹೆಚ್ಚು ಮಾಡತಕ್ಕ ಬಗ್ಗೆ ಅವರಿಗೆ ಇದನ್ನೊಂದು ಉಪಕಸುಬನ್ನಾಗಿ ನಡೆಸುವಂತೆ ಉತ್ತೇಜನ ಕೊಡಲಾಗಿದೆ ಇದರ ಬಗ್ಗೆ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ್ದನ್ನು ನಾನೂ ಕೂಡ ಅನುಮೋದಿಸುತ್ತೇನೆ. ಆದರೆ ಒಂದೇ ಮಾತಿನಲ್ಲಿ ಹೇಳುವುದಾದರೆ ಕಳೆದ ಐದು ಪಂಚವಾರ್ಷಿಕ ಯೋಜನೆಗಳಲ್ಲಿ ಈ ಬಾಬಿಗೆ ಒಟ್ಟು ಎಷ್ಟು ಹಣವನ್ನು ಒದಗಿಸಲಾಗಿದ್ದಿತೋ ಅಷ್ಟೇ ಹಣವನ್ನು ಈಗ ಈ ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ಒದಗಿಸಲಾಗಿದೆ. ಇದಕ್ಕೆ ಕೇಂದ್ರ ಸರ್ಕಾರದವರ ಸಹಾಯ ಕೂಡ ಸಿಕ್ಕಿದೆ. ಈಗ ಸುಮಾರು 7 ಕೋಟಿಯನ್ನು ಪಶುಪಾಲನೆ ಮತ್ತು ಹೈನುಗಾರಿಕೆಗಾಗಿ ಒದಗಿಸಲಾಗಿದೆ. ಇದೇ ರೀತಿ ರೈತರಿಗೆ ತಮ್ಮ ಸಂಪಾದನೆಯನ್ನು ಹೆಚ್ಚು ಮಾಡಿಕೊಳ್ಳಲು ಅನುಕೂಲವಾಗುವಂತೆ ಅವರಿಗೆ ಅಧಿಕ ಪ್ರಮಾಣದಲ್ಲಿ ಹಾಲು, ಮೊಟ್ಟೆ, ಮಾಂಸ ಇತ್ಯಾದಿಗಳನ್ನು ಸರಬರಾಯಿ ಮಾಡಲು ಅನುಕೂಲವಾಗುವಂತೆ ಪ್ರಾಣಿಗಳನ್ನು ಸಾಕುವುದಕ್ಕೆ ಪ್ರೋತ್ಸಾಹ ನೀಡಲಾಗಿದೆ. ಹಾಲಿನ ಉತ್ಪತ್ತಿಯನ್ನು ಜಾಸ್ತಿ ಮಾಡತಕ್ಕ ಬಗ್ಗೆ ನಾನು ಕಳೆದ 6—7 ತಿಂಗಳಿಂದ ವಿಶ್ವಬ್ಯಾಂಕಿನೊಂದಿಗೆ ವ್ಯವಹಾರ ನಡೆಸುತ್ತಿದ್ದೇನೆ. ನಮ್ಮಲ್ಲಿ ಸುಮಾರು ಐದು ಲಕ್ಷ ಮಿಶ್ರ ತಳಿ ಆಕಳುಗಳನ್ನು ತಯಾರು ಮಾಡುವುದಕ್ಕೆ ಮತ್ತು ಹೆಚ್ಚು ಮೇವನ್ನು ಉತ್ಪತ್ತಿ ಮಾಡುವುದಕ್ಕೆ ವಿಶ್ವಬ್ಯಾಂಕಿನವರಿಂದ ಸಾಲವನ್ನು ಕೋರಲಾಗಿದೆ. ಹಾಲನ್ನು ಕೆಡದಂತೆ ಅದನ್ನು ಪ್ರಿಜರ್ವ್ ಮಾಡತಕ್ಕ ವಿಧಾನ ಇತ್ಯಾದಿಗಳಿಗೆಲ್ಲ ಧನಸಹಾಯವನ್ನು ಕೇಳಿದೆ. ಇದಕ್ಕೆ ಕೇಂದ್ರ ಸರ್ಕಾರದ ಒಪ್ಪಿಗೆ ಕೂಡ ದೊರೆತಿದೆ. ಈಗಾಗಲೆ ನಮ್ಮ ಸರ್ಕಾರ ಈ ಬಗ್ಗೆ 46 ಕೋಟಿ ರೂಪಾಯಿಗಳ ಒಂದು ಪ್ರಾಜೆಕ್ಟನ್ನೂ ಕೂಡ ತಯಾರಿಸಿದೆ. ಮುಂದಿನ ನಾಲ್ಕನೇ ತಾರೀಖಿನಲ್ಲಿ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರ ಹಾಗೂ ವಿಶ್ವ ಬ್ಯಾಂಕಿನ ಮೂರು ಪ್ರತಿನಿಧಿಗಳ ನಡುವೆ ಮಾತುಕತೆಗಳು ನಡೆಯಲಿರುತ್ತವೆ. ಸಧ್ಯದಲ್ಲಿ ನಾನು ನಮ್ಮ ಕರ್ನಾಟಕ ರಾಜ್ಯದ 8 ಜಿಲ್ಲೆಗಳಲ್ಲಿ ಅಂದರೆ ಮೈಸೂರು, ಬೆಂಗಳೂರು, ತುಮಕೂರು. ಮಂಡ್ಯ, ಚಿಕ್ಕಮಗಳೂರಿನ ಕೆಲವು ತಾಲ್ಲೂಕುಗಳು, ಹಾಸನ ಕೋಲಾರ ಮತ್ತು ಕೊಡಗು ಇಷ್ಟು ಕಡೆಗಳಲ್ಲಿ ವಿಶ್ವಬ್ಯಾಂಕಿನವರ ಸಹಾಯ ಪಡೆದು ಕ್ಯಾಟಲ್ ಡೆವಲಪ್‌ಮೆಂಟ್ ಸೆಂಟರುಗಳನ್ನು ಸ್ಥಾಪಿಸಬೇಕೆಂದಿದ್ದೇನೆ.

ನಮ್ಮ ಅಧಿಕಾರಿಗಳು ಹೋಗಿ ಬಂದಮೇಲೆ ವಿಶ್ವಬ್ಯಾಂಕಿನಿಂದ ಅನುಕೂಲವಾಗುವುದು. ಪಶುಗಳಿಗೆ ಬರುವ ರೋಗವನ್ನು ತಡೆಗಟ್ಟಲು ಔಷಧಿ ತಯಾರಿಸಲು ಮೈಸೂರು ಸೀರಂ ಇನ್‌ಸ್ಟಿಟ್ಯೂಟಿಗೆ ಸುಮಾರು 2 ಕೋಟಿ ರೂಪಾಯಿಗಳ ನೆರವು ದೊರೆಯಲಿದೆ. ಪಶುಪಾಲಕರಿಗೆ ಸುಮಾರು

(ಶ್ರೀ ಎನ್. ಚಿಕ್ಕೇಗೌಡ)

ಒಂದು ಕೋಟಿ ರೂಪಾಯಿಗಳ ನೆರವನ್ನು ನೀಡುವರು. ಸಂತೋಷದಿಂದ ಇದನ್ನು ಹೇಳುತ್ತೇನೆ. ಈ ವಿಚಾರದಲ್ಲಿ ಅಧಿಕಾರಿಗಳು ಹೋಗಿಬಂದ ತಕ್ಷಣ ನಮಗೇನು ಅನುಕೂಲವಾಗಲಿದೆ ಮತ್ತು ಮುಂದಾಗುವ ಪ್ರಗತಿಯ ಬಗ್ಗೆ ಈ ಸಭೆಗೆ ಮಾಹಿತಿ ಒದಗಿಸುತ್ತೇನೆ.

ತಳಿ ಅಭಿವೃದ್ಧಿಯ ಬಗ್ಗೆ ಹೇಳುವುದಾದರೆ ಅಮೃತಮಹಲ್ ಕಾವಲಿನಲ್ಲಿ ಆ ಕೆಲಸ ಕೈಕೊಳ್ಳಲದ್ದೇವೆ. ಹಳ್ಳಿಕಾರ್ ದನಗಳ ತಳಿಗಳನ್ನು ಅಮೃತಮಹಲ್ ಕಾವಲಿನಲ್ಲಿರುವ 60 ಸಾವಿರ ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ಮಾಡಬೇಕೆಂದಿದ್ದೇವೆ. ಅದು ಉತ್ತಮವಾದ ತಳಿ, ಅದಕ್ಕಾಗಿ ಒಂದು ಫಾರಂ ಮಾಡಬೇಕೆಂಬ ಉದ್ದೇಶವಿದೆ. ಈ ಬಗ್ಗೆ ಒಂದು ಯೋಜನೆಯಿದೆ. ಬಿದರ್ ಮತ್ತು ಗುಲ್ಬರ್ಗದಲ್ಲಿ ದೇವನಿ ಬ್ರೀಡ್ ಕ್ಯಾಟಲ್ ಫಾರಂ ಪ್ರಾರಂಭಿಸಲು ಸರಕಾರ ಪ್ರಯತ್ನಮಾಡುತ್ತಿದೆ. ಇದು ಉತ್ತಮವಾದ ತಳಿ. ಇತರ ಉತ್ತಮವಾದ ತಳಿಗಳ ಅಭಿವೃದ್ಧಿಯ ಬಗ್ಗೆ ಕೂಡ ವಿಚಾರಮಾಡುತ್ತಿದ್ದೇವೆ. ಈ ಸಂಬಂಧದಲ್ಲಿ ವಿದೇಶಿವಿನಿಮಯದ ಕಷ್ಟವಿದೆ. ಡೆನ್ಮಾರ್ಕ್ ಸರಕಾರ ಹೆಬ್ಬಾಳಿನ ಬಳಿ ಫಾರಂಗಾಗಿ ಒಂದು ಕೋಟಿ ರೂಪಾಯಿಗಳ ಉಪಕರಣಗಳನ್ನು ಕೊಡಲಿದೆ, ಅವುಗಳ ಸಾಗಾಣಿಕೆಯಾಗುತ್ತಿದೆ. 1 ಲಕ್ಷ 25 ಸಾವಿರ ಡೋಸ್ ವೀರ್ಯ ಉಪಯೋಗಿಸಿ ತಳಿ ಬೆಳೆಸಲು ಅದು ಸಹಾಯ ಮಾಡುವುದು. ಅವುಗಳ ಉಪಯೋಗದ ಸಂಬಂಧದಲ್ಲಿ ಟ್ರೈನಿಂಗ್ ಕೊಡಲು ಡೆನ್ಮಾರ್ಕ್‌ನ ಅಧಿಕಾರಿಗಳನ್ನು ಕಳಿಸಿದ್ದಾರೆ. ಕಳೆದ ಎರಡು ತಿಂಗಳಲ್ಲಿ ಡೇನಿಷ್ ಸರಕಾರ ಎರಡು ತಂಡದಲ್ಲಿ ಜೆರ್ಸಿ ಮತ್ತು ರೆಡ್ ಡೇನ್ ಕ್ಯಾಟಲ್ ಸುಮಾರು 120 ಕೊಟ್ಟಿರುವುದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಅವುಗಳಿಂದ ಹುಟ್ಟುವ ಕರುಗಳನ್ನು ರೈತರಿಗೆ ಹಂಚಬೇಕು, ಹಾಲಿನ ಉತ್ಪತ್ತಿಯನ್ನು ಹೆಚ್ಚಿಸಬೇಕು ಎಂಬ ಉದ್ದೇಶವಿದೆ. ಅವುಗಳಿಗಾಗಿ ಅಮೃತಮಹಲ್ ಕಾವಲಿನಲ್ಲಿ ಬಾವಿ ತೋಡಿ ಅಲ್ಲಿನ ಜಮೀನಿನಲ್ಲಿ ಹುಲ್ಲನ್ನು ಬೆಳೆಸಬೇಕೆಂದಿದ್ದೇವೆ. ಆ ಹಸುಗಳನ್ನು ತಂದಮೇಲೆ ಅವುಗಳಿಗೆ ಬೇಕಾದ ಹಸಿರು ಹುಲ್ಲನ್ನೊದಗಿಸಬೇಕು. ಅದು ಮುಖ್ಯವಾಗಿ ಅವುಗಳಿಗೆ ಬೇಕು. 50 ಸಾವಿರ ಎಕರೆಯಲ್ಲಿ ಹುಲ್ಲನ್ನು ಬೆಳೆಸಲು ಯೋಜನೆ ಮಾಡಿ ಒಪ್ಪಿಗೆಗೆ ಕೇಂದ್ರ ಸರಕಾರಕ್ಕೆ ಕಳಿಸಲಾಗಿದೆ. ಆಸ್ಟ್ರೇಲಿಯ ಸರಕಾರ ಇದನ್ನು ಬಂದು ನೋಡಿದೆ, ಇನ್ನೊಂದು ಟೀಂ ಬಂದು ನೋಡಿದಮೇಲೆ ಅದಕ್ಕೆ ಬೇಕಾದ ಹಣ ಕೊಡಲು ವ್ಯವಸ್ಥೆಯಾಗುವುದು. ಈ ತಳಿಗಳಿಗೆ ಕಾನ್ಸೆಂಟ್ರೇಟ್ ಫುಡ್ ಕೊಡುವುದನ್ನು ಕಡಿಮೆಮಾಡಿ ಹಸಿರು ಹುಲ್ಲನ್ನು ಕೊಟ್ಟರೆ ವೆಚ್ಚ ಕಡಿಮೆಯಾಗಿ ಉತ್ಪತ್ತಿ ಹೆಚ್ಚುವುದು. ಈ ದೆಶೆಯಿಂದ ಇದರ ಬಗ್ಗೆ ಯೋಜನೆ ತಯಾರಿಸಲಾಗಿದೆ.

ಈ ದಿವಸ ರಾಜ್ಯದಲ್ಲಿ ಸುಮಾರು 48 ಲಕ್ಷ ಕುರಿಗಳಿವೆ, ಅವುಗಳ ಸಂಖ್ಯೆ ಹೆಚ್ಚಿಸಲು ಪ್ರಯತ್ನ ನಡೆದಿದೆ. ಬಿಜಾಪುರ, ಧಾರವಾಡದ ಕೆಲವು ಭಾಗ, ಚಿತ್ರದುರ್ಗ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಮಂಡ್ಯ ಜಿಲ್ಲೆಯ ಬನ್ನೂರು ಕುರಿಗಳೇನಿವೆ ಅವುಗಳ ಅಭಿವೃದ್ಧಿಗೆ ಅವಕಾಶಮಾಡಲಿರುವುದನ್ನು ಕೇಂದ್ರ ಸರಕಾರಕ್ಕೆ ತಿಳಿಸಿದ್ದೇವೆ. ಕುರಿಗಳ ವಿಚಾರದಲ್ಲಿ ಬನ್ನೂರು ಪ್ರಸಿದ್ಧಿಯಾಗಿದೆ, ಅಲ್ಲಿನ ತಳಿಗಳು ಒಳ್ಳೆಯ ಮಾಂಸವನ್ನು ಕೊಡುವುವು. ಇವನ್ನು ಅಭಿವೃದ್ಧಿಮಾಡಿ ಹೊರದೇಶಕ್ಕೆ ರಫ್ತು ಮಾಡಬೇಕೆಂಬ ಯೋಜನೆಯಿದೆ. ಬಿಜಾಪುರ ಮತ್ತು ಹಾಸನದ ಮೆರಿನೊ ಮುಂತಾದ ಬ್ರೀಡ್‌ಗಳು ಉಣ್ಣೆ ಮತ್ತು ಮಾಂಸಕ್ಕೆ ಹೆಸರುವಾಸಿಯಾಗಿವೆ. ಆಸ್ಟ್ರೇಲಿಯ ಮತ್ತು ರಷ್ಯದಿಂದ ಇವನ್ನು ತರಿಸಿ ಅವುಗಳ ತಳಿಗಳನ್ನು ಅಭಿವೃದ್ಧಿಮಾಡಿ ಹಂಚಬೇಕೆಂದಿದ್ದೇವೆ, ಚಳ್ಳಕೆರೆಯಲ್ಲೂ ಇದಕ್ಕೆ ಅವಕಾಶಮಾಡಲಾಗಿದೆ. ಈ ರೀತಿ ಹೈನುಗಾರಿಕೆ ಅಭಿವೃದ್ಧಿ ಮತ್ತು ಕ್ಯಾಟಲ್ ಅಭಿವೃದ್ಧಿ ಮಾಡಲು ವಿಶ್ವಬ್ಯಾಂಕಿನ ನೆರವು ಪಡೆಯಬೇಕೆಂದಿದ್ದೇವೆ. ಇದೇ ರೀತಿಯಲ್ಲಿ ಕುರಿಗಳ ಅಭಿವೃದ್ಧಿಗೂ ವಿಶ್ವಬ್ಯಾಂಕಿನ ಮುಂದೆ ಒಂದು ಯೋಜನೆಯನ್ನಿಡಬೇಕೆಂದಿದ್ದೇವೆ. ಇದರಿಂದ ಕುರಿಗಳ ಮಾಂಸ ಮತ್ತು ಉಣ್ಣೆಯ ಉತ್ಪತ್ತಿಗೆ ಅನುಕೂಲವಾಗುವುದು.

ಇಂದು ಪಶುಗಳು ಮತ್ತಿತರ ಪ್ರಾಣಿಗಳಿಗೆ ಬರುವ ರೋಗಗಳನ್ನು ತಡೆಗಟ್ಟಲು ಮೈಸೂರಿನ ಸೀರಂ ಇನ್‌ಸ್ಟಿಟ್ಯೂಟನ್ನು ಬಡಾವಣೆ ಮಾಡಬೇಕು, ಹೊರದೇಶದಿಂದ ಎರಡು ಫ್ರೀಜ್ ಡ್ರೈಯಿಂಗ್ ಯೂನಿಟ್ಸ್ ತರಬೇಕು ಎಂದು ಪ್ರಯತ್ನ ಮಾಡಿದ್ದೇವೆ. ಇದರ ಬಗ್ಗೆ ಕಳೆದ ವರ್ಷ 20 ಲಕ್ಷ ರೂಪಾಯಿ ಖರ್ಚಾಗಿದೆ. ಅಲ್ಲಿ ಹೆಚ್ಚು ಮದ್ದನ್ನು ತಯಾರಿಸಬೇಕೆಂದಿದ್ದೇವೆ. ಕಳೆದ ವರ್ಷ ಅನೇಕ ಸದಸ್ಯರು ಪಶುವೈದ್ಯ ಶಾಲೆಗಳನ್ನು ತಮ್ಮ ಭಾಗಗಳಿಗೆ ಕೊಡಬೇಕು ಎಂಬ ಬೇಡಿಕೆ ಇಟ್ಟರು. 140 ಗ್ರಾಮಾಂತರ ಪಶುವೈದ್ಯ ಶಾಲೆಗಳನ್ನು ತೆರೆಯುವುದಕ್ಕೆ ಮತ್ತು 20 ಪಶುವೈದ್ಯ ಶಾಲೆಗಳನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಯಾವ ವರ್ಷದಲ್ಲೂ ಇಷ್ಟು ದಿಟ್ಟತನದ ಕ್ರಮವನ್ನು ನಮ್ಮ ರಾಜ್ಯದಲ್ಲಿ ಕೈಕೊಂಡಿರಲಿಲ್ಲ. ಹಳೆಯ ಮೈಸೂರಿನಲ್ಲಿ ಇಷ್ಟು ಪ್ರಯತ್ನ ಇದರ ಬಗ್ಗೆ ಆಗಿರಲಿಲ್ಲ. ಈ ವರ್ಷ ಹೆಚ್ಚು ಹೊಸ ಪಶುವೈದ್ಯಶಾಲೆಗಳು ಪ್ರಾರಂಭ

ವಾಗಲಿವೆ. ರೋಗ ತಡೆಗಟ್ಟಲು ಮುಂಜಾಗ್ರತೆ ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದ್ದಾರೆ. ರೋಗ ಬಂದರೆ ಅಧಿಕಾರಿಗಳು ಕ್ರಮ ತೆಗೆದುಕೊಳ್ಳದಿದ್ದರೆ ಟೆಲಿಗ್ರಾಂ ಮೂಲಕ ಸರಕಾರಕ್ಕೆ ತಿಳಿಸಬೇಕು ಎಂದು ಸೂಚಿಸಲಾಗಿತ್ತು. ಅದರ ಪ್ರಕಾರ ಈ ವರ್ಷ ಟೆಲಿಗ್ರಾಂ ಬಂದಿಲ್ಲ. ಅಧಿಕಾರಿಗಳು ಸಹ ಮುಂಜಾಗ್ರತೆಯಿಂದ ಕ್ರಮ ತೆಗೆದುಕೊಂಡಿದ್ದಾರೆ, ತಾವು ಆಲಸ್ಯ ಮಾಡಿದರೆ ವಿಚಾರ ವಿಧಾನಸೌಧವನ್ನು ಮುಟ್ಟುತ್ತದೆ ಎನ್ನುವ ಅರಿವು ಅವರಿಗೆ ಬಂದಮೇಲೆ ಅಧಿಕಾರಿಗಳು ಸಕಾಲದಲ್ಲಿ ಕ್ರಮಗಳನ್ನು ತೆಗೆದುಕೊಂಡುದರಿಂದ ಈ ಸಲ ರೋಗಗಳ ಬಗ್ಗೆ ಸದಸ್ಯರು ಬಹಳ ಕಟುವಾದ ಟೀಕೆ ಮಾಡಲಿಲ್ಲ. ಎಲ್ಲ ಆಸ್ಪತ್ರೆಗಳಿಗೂ ಸಹ ಔಷಧಿಗಳನ್ನು ಹೆಚ್ಚು ಕೊಟ್ಟಿದ್ದೇವೆ. ಕಳೆದ ವರ್ಷ 2 ಲಕ್ಷ ರೂಪಾಯಿ ಔಷಧಿಗಳನ್ನು ಹಂಚಿದ್ದೇವೆ. ಅದರ ಹಿಂದಿನ ವರ್ಷಗಳಲ್ಲಿ ಮೂರು ನಾಲ್ಕು ಲಕ್ಷ ರೂಪಾಯಿ ಔಷಧಿಯನ್ನು ಕೂಡ ಹಂಚಿಲ್ಲ. ಆಸ್ಪತ್ರೆಗಳಿಗೆ ಹೆಚ್ಚು ಔಷಧಿಗಳನ್ನು ಕೊಟ್ಟಿರುವುದಲ್ಲದೆ ಎಷ್ಟು ದಾಸ್ತಾನಿದೆ ಎನ್ನುವುದನ್ನು ಕನ್ನಡದಲ್ಲಿ ಹಾಗೂ ಇಂಗ್ಲಿಷಿನಲ್ಲಿ ನೋಟೀಸ್ ಬೋರ್ಡಿನಲ್ಲಿ ಬರೆಯಬೇಕೆಂದು ಮಾಡಿದ್ದೇವೆ. ಇದರಿಂದ ಬಹಳ ಪರಿಣಾಮವಾಗಿದೆ. ನಾನು ಔಷಧಿಯನ್ನು ಕೊಂಡುಕೊಂಡು ಬಂದಿದ್ದೇನೆಂದು ಹೇಳಿ ಡಾಕ್ಟರುಗಳು ಔಷಧಕ್ಕೆ ಹಣವನ್ನು ತೆಗೆದುಕೊಳ್ಳುವುದು ತಪ್ಪಿದೆ.

6-00 P.M.

ಕಳೆದ ವರ್ಷ ದೊಡ್ಡ ರೋಗ ಮತ್ತು ಸಪ್ಪೆ ರೋಗ ಮತ್ತು ಇತರೆ ರೋಗಗಳು ಬಂದಿದ್ದು ಮುಂಜಾಗ್ರತೆಯ ಕ್ರಮಗಳನ್ನು ಈ ವರ್ಷ ತೆಗೆದುಕೊಳ್ಳಲಾಗಿದೆ. 20 ಲಕ್ಷ ಜಾನುವಾರಗಳಿಗೆ ರಿಂಡರ್‌ಪೆಸ್ಟ್ ಪ್ರತಿಬಂಧಕ ವ್ಯಾಕ್ಸಿನೇಷನ್ ಹಾಕಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ಒಂದು ಲಕ್ಷ ಡೋಸ್ ಕಾಲುಬಾಯಿ ರೋಗ ಪ್ರತಿಬಂಧಕ ಚುಚ್ಚುಮದ್ದನ್ನು ಒದಗಿಸಲಾಗಿದೆ. ಅದರ ಬೆಲೆ 7 ರೂಪಾಯಿ 93 ಪೈಸೆ ಇದ್ದರೂ ಸರ್ಕಾರದಿಂದ ಸಬ್ಸಿಡೈಸ್ ಮಾಡಿ ಎರಡು ರೂಪಾಯಿ ಪ್ರಕಾರ ಕೊಟ್ಟು ಉಳಿದ ಹಣವನ್ನು ಸರ್ಕಾರ ಕೊಟ್ಟಿದೆ. ಆ ಕಾರಣದಿಂದ ಈ ವರ್ಷದಲ್ಲಿ ಕಾಲು ಬಾಯಿ ಜ್ವರ ದನಗಳಲ್ಲಿ ಕಾಣಿಸಲಿಲ್ಲ. ಈ ರೋಗದಿಂದ ಹಾಲಿನ ಉತ್ಪಾದನೆ ಬಿದ್ದು ಹೋಗಿ ಹೆಚ್ಚಿನ ಜಾನುವಾರುಗಳ ಆರೋಗ್ಯ ಕೆಡುತ್ತಿತ್ತು. ಈ ರೀತಿ ಸಬ್ಸಿಡೈಸ್ ಮಾಡಿ ಈ ರೋಗವನ್ನು ತಡೆಗಟ್ಟುವ ಚುಚ್ಚು ಮದ್ದನ್ನು ಕೊಟ್ಟಿರುವುದು ನಮ್ಮ ಕರ್ನಾಟಕ ರಾಜ್ಯವೊಂದೇ ಎಂದು ಹೇಳಬಹುದು.

ಸರ್ಕಾರದ ಮೂಲಕ ನಡೆಯುತ್ತಿರುವ ಬೆಂಗಳೂರು ಡೈರಿ ರಾಜ್ಯದಲ್ಲಿ ಈ ಹೊತ್ತು ಒಳ್ಳೆಯ ಹಾಲನ್ನು ಒದಗಿಸುತ್ತಿದೆ. ಕಳೆದ ಎರಡು ತಿಂಗಳುಗಳಲ್ಲಿ ಡೆಲ್ಲಿ, ಬೊಂಬಾಯಿ, ಮದ್ರಾಸ್ ಪಟ್ಟಣಗಳಿಗೆ ಹೋಲಿಸಿದರೆ ಬೆಂಗಳೂರಿನಲ್ಲಿ ಗ್ರಾಹಕರಿಗೆ ಬೇಕಾದ ಹಾಲನ್ನು ಒದಗಿಸುವುದಕ್ಕೆ ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚು ಹಾಲನ್ನು ಹಂಚುವ ವ್ಯವಸ್ಥೆಯನ್ನು ಮಾಡಿದೆ ಎಂದು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ತಿಳಿಸಲು ಇಚ್ಛೆಪಡುತ್ತೇನೆ. ಐದನೆಯ ಯೋಜನೆಯಲ್ಲಿ ಧಾರವಾಡ ಮತ್ತು ಇತರ ಕಡೆಗಳಲ್ಲಿ ಡೈರಿಯನ್ನು ಇನ್ನೂ ಹೆಚ್ಚು ಬಲಪಡಿಸಬೇಕೆಂಬ ಉದ್ದೇಶವಿದೆ. ಬೆಂಗಳೂರು ಡೈರಿಯಲ್ಲಿ 50 ಸಾವಿರ ಲೀಟರ್ ಕೆಪಾಸಿಟಿ ಇರುವುದನ್ನು ಒಂದೂವರೆ ಲಕ್ಷ ಲೀಟರ್ ಕೆಪಾಸಿಟಿಗೆ ಹಾಲಿನ ಉತ್ಪಾದನೆಯನ್ನು ಹೆಚ್ಚು ಮಾಡತಕ್ಕ ಯೋಜನೆ ಇದೆ. ಇದಕ್ಕೆ ವಿಶ್ವಬ್ಯಾಂಕ್ ನೆರವನ್ನು ಪಡೆಯಲಾಗುವುದು. ಇದರ ಅಂಗವಾಗಿ ಎರಡು ಸಾವಿರ ಹಾಲು ಉತ್ಪಾದನಾ ಕೇಂದ್ರಗಳಲ್ಲಿ ಬೇಕಾದ ಕಟ್ಟಡ ಮುಂತಾದ ಎಲ್ಲ ಅನುಕೂಲಗಳನ್ನೂ ಕೊಡುವ ವ್ಯವಸ್ಥೆ ಮಾಡಲಾಗುವುದು. ಧಾರವಾಡ, ಮಂಗಳೂರು, ಮೈಸೂರು, ಗುಲ್ಬರ್ಗ ಜಿಲ್ಲೆಗಳಲ್ಲಿ ಈ ವರ್ಷ ರೂರಲ್ ಡೈರಿ ಸೆಂಟರ್ಸ್ ಇರುವುದನ್ನು ಪಕ್ಕಾ ಸೆಂಟರ್ಸ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಬಳ್ಳಾರಿಯಲ್ಲಿ ಒಂದು ಡೈರಿಯನ್ನು ಸ್ಥಾಪನೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ.

ಎಲ್ಲಕ್ಕಿಂತ ಹೆಚ್ಚಾಗಿ ಆನಿಮಲ್ ಫುಡ್ ಕಾರ್ಪೊರೇಷನ್ ಮಾಡಿ ಅದರ ಮೂಲಕ ಬೆಂಗಳೂರು ನಗರದಲ್ಲಿ ಮಾಡರನ್ ಸ್ಲಾಟರ್ ಹೌಸ್, ಕಸಾಯಿ ಖಾನೆ ಮಾಡಲಾಗುವುದು. ಇದನ್ನು ಆಧುನಿಕ ರೀತಿಯಲ್ಲಿ ನಿರ್ಮಾಣ ಮಾಡಲಾಗುವುದು. ಇದಕ್ಕೆ ನಾಲ್ಕೂವರೆ ಕೋಟಿ ರೂಪಾಯಿ ವೆಚ್ಚವಾಗಲಿದೆ. ಈ ಕಸಾಯಿ ಖಾನೆಯನ್ನು ಕೋರಮಂಗಲದ ಬಳಿ ಹಾಕಬೇಕೆಂಬುದಾಗಿ ತೀರ್ಮಾನ ಮಾಡಿದ್ದೇವೆ. ಅದರಲ್ಲಿ ಬೇಕಾದಷ್ಟು ಬೈಪ್ರಾಡಕ್ಟ್ಸ್ ಎಂದರೆ ಬ್ಲಡ್, ಬೋನ್ ಮೀಲ್, ಹೈಡ್ಸ್ ಮುಂತಾದವು ದೊರೆತು ಅದರಿಂದ ಸಾಕಷ್ಟು ವಿದೇಶಿ ವಿನಿಮಯ ಸಿಕ್ಕುತ್ತದೆ. ಇದಲ್ಲದೆ ಸ್ವಚ್ಛವಾದ ಮಾಂಸವನ್ನು ಒದಗಿಸುವುದಕ್ಕೂ ಅನುಕೂಲವಾಗುತ್ತದೆ. ಬನ್ನೂರು ತಳಿಯ ಕುರಿ ಮಾಂಸವನ್ನು ವಿದೇಶಕ್ಕೆ ರಫ್ತು ಮಾಡುವ ಅವಕಾಶವೂ ಇದೆ. ಇದರಿಂದ ಬೇಕಾದಷ್ಟು ಅನುಕೂಲವಾಗಿ ಈ ಉದ್ಯಮ ಲಾಭದಾಯಕವಾಗುತ್ತದೆ. ಗ್ರಾಹಕರಿಗೆ ಸ್ವಚ್ಛವಾದ ಮಾಂಸವನ್ನು ಒದಗಿಸುವುದಕ್ಕೂ ಅನುಕೂಲವಾಗುತ್ತದೆ.

(ಶ್ರೀ ಎನ್. ಚಿಕ್ಕೇಗೌಡ)

ಪಶುಪಾಲನೆ ಹಾಗೂ ಹೈನುಗಾರಿಕೆ ಇವುಗಳಿಗೆ ಬೇಕಾದಷ್ಟು ನವಚೈತನ್ಯ ಮೂಡಿದೆ. ನಮ್ಮ ದೇಶದಲ್ಲಿ ರೈತರು ಹಾಗೂ ಈ ಉದ್ಯಮದಲ್ಲಿ ತೊಡಗಿರುವ ಗೋಪಾಲಕರಿದ್ದಾರೆ. ಕೃಷಿ ಕಾರ್ಮಿಕರಿಗೆ ಇದರಿಂದ ಅನುಕೂಲವಾಗುತ್ತದೆ. ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುತ್ತದೆ. ದೇಶದಲ್ಲಿರತಕ್ಕ ಹಾಲು ಮತ್ತು ಮೊಟ್ಟೆಯ ಕೊರತೆ ನೀಗಿ ಪೌಷ್ಟಿಕವಾದ ಆಹಾರ ಜನರಿಗೆ ಲಭಿಸುತ್ತದೆ. ಆದುದರಿಂದ ತಮ್ಮ ಮುಂದೆ ಇಟ್ಟಿರುವ ಬೇಡಿಕೆಗಳನ್ನು ಎಲ್ಲರೂ ಒಮ್ಮತದಿಂದ ಪಾಸ್ ಮಾಡಬೇಕು. ಅನೇಕ ಸದಸ್ಯರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಸರ್ಕಾರ ಆ ದಿಸೆಯಲ್ಲಿ ಕೆಲಸ ಮಾಡುತ್ತದೆ. ವಿಶ್ವಬ್ಯಾಂಕ್‌ನಿಂದ ಬರತಕ್ಕ ಸಹಾಯವನ್ನು ಪಡೆದು ಅದರ ಮೂಲಕ ಕರ್ನಾಟಕ ರಾಜ್ಯವನ್ನು ಹೈನುಗಾರಿಕೆ ರಾಜ್ಯವನ್ನಾಗಿ ಮಾಡಬೇಕೆಂಬುದು ಸರ್ಕಾರದ ಇಚ್ಛೆ. ಈ ಕೆಲಸವನ್ನು ಒಂದು ವರ್ಷದಲ್ಲಿ ಮಾಡುವುದಕ್ಕಾಗುವುದಿಲ್ಲ, ನಾಲ್ಕಾರು ವರ್ಷ ಬೇಕಾಗುತ್ತದೆ. ಈ ಕಾರ್ಯಕ್ಕೆ ಎಲ್ಲ ಸದಸ್ಯರ ಸಹಕಾರವನ್ನೂ ಕೋರುತ್ತೇನೆ. ಇಷ್ಟು ಹೇಳಿ ಮಾನ್ಯ ಸದಸ್ಯರು ಸಭೆಯ ಮುಂದೆ ಮಂಡಿಸಿರುವ ವ್ಯವಸಾಯ, ಪಶುಪಾಲನೆ, ಡೈರಿ ಉದ್ಯಮ ಮತ್ತು ಸಾಯಿಲ್ ಕನ್‌ಸರ್ವೇಷನ್‌ಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಒಮ್ಮತದ ಅಂಗೀಕಾರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಹೆಸರುಘಟ್ಟ ಫಾರಂನಲ್ಲಿದ್ದ ಜರ್ಸಿ ಮೊದಲಾದ ಜಾತಿಯ ಹಸುಗಳು ಟಿ. ಬಿ. ರೋಗದಿಂದ ಸತ್ತು ಹೋಗಿ ಅದರಿಂದ ಬಹಳ ನಷ್ಟವಾಗಿದೆ ಎಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ಕಾಲದಲ್ಲಿ ಹೇಳಿರುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಇದರ ಬಗ್ಗೆ ತಿಳಿಸಬೇಕು.

ಬೆಂಗಳೂರು ಡೈರಿಯಲ್ಲಿ ಹಿಂದೆ ಅನೇಕ ಲಕ್ಷ ರೂಪಾಯಿ ಬೆಲೆ ಬಾಳುವ ಬೆಣ್ಣೆಯನ್ನು ಸುಟ್ಟರು ಎನ್ನುವ ಮಾತು ಬಂದಿದ್ದು ಅದು ಪಬ್ಲಿಕ್ ಅಕೌಂಟ್ಸ್ ಸಮಿತಿಯವರ ವರದಿಯಲ್ಲಿ ಕೂಡ ನಮೂದಾಗಿದೆ. ಆಗ ಅದರ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದ ಆದಿರಾಜಯ್ಯನವರು ಈಗ ಕಮಿಷನರ್ ಫಾರ್ ಎಕ್ಸೈಜ್ ಆಗಿದ್ದಾರೆ. ಅವರು ಅದಕ್ಕೆ ಹೊಣೆ ಎಂದು ಪಬ್ಲಿಕ್ ಅಕೌಂಟ್ಸ್ ಸಮಿತಿಯ ವರದಿಯಲ್ಲಿ ಹೇಳಿದ್ದಾರೆ. ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಬಿತ್ತನೆ ಬೀಜದ ಬಗ್ಗೆ ಬಹಳ ದೂರುಗಳು ಬರುತ್ತಿವೆ. ಎಲ್ಲೋ ಬೆಳೆದು, ಯಾರೋ ಸರ್ಟಿಫೈ ಮಾಡಿ, ಯಾರೋ ಸ್ಟೋರ್ ಮಾಡಿ ಕೊನೆಗೆ ರೈತನಿಗೆ ಕೊಡುವವರು ಯಾರೋ ಆಗಿದ್ದಾರೆ. ಇದರ ಬಗ್ಗೆ ಅನೇಕ ಸಲ ಪ್ರಸ್ತಾಪ ಮಾಡಲಾಗಿದೆ. ಆಯಾ ಜಿಲ್ಲೆಯಲ್ಲಿ ಬೇಕಾಗಿರತಕ್ಕ ಬಿತ್ತನೆ ಬೀಜವನ್ನು ಅಲ್ಲೇ ಬೆಳೆದು, ಅಲ್ಲೇ ಪ್ರೊಸೆಸ್ ಮಾಡಿ, ಅಲ್ಲಿಯೇ ಸ್ಟೋರ್ ಮಾಡಿ ವಿತರಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಸಲಹೆ ಬಂದಿತ್ತು. ಇದಕ್ಕೆ ಸರ್ಕಾರದ ಅಭಿಪ್ರಾಯವೇನು ? ಇದು ಸೂಕ್ತವಾದ ಸಲಹೆಯಾಗಿರುವುದರಿಂದ ಇದನ್ನು ಈ ವರ್ಷದಿಂದಲೇ ಏಕೆ ಜಾರಿಗೆ ಕೊಡಬಾರದು ?

ಡೈರಿ ಪ್ರಾಜೆಕ್ಟ್ ಇರುವ ಕಡೆ ಕಾಫ್ ಬ್ರೀಡಿಂಗ್, ಮಿಶ್ರ ತಳಿಯ ಕರುಗಳು ಇವುಗಳನ್ನು ವೃದ್ಧಿಪಡಿಸುವ ವಿಚಾರದಲ್ಲಿ ರೈತರಲ್ಲಿ ಪ್ರಚಾರ ಮಾಡುತ್ತೇವೆಂದು ಮಾನ್ಯ ಮಂತ್ರಿಗಳು ಆಶ್ವಾಸನೆಯನ್ನು ಕೊಟ್ಟಿದ್ದರು. ಆ ಯೋಜನೆ ಎಲ್ಲಿಗೆ ಬಂದಿದೆ, ಅದು ಜಾರಿಯಲ್ಲಿ ಇದೆಯೇ ಎನ್ನುವುದನ್ನು ಹೇಳುತ್ತಾರೆಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಕೃಷಿ ವಿಶ್ವವಿದ್ಯಾಲಯದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾವು ಎರಡು ವರ್ಷದಿಂದ ಹೇಳಿದರೂ ಕೂಡ ಈ ಹೊತ್ತಿಗೂ ಕೃಷಿ ವಿಶ್ವವಿದ್ಯಾಲಯದ ಮಾಧ್ಯಮವನ್ನು ಕನ್ನಡದಲ್ಲಿ ಮಾಡಿಲ್ಲ. ಇಂಗ್ಲೀಷಿನಲ್ಲಿಯೇ ವ್ಯವಸಾಯ ಮಾಡುತ್ತಿದ್ದಾರೆ. ಇದನ್ನು ಬದಲಾಯಿಸಿ ಕನ್ನಡದಲ್ಲಿ ರೈತರಿಗೆ ಗೊತ್ತಾಗುವ ಹಾಗೆ ಯಾವಾಗ ಮಾಡುತ್ತಾರೆ ?

ಶ್ರೀ ಎನ್. ಚಿಕ್ಕೇಗೌಡ.—ಶ್ರೀಮಾನ್ ಬಂಗಾರಪ್ಪನವರು ಹೆಸರುಘಟ್ಟದ ಒಂದು ಡೈರಿ ಫಾರಂ ಬಗ್ಗೆ ಪಾರ್ಲಿಮೆಂಟಿನಲ್ಲಿ ಪ್ರಶ್ನೆಗಳು ಬಂದಿರುವುದರ ಬಗ್ಗೆ ಹೇಳಿದರು. ಅದು ನನಗೂ ಪತ್ರಿಕೆಗಳಿಂದ ಗೊತ್ತಾಯಿತು. ಆದರೆ ಇದು ನಮಗೆ ಸಂಬಂಧಪಟ್ಟಿದ್ದಲ್ಲ. ನಮ್ಮ ಫಾರಂಗೆ ಸಮೀಪದಲ್ಲಿ ಕೇಂದ್ರ ಸರಕಾರಕ್ಕೆ ಸೇರಿದ ಒಂದು ಡೈರಿ ಫಾರಂ ಇದೆ. ಇದರಲ್ಲಿ ಆಗಿರಬಹುದು. ಇದೂ ನನಗೆ ಗೊತ್ತಿಲ್ಲ. ನಮ್ಮ ಡೈರಿ ಫಾರಂಗಳಲ್ಲಿರುವ ರಾಸುಗಳ ಬಗ್ಗೆ ಸಾಕಷ್ಟು ಎಚ್ಚರಿಕೆ ವಹಿಸತಕ್ಕ ಕಾರ್ಯಕ್ರಮಗಳನ್ನು ರೋಗ ತಗಲದಂತೆ ಮಾಡಲು ಮಾಡಲಾಗಿದೆ. ಆದರೆ ಕೇಂದ್ರ ಸರಕಾರದ ಫಾರಂ ಬಗ್ಗೆ ನನಗೇನೂ ಸಮಾಚಾರ ಇಲ್ಲ, ಇದರ ಬಗ್ಗೆ ನಾನು ಹೇಳುವುದು

ಸೂಕ್ತವೂ ಅಲ್ಲ. ಇನ್ನು ಮಾನ್ಯ ಸದಸ್ಯರು ಹಿಂದೆ ನಮ್ಮ ಡೈರಿಯಲ್ಲಿ ಬೆಣ್ಣೆಯನ್ನು ಸುಟ್ಟು ಹಾಕಿರುವುದರ ಬಗ್ಗೆ ಪಿ.ಎ.ಸಿ. ಕಮಿಟಿಯವರು ಹೇಳಿದರು ಎಂದು ಇಲ್ಲಿ ತಿಳಿಸಿದರು. ಇದು ಮುಗಿದು ಹೋಗಿರುವ ವಿಚಾರ. ಈಗ ಇದರ ಬಗ್ಗೆ ನನಗೇನೂ ಗೊತ್ತಿಲ್ಲ.

Sri S. BANGARAPPA.—It is a serious matter.

Sri N. CHIKKEGOWDA.—I must say that according to the information that is available with the Government it is a closed chapter. They have gone into the matter and according to my memory......

ಶ್ರೀ ಎಸ್. ಬಂಗಾರಪ್ಪ.—ಅದು ಇದೇ ಸದನದ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಅದರ ಬಗ್ಗೆ ಪರಿಶೀಲನೆ ಮಾಡಿ ಕೊಟ್ಟಿರುವ ವರದಿಯಲ್ಲಿದೆ. ಹಾಗಿದ್ದೂ ಏನೂ ಗೊತ್ತಿಲ್ಲ ಎಂದರೆ ಹೇಗೆ ?

What is the report of the PAC Committee ? It is stated that Sri Adirajiah who was the Managing Director of the Dairy then Should be held responsible. What action has been taken ?

Sri N. CHIKKEGOWDA.—As stated earlier, it was specifically enquired into and the Vigilance Commission has go. e into the matter. They have come to the conclusion that there is no *prima facie* case. The then Direct r of the Dairy was forced to take such action to burn the spoilt butter under the powers vested in him. I have even gone into his statement. ಆಗ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಹೇಳಿದರು ಎಂದು ಇದರ ಬಗ್ಗೆ ಎನ್‌ಕ್ವೈರಿ ಮಾಡಲು ಇದನ್ನು ವಿಜಿಲೆನ್ಸ್ ಕಮಿಷನ್‌ಗೆ ವಹಿಸಿದ್ದರು. ಅವರು ಆಗ ಎಲ್ಲ ಎನ್‌ಕ್ವೈರಿ ಮಾಡಿ ಮುಗಿದು ಹೋದ ವಿಚಾರ ಇದು, ಇದರ ಬಗ್ಗೆ ನಾನು ಈಗ ಹೇಳುವುದು ಇಲ್ಲ. ಇವೆಲ್ಲಾ ಮುಗಿದು ಹೋಗಿವೆ. ಕಳೆದು ಹೋದ ವಿಚಾರಗಳ ಬಗ್ಗೆ ಹೇಳುವುದೇನೂ ಇಲ್ಲ.

ಇನ್ನು ಮಾನ್ಯ ಶ್ರೀ ಹನುಮೇಗೌಡರು ಹೇಳಿದಂತೆ ಉತ್ತಮವಾದ ಬೀಜಗಳನ್ನು ರೈತರಿಗೆ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಹಂಚುವ ಒಂದು ವ್ಯವಸ್ಥೆ ಮಾಡಬೇಕೆಂದು ಇದೆ. ಇದಕ್ಕಾಗಿ ವ್ಯವಸಾಯ ಇಲಾಖೆಯವರು ಎಲ್ಲೆಲ್ಲಿ ಅಗ್ರಿಕಲ್‌ಚರ್ ಫಾರಂಗಳಿವೆಯೋ ಅಲ್ಲಿ ಒಳ್ಳೆಯ ಬೀಜಗಳನ್ನು ಉತ್ಪಾದಪೆ ಮಾಡಿ ರೈತರಿಗೆ ಹಂಚುವ ವ್ಯವಸ್ಥೆ ಮಾಡಬೇಕೆಂದು ಇದ್ದೇವೆ. ಉತ್ತಮವಾದ ಬೀಜಗಳನ್ನು ಟೆಸ್ಟು ಮಾಡಿ ರೈತರಿಗೆ ಹಂಚಬೇಕು ಎಂದು ಇದೆ. ಇದರಿಂದ ರೈತರು ಒಳ್ಳೆಯ ಬೆಳೆ ಮಾಡಲು ಅನುಕೂಲವಾಗುತ್ತದೆ. ಇದರ ಬಗ್ಗೆ ಸರಿಯಾದ ಆದೇಶವನ್ನು ಕೂಡ ಇಲಾಖಾಧಿಕಾರಿಗಳಿಗೆ ಕೊಡಲಾಗಿದೆ. ಒಳ್ಳೆಯ ಬೀಜಗಳನ್ನು ಪಯೋಗಿಸಿ ರೈತರು ಹೆಚ್ಚು ಬೆಳೆ ಬೆಳೆದು ಜನ ಜೀವನವು ಸುಖವಾಗಿರಬೇಕೆಂದು ಒಳ್ಳೆ ಬೀಜಗಳನ್ನು ಉತ್ಪಾದನೆ ಮಾಡಡಲು ತಕ್ಕ ಪ್ರಯತ್ನಗಳನ್ನೆಲ್ಲಾ ಮಾಡಲಾಗುತ್ತಿದೆ ಇದರ ಬಗ್ಗೆ ಮಾನ್ಯ ಸದಸ್ಯರೂ ಸಹಕಾರ ಕೊಡುತ್ತಾರೆಂದು ನಂಬುತ್ತೇನೆ.

ಇನ್ನು ಮಾನ್ಯ ಸದಸ್ಯರಾದ ಶ್ರೀ ಕೋಣಂದೂರು ಲಿಂಗಪ್ಪನವರು ಅಗ್ರಿಕಲ್‌ಚರು ಯುನಿವರ್ಸಿಟಿಯಲ್ಲಿ ಕನ್ನಡದ ಮಾಧ್ಯಮದಲ್ಲಿ ಶಿಕ್ಷಣ ಕೊಡಬೇಕೆಂದು ಹೇಳಿದರು. ಇದರಲ್ಲಿ ಕೆಲವು ಟೆಕ್ನಿಕಲ್ ಟರ್ಮ್ಸ್‌ಗಳು ಬರುತ್ತವೆ. ಇದರಿಂದ ಸೈನ್ಸ್ ಸಬ್‌ಜಕ್ಟ್ಸ್‌ಗಳನ್ನು ಕನ್ನಡದಲ್ಲಿ ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಬೇಕಾದರೆ ಇಂಗ್ಲಿಷು ಹೆಸರನ್ನೇ ಇಟ್ಟುಕೊಂಡು ಕನ್ನಡದಲ್ಲಿ ಹೇಳಿಕೊಡಬಹುದು ಎಂದು ಸಲಹೆ ಮಾಡಿದರು. ಇದನ್ನು ಹೇಗೆ ಮಾಡುವುದು ಎನ್ನುವುದು ನಮಗೆ ಗೊತ್ತಿಲ್ಲ, ಕನ್ನಡ ಮಾಡಬೇಕೆಂದು ಮಾಡಬಹುದು. ಇದನ್ನು ಹಂತ ಹಂತವಾಗಿ ಮಾಡೋಣ. ಕನ್ನಡ ಮಾಧ್ಯಮ ಬೆಳೆಸಬೇಕು, ಕನ್ನಡ ರಾಜ್ಯಭಾಷೆಯಾಗಬೇಕು ಎನ್ನುವುದನ್ನೂ ನಾನೂ ಒಪ್ಪುತ್ತೇನೆ. ನಿಮಗೆ ಎಷ್ಟು ಕನ್ನಡದಲ್ಲಿ ಅಭಿಮಾನ ಇದೆಯೋ ಅದಕ್ಕಿಂತ ಹೆಚ್ಚು ಅಭಿಮಾನ ಕನ್ನಡಕ್ಕೆ ನನಗೆ ಇದೆ. ಇದನ್ನು ಯಾವ ರೀತಿ ಮಾಡಬೇಕೆಂದು ವಿಚಾರ ಮಾಡಿ ಮಾಡಬೇಕಾಗುತ್ತದೆ. ಇಷ್ಟು ಹೇಳಿ ನನ್ನ ಡಿಮ್ಯಾಂಡುಗಳಿಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ಅಧ್ಯಕ್ಷರನ್ನು ವಂದಿಸುತ್ತೇನೆ.

Mr. DEPUTY SPEAKER.—The question is :

"That the respective sums not exceeding the amounts mentioned in the List of Demands be granted to the Government to defray the charges which will come in course of payment during the financial year ending 31st day of March 1975 in respect of Demand Nos. 39, 42, 45 and 46.

The motion was adopted and Demands were voted.

As ordered by the Chair the motion for Demands for Grants adopted by the House are re-produced below :—

Demand No. 39—Agriculture (Excluding Horticulture)

"That a sum not exceeding Rs. 7,76,45,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Agriculture (Excluding Horticulture)."

Demand No. 42—Soil and Water Conservation

"That a sum not exceeding Rs. 3,62,40,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Soil and Water Conservation."

Demand No. 45—Animal Husbandry

"That a sum not exceeding Rs. 3,67,43,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Animal Husbandry."

Demand No. 46—Dairy Development

"That a sum not exceeding Rs. 7,02,87,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of "Dairy Development."

Mr. DEPUTY SPEAKER.—Now the Hon. Minister Sri H. M. Channabasappa will make a statement.